

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 4 : ಸಂಚಿಕೆ – 6 ಸೆಪ್ಟೆಂಬರ್ 2022 ಪುಟ – 40 ₹ 28/-






























ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2022-2023

ಪತ್ರಕರ್ತ ಡಾ. ಬಿ.ಆರ್. ಅಂಬೇಡ್ಕರ್

- ಇಂದಿರಾ ಕೃಷ್ಣಪ್ಪ

ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ.



ಡಾ. ಅಂಬೇಡ್ಕರರು ನಡೆಸಿದ ಚೌದಾರ್ ಕೆರೆ ಆಂದೋಲನ ಹಾಗೂ ಮನುಸ್ಮೃತಿಯ ದಹನ ಚಳುವಳಿಯು ದಲಿತರ ವಿಮೋಚನಾ ಹೋರಾಟದ ಮೈಲಿಗಲ್ಲಾಗಿದೆ. ಇದನ್ನು ಅಂದಿನ ಸವರ್ಣೀಯರು "ಅಂಬೇಡ್ಕರರು, ಭಾರತ ಸ್ವಾತಂತ್ರ್ಯ ಹೋರಾಟದ ವಿರೋಧಿ ಎಂದೂ, ಬ್ರಿಟಿಷರ ಕೈಗೊಂಬೆ ಎಂದೂ", ಬಿಂಬಿಸಲು ಪ್ರಯತ್ನಿಸಿದರು. ಅಂದಿನ ಮೇಲ್ಜಾತಿಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ, "ನಾವು ಹೋರಾಟ ಮಾಡಬೇಕಾಗಿರುವುದು, ವಿದೇಶಿಯರೊಡನೆ ಮಾತ್ರ" ಎಂಬ ಹುಸಿ ನಂಬಿಕೆಯಲ್ಲಿದ್ದರು. ಅವರಿಗೆ ವಿದೇಶಿಯರು ಭಾರತೀಯರ ಸ್ವಾತಂತ್ರ್ಯ ಹರಣ ಮಾತ್ರ ಕಾಣಿಸುತ್ತಿತ್ತೇ ಹೊರತು, ತಾವು ದಲಿತರು, ದಮನಿತರ ಸ್ವಾತಂತ್ರ ಹರಣ ಮಾಡುತ್ತಿರುವುದನ್ನು ಗಮನಿಸಿಕೊಳ್ಳಲೇ ಇಲ್ಲ. ಇದನ್ನು ಅವರು ತಮ್ಮ ಜನ್ಮಸಿದ್ಧ ಹಕ್ಕು ಎಂಬಂತೆ ಪರಿಭಾವಿಸಿಕೊಂಡಿದ್ದರು. ಹಾಗೂ ಬ್ರಿಟಿಷ ರಿಂದ ನೇರವಾಗಿ, ಅಧಿಕಾರವನ್ನು ತಮಗೇ ಹಸ್ತಾಂತರಿಸಿಕೊಳ್ಳುವ ಹುನ್ನಾರವೂ ಅಡಗಿತೆಂಬುದನ್ನು ಸೂಕ್ಷ್ಮವಾಗಿ ಅಂಬೇಡ್ಕರರು ಗಮನಿಸಿದರು. ಹಾಗಾಗಿ, ಮಹಾತ್ಮಾಜಿ ಅಂಬೇಡ್ಕರ ಅವರೊಂದಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯವಿದ್ದರೂ, ಗಾಂಧೀಜಿ ಅವರು ಸಮಸ್ತ ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದನ್ನೂ, ಅಸ್ಪೃಶ್ಯತೆ ನಿವಾರಣೆಯನ್ನು ಕಾಂಗ್ರೆಸ್ ವೇದಿಕೆಗೆ ತಂದಿದ್ದನ್ನು, ಅಂಬೇಡ್ಕರ್ ಅವರು ಅವಲೋಕಿಸಿದ್ದರು. 'ಮನುಸ್ಮೃತಿ ದಹನ'ದ ವಿಷಯವನ್ನು ದೇಶಾದ್ಯಂತ ವಿವಾದ ಸೃಷ್ಟಿಸಿದ ಸಂದರ್ಭದಲ್ಲಿ ಧುಳೆ ಅವರ 'ಪ್ರಭೋದ', ಪೇಣದ 'ಕುಲಾಬಾ ಸಮಾಚಾರ್', ಮುಂಬೈನ 'ರಣ ಗರ್ಜನೆ' ಮತ್ತು 'ಭಾಲಾ' ಹಾಗೂ ಹಲವು ಮರಾಠಿ ಪತ್ರಿಕೆಗಳು, ಅಂಬೇಡ್ಕರ್ ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಬರೆದರು. ಆ ಪತ್ರಿಕೆಗಳು ಅಂಬೇಡ್ಕರ್ ಅವರನ್ನು ಹೀಗೆ ಪ್ರಶ್ನಿಸಿದರು. "ಮನುಸ್ಮೃತಿಯನ್ನು ಸುಟ್ಟು ಅಂಬೇಡ್ಕರರು ಸಾಧಿಸಿದ್ದೇನು?" ಈ ಪ್ರಶ್ನೆಗೆ ಅಂಬೇಡ್ಕರ್ ಅವರು ನೇರವಾಗಿ ಉತ್ತರಿಸಿದ್ದರು. ಅವರ ಪ್ರಶ್ನೆ "ಅಸಹಕಾರ ಚಲುವಳಿಯ ಕಾಲಕ್ಕೆ ವಿದೇಶಿ ಬಟ್ಟೆಗಳನ್ನು ಸುಟ್ಟು ಗಾಂಧಿ ಅವರು ಸಾಧಿಸಿದ್ದೇನು? ಖಾ – ಮಾಲಿನ ವಿವಾಹ ಪ್ರಕರಣದಲ್ಲಿ ಜ್ಞಾನ ಪ್ರಕಾಶನ ಹೇಳಿ ಮಾಡಿದ ಜನರು ಏನನ್ನು ಸಾಧಿಸಿದರು?

ರಾಜಕೀಯ ಸುಧಾರಣೆಗಳ ಕುರಿತು ಮಾತನಾಡಲು ಬಂದ ಸೈಮನ್ ಕಮಿಷನ್ ಮೇಲೆ ಬಹಿಷ್ಕಾರ ಹಾಕಿದ ಹಿಂದೂಗಳು ಏನನ್ನು ಸಾಧಿಸಿದರು? ಮಿಸ್ ಕ್ಯಾಥರಿನ್ ಮೆಯೋ ಅವರ "ಮದರ್ ಇಂಡಿಯಾ" ಕೃತಿಯನ್ನು ನ್ಯೂಯಾರ್ಕ್ ನಗರದಲ್ಲಿ ಹಿಂದೂಗಳು ಸುಟ್ಟು ಸಾಧಿಸಿದ್ದೇನು" ಎಂಬುದಾಗಿತ್ತು. ಈ ಎಲ್ಲಾ ಪ್ರತಿರೋಧಗಳಿಂದ ಏನನ್ನು ಸಾಧಿಸಲು ಹೊರಟಿದ್ದಾರೆಯೋ, ಅದನ್ನೇ ತಾನು ಶೋಷಿತರ ಪರವಾಗಿ ಮಾಡುತ್ತಿದ್ದೇನೆಂಬುದನ್ನು ಬಹಳ ಸ್ಪಷ್ಟವಾಗಿ ಪ್ರಶ್ನಿಸುತ್ತಲೇ ತಿಳಿಸಿದ್ದನ್ನು ಗಮನಿಸಬಹುದಾಗಿದೆ. ಪತ್ರಿಕೆಯ ಮೂಲಕ ಅಸ್ಪೃಶ್ಯರ ಧ್ವನಿಯನ್ನು ಮುನ್ನಲೆಗೆ ತಂದ ಅಂಬೇಡ್ಕರ್ ಅವರನ್ನು ರಾಷ್ಟ್ರೀಯ ಆಂದೋಲನದವರು ಅಂದಿನಿಂದ ತೀವ್ರವಾಗಿ ಗಮನಿಸಲಾರಂಭಿಸಿದರು. ಅಂಬೇಡ್ಕರ್ ಅವರ ಪತ್ರಿಕಾ ಗರ್ಜನೆ ಸಂದರ್ಭದಲ್ಲಿಯೇ ಅಂದಿನ ಪ್ರಮುಖ ಹಿಂದೂ ಸಂಘಟನೆಗಳಾದ ಆರ್ಯ ಸಮಾಜ ಮತ್ತು ಹಿಂದೂ ಮಹಾಸಭಾಗಳೂ ಸ್ಥಾಪನೆಯಾದವು. ಸ್ವಾಮಿ ದಯಾನಂದ ಸರಸ್ವತಿ ಅವರಿಗೆ 'ಹಿಂದೂ ಧರ್ಮದೊಳಗಿನ ಎಲ್ಲಾ ಅನಿಷ್ಠ ಪದ್ಧತಿಗಳನ್ನು ನಿವಾರಣೆ ಮಾಡುವ ಉದ್ದೇಶದಿಂದ ಆರ್ಯ ಸಮಾಜವನ್ನು ಸ್ಥಾಪಿಸಿದ್ದರು. ಮತಾಂತರಗೊಂಡವರನ್ನು ಶುದ್ಧೀಕರಣಗೊಳಿಸಿ, ಮರಳಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವ ಉದ್ದೇಶದಿಂದ ಹಿಂದೂ ಮಹಾಸಭಾವನ್ನು ವಿ.ಡಿ. ಸಾವರ್ಕರ್ ಅವರು ಸ್ಥಾಪಿಸಿದ್ದರು. ಇಂಥಹ ಸಂದರ್ಭದಲ್ಲಿಯೇ, ಭಾರತ ಸ್ವಾತಂತ್ರ್ಯ ಹೋರಾಟ ಮುಖ್ಯವೋ? ಸಾಮಾಜಿಕ–ಧಾರ್ಮಿಕ ಸುಧಾರಣೆ ಮುಖ್ಯವೋ? ಎಂಬ ಜಿಜ್ಞಾಸೆ, ಜ್ವಲಂತ ಪ್ರಶ್ನೆ ಪ್ರಧಾನವಾಯಿತು.

ಈ ಸುಧಾರಣಾವಾದಿ ಸಂಘಟನೆಗಳು, ಹಿಂದೂ ಧರ್ಮದಲ್ಲಿನ ಕ್ರೂರ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸದೆ, ಮೇಲ್‌ಸ್ತರದ ಸುಧಾರಣಾ ಕ್ರಮ ಕೈಗೊಳ್ಳುವುದನ್ನು ಅಂಬೇಡ್ಕರ್ ಅವರು ಗಮನಿಸಿದರು. ಆದ್ದರಿಂದಲೇ ಅವರು 'ಬಹಿಷ್ಕೃತ ಭಾರತ'ದ ನವೆಂಬರ್ 4, 1927ರ ಸಂಚಿಕೆಯಲ್ಲಿ ಹೀಗೆ ಬರೆದರು. "ಈಗ ಇವೆರಡರ ಗೆಳೆತನ ಎಷ್ಟೊಂದು ಗಟ್ಟಿಯಾದ ನೆಲೆಯ ಮೇಲೆ ನಿಂತಿದೆ ಎಂದರೆ, ಅಕ್ಟೋಬರ್ 6ರಂದು ಅಮರಾವತಿಯಲ್ಲಿ ನಡೆದ ಆರ್ಯಧರ್ಮ ಪರಿಷತ್ತಿನ ಸಮ್ಮೇಳನದಲ್ಲಿ ಚಾತುರ್ವರ್ಣ್ಯ ತತ್ವವನ್ನು ಹಿಂದೂಗಳು ಗೌರವದಿಂದ ಸ್ವೀಕರಿಸಬೇಕೆಂಬ ಠರಾವನ್ನು ಪಾಸು ಮಾಡಿದ್ದಲ್ಲದೆ, ಹಿಂದೂ ಮಹಾಸಭೆಯ ಧ್ಯೇಯವೇ ಆರ್ಯ ಸಮಾಜದ ಧ್ಯೇಯವೂ ಆಗಿದೆ ಎಂಬುದಾಗಿಯೂ ಆ ಠರಾವಿನಲ್ಲಿ ಸ್ಪಷ್ಟಪಡಿಸಲಾಯಿತು." ಹಿಂದೂಗಳೆಲ್ಲ ಒಂದು ಎನ್ನುವ ಅದೇ ವಿಚಾರದ ಗರ್ಭದೊಳಗೆ ಇಡೀ ಜಾತಿವ್ಯವಸ್ಥೆಯ ನಿಗೂಢ ಸಮರ್ಥನೆಯೇ ತುಂಬಿರುವುದನ್ನು ಅಂಬೇಡ್ಕರರು ಇಲ್ಲಿ ಬಯಲುಗೊಳಿಸಿದ್ದಾರೆ.

ಮುಂದುವರಿಯುವುದು...



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ

Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು...

ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ವರ್ಷಪೂರ್ಣ ಕಾರ್ಯಕ್ರಮಗಳು, ಶಿಬಿರಗಳು, ವಿಚಾರ ಗೋಷ್ಠಿಗಳು, ಗೌರವಾರ್ಪಣೆಗಳು ಹಾಗೂ ತರಬೇತಿಗಳು ನಡೆದಿವೆ. ಹೀಗಿದ್ದೂ, ವರ್ಷವಿಡೀ ಮತ್ತು ಆಗಸ್ಟ್–ಸೆಪ್ಟಂಬರ್ ತಿಂಗಳಿನಲ್ಲಿ ನೈಸರ್ಗಿಕ ವಿಕೋಪವನ್ನು ಎದುರಿಸಿದ್ದೇ ದೊಡ್ಡ ಸವಾಲೇ ಆಗಿತ್ತು. ಅತಿವೃಷ್ಟಿ, ಪ್ರವಾಹ, ನೆರೆಯಿಂದಾಗಿ ತಗ್ಗು ಪ್ರದೇಶದ ಜನರಷ್ಟೇ ಏಕೆ, ವಿಲ್ಲಾಗಳು, ಬಹುಮಹಡಿ ಕಟ್ಟಡಗಳೂ ಉರುಳಿ ಬೀಳುವ ಭೀಕರತೆಗಳು ಘಟಿಸಿದವು. ಬೆಂಗಳೂರು ಅತಿವೃಷ್ಟಿಯಿಂದ ಶೇ.50%ರಷ್ಟು ಮುಳುಗಿ ಹೋಯಿತೆಂದೇ ಹೇಳಬಹುದು. ಬೆಂಗಳೂರಿನ ಮಂದಿ ನಗರ ಪ್ರದೇಶದಲ್ಲಿಯೇ ದೋಣಿಯಲ್ಲಿ ಓಡಾಡುವ, ಶ್ರೀಮಂತರೂ ಎಲ್ಲಾ ಕಳೆದುಕೊಂಡು ತುತ್ತು ಅನ್ನಕ್ಕೆ ಕೈಚಾಚುವ ಪರಿಸ್ಥಿತಿ ಉಂಟಾಗಿತ್ತು. ಸಮೀಕ್ಷೆಯೊಂದರ ಪ್ರಕಾರ ಈ ಎರಡು ತಿಂಗಳ ರಣಭೀಕರ ಮಳೆಯಿಂದಾಗಿ 7770 ಮನೆಗಳಿಗೆ ನೀರು ನುಗ್ಗಿದ್ದು, 400 ಕಿ.ಮೀ. ರಸ್ತೆ ಹಾನಿಗೀಡಾಗಿದೆ. ಶಾಲೆಗಳು, ಆಸ್ಪತ್ರೆಗಳು ಮತ್ತು ರಸ್ತೆಗಳು, ಸರ್ಕಾರಿ ಕಟ್ಟಡಗಳು ಅಪಾರ ಹಾನಿಗೊಳಗಾಗಿವೆ. ಇದರಿಂದಾಗಿ 400 ಕೋಟಿ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ. ಇದರ ಬಗ್ಗೆ ಸಾಮಾನ್ಯ ಜನರಿಗೂ ತಿಳಿದಿರುವಂತೆ, ರಾಜಕಾಲುವೆ, ಕೆರೆಗಳ ಪ್ರದೇಶಗಳ ಒತ್ತುವರಿಯೇ ಬಹುಮುಖ್ಯ ಕಾರಣವಾಗಿದೆ. ಒಂದು ಕಾಲದಲ್ಲಿ "Cleen City, Green City, Garden City" ಆಗಿದ್ದ ಬೆಂಗಳೂರು "Garbage City" ಆಗಲು ಒತ್ತುವರಿದಾರರು, ಭೂಕಬಳಿಕೆದಾರರು, ಅನಧಿಕೃತ ನಿರ್ಮಾಣಕ್ಕೆ ಅನುಮತಿ ಕೊಡುವ ಅಧಿಕಾರಶಾಹಿ ಪ್ರಧಾನ ಕಾರಣವೆಂಬುದು ಎಲ್ಲರಿಗೂ ತಿಳಿದಿದೆ. ಬೆಂಗಳೂರು ನಿರ್ಮಾತೃ ಕೆಂಪೇಗೌಡರು ವಿಶ್ವ ಪ್ರಸಿದ್ಧ ನಗರವಾಗಿಸಲು ನಿರ್ಮಿಸಿದ ಸುಮಾರು 42 ಕೆರೆಗಳನ್ನು ಅರೆ ಸರ್ಕಾರಿ ಸಂಸ್ಥೆಗಳೇ– ಬಿಡಿಎ, ಬಿಬಿಎಂಪಿ, ಕೆಹೆಚ್‌ಬಿ ಹಾಗೂ ಖಾಸಗಿ ಒತ್ತುವರಿದಾರರಿಂದಾಗಿಯೇ ಸುರಿದ ವರ್ಷಧಾರೆ ನಗರದೊಳಗೆ ನುಗ್ಗಲು ಬಹುಮುಖ್ಯ ಕಾರಣವಾಗಿದೆ. ಸರ್ಕಾರ, ವಿವಿಐಪಿಗಳ ಒತ್ತುವರಿ, ಅರೆಸರ್ಕಾರಿ ಸಂಸ್ಥೆಗಳ ನಿರ್ಮಾಣಗಳನ್ನು ತೆರವುಗೊಳಿಸಲು ತೀವ್ರ ಕ್ರಮಕೊಳ್ಳದ ಹೊರತು ಮತ್ತು ವಿಶೇಷ ತುರ್ತು ಕ್ರಮದ ಹೊರತು ಬೆಂಗಳೂರು, ಮೊದಲಿನ ಸ್ಥಿತಿಗೆ ಬರಲು ಸಾಧ್ಯವಿಲ್ಲವೆಂಬುದನ್ನು ಎಲ್ಲರೂ ಮನಗಾಣುತ್ತಾ, ಸಹಕರಿಸಬೇಕಾಗಿದೆ.

ಭಾರತದ 75 ವರ್ಷಗಳ ಇತಿಹಾಸವನ್ನು ಕಳೆದ ಬಾರಿ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿತ್ತು. ಹಾಗೆ ಒಮ್ಮೆ ಕರ್ನಾಟಕದ 70 ವರ್ಷಗಳ ಹೆಜ್ಜೆಗುರುತುಗಳನ್ನು ವೀಕ್ಷಿಸೋಣ ಬನ್ನಿ. ಕರ್ನಾಟಕದ ವಿಧಾನಸಭೆಯು 1952ರ ಪ್ರಥಮ ಚುನಾವಣೆ ನಂತರ ರಚನೆಯಾಯಿತು. ಕೆಂಗಲ್ ಹನುಮಂತಯ್ಯ ಅವರು ಪ್ರಥಮ ಮುಖ್ಯಮಂತ್ರಿಗಳಾಗಿ 5 ಜನ ಸದಸ್ಯರನ್ನೊಳಗೊಂಡ ಸಂಪುಟ ರಚಿಸಿದರು. ಈ ಸಂಪುಟ ಸಭೆ ಅಠಾರ ಕಚೇರಿಯಲ್ಲಿ ನಡೆದಿತ್ತು. 1956ರ ನವೆಂಬರ್ ಒಂದರಂದು ಕರ್ನಾಟಕ ಏಕೀಕರಣವಾಗಿದ್ದು, ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿಗಳಾಗಿದ್ದರು. ತದ ನಂತರದಲ್ಲಿ, ಕಡಿದಾಳ್ ಮಂಜಪ್ಪ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ್, ದೇವರಾಜ ಅರಸು, ಆರ್. ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಬಂಗಾರಪ್ಪ, ವೀರಪ್ಪ ಮೊಯ್ಲಿ, ಎಚ್.ಡಿ. ದೇವೇಗೌಡ, ಜೆ.ಎಚ್. ಪಟೇಲ್, ಎಸ್.ಎಂ. ಕೃಷ್ಣ, ಧರಂಸಿಂಗ, ಹೆಚ್.ಡಿ. ಕುಮಾರಸ್ವಾಮಿ, ಯಡಿಯೂರಪ್ಪ, ಸದಾನಂದಗೌಡ, ಜಗದೀಶ್ ಶೆಟ್ಟರ್, ಸಿದ್ದರಾಮಯ್ಯ, ಈಗ ಬಸವರಾಜ ಬೊಮ್ಮಾಯಿ ಅವರುಗಳು ಕರ್ನಾಟಕದ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದ್ದಾರೆ. ಕರ್ನಾಟಕವೆಂದು ನಾಮಕರಣ ಮಾಡಿದ ಕೀರ್ತಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ. 1952 ರಿಂದಲೇ ವಿಧಾನಸೌಧ ನಿರ್ಮಾಣ ಕಾರ್ಯ ಆರಂಭವಾಗಿದ್ದು, 1956 ಡಿಸೆಂಬರ್ 19ಕ್ಕೆ ಪೂರ್ಣಗೊಂಡ ಸೌಧದಲ್ಲಿ ಅಧಿವೇಶನ ನಡೆದಿತ್ತು. 70 ವರ್ಷದ ಅವಧಿಯಲ್ಲಿ 4 ಬಾರಿ ರಾಷ್ಟ್ರಪತಿ ಆಡಳಿತ ನಡೆದಿದೆ. ಆರಂಭದಲ್ಲಿ ವಿಧಾನಸಭೆಯಲ್ಲಿ ಇದ್ದ 208 ಸದಸ್ಯರ ಸಂಖ್ಯೆ ಇಂದು 224ಕ್ಕೇರಿದೆ. ರಾಜ್ಯದ ರಾಜ್ಯಪಾಲರಾಗಿ ಪ್ರಥಮವಾಗಿ ಜಯಚಾಮರಾಜೇಂದ್ರ ಒಡೆಯರ್, ನಂತರದಲ್ಲಿ ಎಸ್.ಎಂ. ಶ್ರೀನಾಗೇಶ್, ವಿ.ವಿ. ಗಿರಿ, ಗೋಪಾಲ್ ಸ್ವರೂಪ್ ಪಾಠಕ್, ಧರ್ಮವೀರ, ಮೋಹನ್‌ಲಾಲ್ ಸುಖಾಡಿಯಾ, ಉಮಾಶಂಕರ್ ದೀಕ್ಷಿತ್, ಗೋವಿಂದ ನಾರಾಯಣ್, ಅಶೋಕ್‌ನಾಥ್ ಬ್ಯಾನರ್ಜಿ, ಪಿ. ವೆಂಕಟಸುಬ್ಬಯ್ಯ, ಬಾನುಪ್ರತಾಪ್ ಸಿಂಗ್, ಖುರ್ಷಿದ್ ಆಲಂಖಾನ್, ರಮಾದೇವಿ, ಟಿ.ಎನ್. ಚತುರ್ವೇದಿ, ರಾಮೇಶ್ವರ ಠಾಕೂರ್, ಕೆ. ರೋಸಯ್ಯ, ವಜುಬಾಯಿ ವಾಲಾ ಮತ್ತು ಈಗ ಥಾವರ್ ಚಂದ್ ಗೆಹ್ಲೋಟ್ ಇದ್ದಾರೆ. ವಿಧಾನಸಭೆಯಲ್ಲಿ ಕಾಂಗ್ರೆಸ್, ಬಿ.ಜೆ.ಪಿ, ಜನಾತದಳ, ಸಮಾಜವಾದಿ ಪಕ್ಷ, ರೈತ ಪಕ್ಷ, ಕನ್ನಡಪರ ಪಕ್ಷ, ಕಮ್ಯುನಿಸ್ಟ್ ಪಕ್ಷಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳು, ಸರ್ಕಾರದಲ್ಲಿ ಅತ್ಯುತ್ತಮ ನಿರ್ಣಯಗಳನ್ನು ತೆಗೆದುಕೊಳ್ಳಲು ಸದಾ ಶ್ರಮಿಸಿದ್ದಾರೆ. ವಾಟಾಳ್ ನಾಗರಾಜ್ ಹಾಗೂ ನಾರಾಯಣಕುಮಾರ್ ಅವರು ಕನ್ನಡಪರ ಧ್ವನಿ, ಭೂಪತಿ, ಎಂ.ಎಸ್. ಕೃಷ್ಣನ್, ಸೂರ್ಯನಾರಾಯಣರಾವ್‌ರ ಕಾರ್ಮಿಕರ ಧ್ವನಿ, ನಂಜುಂಡಸ್ವಾಮಿ ಅವರ ರೈತರ ಧ್ವನಿ, ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಧ್ವನಿ ಮೊಳಗಿ, ಅನೇಕ ಸವಾಲುಗಳಿಗೆ ಪರಿಹಾರ ಕಾಣುವಂತಾಗಿತ್ತು.

ಉಳುವವನೇ ಭೂಮಿಯ ಒಡೆಯ, ಪಿ.ಟಿ.ಸಿ.ಎಲ್. ಅಧಿಕಾರ ವಿಕೇಂದ್ರಿಕರಣ, ಲೋಕಾಯುಕ್ತ, ಮಲಹೊರುವ ಪದ್ಧತಿ ನಿಷೇಧ, ಕ್ಯಾಪಿಟೇಷನ್ ಶುಲ್ಕ ರದ್ಧತಿ, ಮೀಸಲಾತಿ, ಸಿಇಟಿ, ನೀರಾವರಿ ಯೋಜನೆಗಳು, ಶಿಕ್ಷಣ ವ್ಯವಸ್ಥೆ, ಸಾಹಿತ್ಯ ಸಾಂಸ್ಕೃತಿಕ, ಸಹಕಾರ, ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಅಪೂರ್ವ ನಿರ್ಣಯಗಳು, ಹಲವು ಯೋಜನೆಗಳು, ಆರ್ಥಿಕ ಭದ್ರತೆ, ಆಡಳಿತ ವ್ಯವಸ್ಥೆಯ ನವೀಕರಣಗಳು, ವಿಧಾನಸಭೆಯ ಸದಸ್ಯರ ಚರ್ಚೆ, ವಿಚಾರ ವಿನಿಮಯದಿಂದ ಫಲಿತವಾಗಿ, ಕರ್ನಾಟಕ ಮುಂದುವರಿದ ರಾಜ್ಯದ ಸಾಲಿನಲ್ಲಿ ನಿಲ್ಲುವಂತಾಗಿದೆ. ಹಾಗೂ ಜಾಗೃತ ಪ್ರಜೆಗಳು, ಸದಾ ಸರ್ಕಾರವನ್ನು ಎಚ್ಚರಿಸುತ್ತಲೇ ಇರುವುದನ್ನು ಗಮನಿಸಬಹುದಾಗಿದೆ.

ಇದೇ ಸಂದರ್ಭದಲ್ಲಿ ಭಾರತದ ಪ್ರಮುಖ ವಿಷಯತಜ್ಞರಾಗಿರುವ, ರಾಮಚಂದ್ರ ಗುಹಾ ಅವರು, ಸ್ವತಂತ್ರ ಭಾರತವನ್ನು ಅರ್ಥೈಸಿಕೊಳ್ಳುವ ಪ್ರಮುಖ 75 ಪುಸ್ತಕಗಳನ್ನು ಗುರ್ತಿಸಿ, ಅದರಲ್ಲಿ 50 ಪುಸ್ತಕಗಳ ಕುರಿತಾಗಿ, ಸಮೀಕ್ಷೆ ಮಾಡುತ್ತಾ, 1947ರ ನಂತರದ ಭಾರತದ ಚರಿತ್ರೆಯನ್ನು ಕಟ್ಟಿಕೊಟ್ಟ "ಸ್ವತಂತ್ರ ಭಾರತದ ಪುಸ್ತಕ ಪಟ್ಟಿ" ಎಂದು ಅವಲೋಕಿಸಿದ್ದಾರೆ. (ಪುಟ 34ರಲ್ಲಿದೆ) ಈ ಲೇಖನದಲ್ಲಿ ದೇಶ ವಿದೇಶ ಮತ್ತು ಭಾರತದ ಲೇಖಕರು ರಚಿಸಿದ ಪುಸ್ತಕಗಳು ಒಳಗೊಂಡಿವೆ. ಆದರೆ ಮಹಾತ್ಮಾಜಿ ಅವರ "ಆತ್ಮಚರಿತ್ರೆ ಅಥವ ನನ್ನ ಸತ್ಯಾನ್ವಾಷಣೆ" ಕೃತಿ ಸೇರ್ಪಡೆ ಮಾಡಿರುವುದಿಲ್ಲ. ಮತ್ತು ಅದಕ್ಕಾಗಿ ಅವರು ಹೇಳಿದ ಕಾರಣ ಒಪ್ಪಿಕೊಳ್ಳುವಂತಿರುವುದಿಲ್ಲ ಇದರ ಬಗ್ಗೆ ಸಕಾರಣವನ್ನು ಜನತೆಯ ಮುಂದಿಡಬೇಕಾಗಿದೆ. ಹೀಗೆ ಪುಸ್ತಕಗಳ ಪಟ್ಟಿ ಸಮೀಕ್ಷೆ, ಶೀಘ್ರ ಓದುಗರಿಗೆ ಮತ್ತು ವಿಷಯ ತಜ್ಞರಿಗೆ, ತೀರಾ ಅಗತ್ಯವಿರುವುದರಿಂದಾಗಿ ಅವರಿಗೆ ಗಾಂಧಿ ಭವನದ ಪರವಾಗಿ ಅಭಿನಂದನೆಗಳು. ಇದೇ ಸಂದರ್ಭದಲ್ಲಿ ಹಿಂದಿ ಭಾಷೆ ಹೇರಿಕೆಯ ತಂತ್ರವನ್ನು; ಎನ್‌ಇಪಿಯ ಮೂಲಕ ಮಾಡುತ್ತಿರುವುದನ್ನು ಕನ್ನಡಿಗರೆಲ್ಲರೂ ಗಮನಿಸಿ, ಇಂಥಹ ವಸಾಹತುಶಾಹಿ ಧೋರಣೆ, ಪ್ರಜಾಪ್ರಭುತ್ವ ವಿರೋಧಿ ನಡೆ, ಕನ್ನಡ ಭಾಷಾ ವಿರೋಧಿ ನೀತಿಯನ್ನು ಒಕ್ಕೊರಲಿನಿಂದ ನಾವೆಲ್ಲರೂ ವಿರೋಧಿಸಬೇಕಿದೆ. ಗಾಂಧೀಜಿ ಅವರು, ಪ್ರಜಾಪ್ರಭುತ್ವ ನೀತಿಯಂತೆ ಸ್ಥಳೀಯ ಭಾಷೆಗೆ ಮಾನ್ಯತೆ ನೀಡಬೇಕೆಂದು ಹೇಳಿದ ಮಾತುಗಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತಾ ಮುನ್ನಡೆಯೋಣ.

ವಂದನೆಗಳು...

ಪ್ರಿಟೋರಿಯಾಕ್ಕೆ ಹೋಗುವಾಗ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸಲಾಗಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ವಕೀಲರು ನನ್ನನ್ನು ಆಕೆಯ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಆಕೆಯೊಡನೆ ಏಕಾಂತವಾಗಿ ಸ್ವಲ್ಪ ಹೊತ್ತು ನನ್ನ ವಿಷಯವನ್ನು ಮಾತನಾಡಿದರು. ನಾನು ವಾರಕ್ಕೆ 35 ಷಿಲಿಂಗ್ ಕೊಡುವುದಾದರೆ ತನ್ನ ಮನೆಯಲ್ಲಿ ಊಟ ಮಾಡಿಕೊಂಡಿರಲು ಆಕೆ ಒಪ್ಪಿದಳು. ಮಿ. ಬೇಕರ್ ಅವರು ವಕೀಲರಾಗಿದ್ದುದು ಮಾತ್ರವಲ್ಲದೆ ಶ್ರದ್ಧಾವಂತರಾದ ಲೌಕಿಕ ಧರ್ಮೋಪದೇಶಕರಾಗಿದ್ದರು. ಅವರು ಇನ್ನೂ ಜೀವಂತರಾಗಿದ್ದಾರೆ. ಈಗ ವಕೀಲಿ ವೃತ್ತಿಯನ್ನು ಪೂರ್ಣವಾಗಿ ಬಿಟ್ಟು, ಕ್ರೈಸ್ತ ಧರ್ಮಬೋಧನೆಯಲ್ಲಿ ಮಾತ್ರ ತೊಡಗಿದ್ದಾರೆ. ಅವರು ಧನಿಕರು. ಈಗಲೂ ನನ್ನೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದ್ದಾರೆ. ಅವರ ಪತ್ರಗಳಲ್ಲಿ ಅವರು ಮತ್ತೆ ಮತ್ತೆ ಅದೇ ವಿಷಯವನ್ನೇ ಪ್ರಸ್ತಾಪಿಸುತ್ತಾರೆ. ಬೇರೆ ಬೇರೆ ದೃಷ್ಟಿಕೋನದಿಂದ ಕ್ರೈ ಸ್ತ ಧರ್ಮದ ಉತ್ಕೃಷ್ಟತೆಯನ್ನು ಪ್ರತಿಪಾದಿಸಿ, ಏಸು ಮಾತ್ರವೇ ದೇವರ ಒಬ್ಬನೇ ಮಗನೆಂದೂ ಮನುಷ್ಯ ಕುಲದ ಉದ್ಧಾರಕನೆಂದೂ ಅವರು ವಾದಿಸುತ್ತಾರೆ.

ನಮ್ಮ ಮೊದಲನೆಯ ಭೇಟಿಯ ಕಾಲದಲ್ಲಿಯೇ ಮಿ. ಬೇಕರು ನನ್ನ ಧಾರ್ಮಿಕ ಅಭಿಪ್ರಾಯಗಳೇನೆಂಬುದನ್ನು ಕೇಳಿದರು. ನಾನು ಹೀಗೆ ಹೇಳಿದೆ. "ನಾನು ಜನ್ಮದಿಂದ ಹಿಂದೂ. ಆದರೆ ನನಗೆ ಹಿಂದೂ ಧರ್ಮದ ವಿಷಯ ಹೆಚ್ಚಾಗಿ ತಿಳಿಯದು. ಇತರ ಧರ್ಮಗಳ ವಿಷಯ ತಿಳಿದಿರುವುದು ಇನ್ನೂ ಕಡಿಮೆ, ಧರ್ಮದ ವಿಷಯದಲ್ಲಿ ನನ್ನ ನಿಲುವೇನು, ನನ್ನ ನಂಬಿಕೆಯೇನು ಏನನ್ನು ನಂಬಬೇಕು ಎಂದು ನನಗೆ ತಿಳಿಯದು. ನನ್ನ ಧರ್ಮವನ್ನೂ ಸಾಧ್ಯವಾದ ಮಟ್ಟಿಗೆ ಇತರ ಧರ್ಮಗಳನ್ನೂ ಕುರಿತು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕೆಂಬುದು ನನ್ನ ಉದ್ದೇಶ." ಇದನ್ನೆಲ್ಲ ಕೇಳಿ ಬೇಕರರಿಗೆ ಸಂತೋಷವಾಯಿತು. ಅವರು ಹೀಗೆ ಹೇಳಿದರು. "ದಕ್ಷಿಣ ಆಫ್ರಿಕಾ ಜನರಲ್ ಮಿಷನ್ನಿನ ಡೈರೆಕ್ಟರುಗಳ ಪೈಕಿ ನಾನೊಬ್ಬ, ನಾನು ನನ್ನ ಸ್ವಂತ ವೆಚ್ಚದಿಂದ ಒಂದು ಚರ್ಚ್ ಕಟ್ಟಿದ್ದೇನೆ. ಅಲ್ಲಿ ಕ್ಲುಪ್ತವಾಗಿ ಧರ್ಮಬೋಧನೆಯನ್ನು ಮಾಡುತ್ತೇನೆ. ನನ್ನಲ್ಲಿ ವರ್ಣದ್ವೇಷವಿಲ್ಲ. ನನ್ನ ಸಹೋದ್ಯೋಗಿಗಳೂ ಕೆಲವರು ಇದ್ದಾರೆ. ನಾವೆಲ್ಲ ಪ್ರತಿದಿನವೂ ಮಧ್ಯಾಹ್ನ ಒಂದು ಗಂಟೆಗೆ ಒಟ್ಟಾಗಿ ಸೇರಿ ಆತ್ಮ ಶಾಂತಿಯನ್ನೂ, ಬೆಳಕನ್ನೂ ಕರುಣಿಸಬೇಕೆಂದು ಕೆಲವು ನಿಮಿಷ, ದೇವರನ್ನು ಪ್ರಾರ್ಥನೆ ಮಾಡುತ್ತೇವೆ. ನೀವು ಅಲ್ಲಿ ಬಂದು ನಮ್ಮ ಜತೆ ಸೇರಿದರೆ ನನಗೆ ಸಂತೋಷ, ನಿಮ್ಮನ್ನು ನನ್ನ ಸಹೋದ್ಯೋಗಿಗಳಿಗೆ ಪರಿಚಯ ಮಾಡಿಸುತ್ತೇನೆ. ನಿಮ್ಮೊಡನೆ ಸೇರಲು ಅವರಿಗೆ ಸಂತೋಷವಾಗುವುದು. ಅವರ ಸಹವಾಸ ನಿಮಗೂ ಇಷ್ಟವಾಗುವುದರಲ್ಲಿ ಸಂದೇಹವಿಲ್ಲ. ನಾನು ನಿಮಗೆ ಓದಲು ಕೆಲವು ಧಾರ್ಮಿಕ ಗ್ರಂಥಗಳನ್ನೂ ಕೊಡುತ್ತೇನೆ. ಆದರೆ ಗ್ರಂಥಗಳಲ್ಲೆಲ್ಲ ಗ್ರಂಥರತ್ನ ಪವಿತ್ರ ಬೈಬಲ್ ಅದನ್ನು ನೀವು ಓದಬೇಕೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ." ನಾನು ಬೇಕರ್‌ರವರನ್ನು ವಂದಿಸಿ, ಸಾಧ್ಯವಾದಷ್ಟು ತಪ್ಪದೆ ಒಂದು ಗಂಟೆಯ ಪ್ರಾರ್ಥನಾ ಸಭೆಗೆ ಹೋಗಲು ಒಪ್ಪಿಕೊಂಡೆ. "ಹಾಗಾದರೆ ನಾಳೆ ಇಲ್ಲಿ ಒಂದು ಗಂಟೆಗೆ ನೀವು ಬರುವುದನ್ನು ನಾನು ಕಾಯುತ್ತಿರುತ್ತೇನೆ. ಇಬ್ಬರೂ ಒಟ್ಟಿಗೆ ಪ್ರಾರ್ಥನೆಗೆ ಹೋಗೋಣ", ಎಂಬುದಾಗಿ ಹೇಳಿ ಅವರು ನನ್ನಿಂದ ಬೀಳ್ಕೊಂಡರು. ಹೆಚ್ಚು ವಿಚಾರ ಮಾಡಲು ನನಗೆ ಅವಕಾಶ ದೊರೆತಿರಲಿಲ್ಲ. ನಾನು ಮಿ. ಜಾನ್‌ಸ್ಟನ್‌ರ ಹೋಟೆಲಿಗೆ ಹೋಗಿ ಅವರಿಗೆ ಕೊಡಬೇಕಾದ ಹಣವನ್ನು ಕೊಟ್ಟು, ನನ್ನ ಸಾಮಾನುಗಳನ್ನು ನನ್ನ ವಸತಿಗೆ ತಂದು ಹಾಕಿಕೊಂಡು, ಊಟವನ್ನು ಪೂರೈಸಿದ. ಮನೆಯ ಯಜಮಾನತಿ ಒಳ್ಳೆಯ ಹೆಂಗಸು. ನನಗಾಗಿ ಆಕೆ ಶಾಕಾಹಾರ ಭೋಜನವನ್ನು ಏರ್ಪಡಿಸಿದ್ದಳು. ಆ ಸಂಸಾರಕ್ಕೆ ಹೊಂದಿಕೊಳ್ಳಲು ನನಗೆ ಹೆಚ್ಚು ಕಾಲ ಹಿಡಿಯಲಿಲ್ಲ.

ಅನಂತರ, ದಾದಾ ಅಬ್ದುಲ್ಲಾರವರು ತಮ್ಮ ಸ್ನೇಹಿತನಿಗಾಗಿ ಕೊಟ್ಟಿದ್ದ ಪತ್ರವನ್ನು ತೆಗೆದುಕೊಂಡು ಅವರನ್ನು ನೋಡಲು ಹೋದೆ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಕಷ್ಟಗಳನ್ನು ಕುರಿತು ಅವರಿಂದ ನನಗೆ ಇನ್ನೂ ಅನೇಕ ವಿಷಯಗಳು ತಿಳಿದುವು. ನಾನು ತಮ್ಮ ಮನೆಯಲ್ಲಿಯೇ ಇರಬೇಕೆಂದು ಅವರು ಬಹಳ ಒತ್ತಾಯ ಮಾಡಿದರು. ನಾನು ಅವರನ್ನು ವಂದಿಸಿ ಆಗಲೇ ಬೇರೆ ಏರ್ಪಾಡು ಮಾಡಿಕೊಂಡಿರುವುದಾಗಿ ತಿಳಿಸಿದೆ. ನನಗೆ ಏನಾದರೂ ಬೇಕಾದರೆ ಅವರನ್ನು ಕೇಳಲು ಸಂಕೋಚ ಪಡಬಾರದೆಂದು ಅವರು ಆಗ್ರಹಪೂರ್ವಕವಾಗಿ ಹೇಳಿದರು. ಈ ವೇಳೆಗೆ ಕತ್ತಲೆಯಾಯಿತು. ಮನೆಗೆ ಹಿಂದಿರುಗಿ ಊಟ ಮುಗಿಸಿ ನನ್ನ ಕೊಠಡಿಯಲ್ಲಿ ಹೋಗಿ ಯೋಚಿಸುತ್ತಾ ಮಲಗಿಕೊಂಡೆ. ನಾನು ಸದ್ಯದಲ್ಲಿಯೇ ಮಾಡಬೇಕಾದ ಕೆಲಸ ಯಾವುದೂ ಇರಲಿಲ್ಲ. ಆ ವಿಚಾರವನ್ನು ಅಬ್ದುಲ್ಲಾ ಸೇಠರಿಗೆ ಬರೆದು ತಿಳಿಸಿದೆ. ಬೇಕರರಿಗೆ ನನ್ನಲ್ಲಿ ಇಷ್ಟೊಂದು ಮಿತ್ರತ್ವವುಂಟಾಗಿರುವ ಅರ್ಥವೇನು, ಕ್ರೈಸ್ತ ಧರ್ಮವನ್ನು ನಾನು ಎಷ್ಟರ ಮಟ್ಟಿಗೆ ಅಭ್ಯಾಸ ಮಾಡಬಹುದು, ನನ್ನ ಸ್ವಂತ ಧರ್ಮವನ್ನು ಚೆನ್ನಾಗಿ ತಿಳಿದುಕೊಂಡ ಹೊರತು ಕ್ರೈಸ್ತ ಧರ್ಮವನ್ನು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವೆ ಎಂದೆಲ್ಲ ಯೋಚಿಸಿ ಕೊನಗೆ ಒಂದು ತೀರ್ಮಾನಕ್ಕೆ ಬಂದೆ. ನಾನು ನಿಷ್ಪಕ್ಷಪಾತವಾಗಿ ಎಲ್ಲದರ ವ್ಯಾಸಂಗವನ್ನೂ ಮಾಡಬೇಕು. ಅನಂತರ ಬೇಕರರ ಗುಂಪಿನೊಂದಿಗೆ ಪರಮಾತ್ಮನ ಪ್ರೇರಣೆ ಪಡೆಯಬೇಕು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಕ್ಷೇಪಣೆಗಳ ವಿಚಾರ:

ಟೀಕಾಕಾರರು ಹೇಳುತ್ತಾರೆ, ರಾಟೆ ಇನ್ನೂ ರೂಢಿ ಆಗಿಲ್ಲ. ಅದರಲ್ಲಿ ಸಾಕಷ್ಟು ಹುರುಪು ಹೆಚ್ಚಿಸುವ ಗುಣ ಅಥವಾ ಭಾವೋದ್ದೀಪಕತೆ ಇಲ್ಲ. ಹೆಂಗಸರಿಗೆ ಮಾತ್ರ ಈ ಉದ್ಯೋಗ ಸರಿಹೋದೀತು; ಹೀಗೆ ಮಾಡುವದರಿಂದ ಮತ್ತೆ ನಾವು ಮಧ್ಯಯುಗಕ್ಕೆ ಹೋದಂತೆ ಆಗುತ್ತದೆ. ಯಂತ್ರವು ವಿಜ್ಞಾನದ ವೈಭವೋಪೇತ ಪ್ರಗತಿಯ ದ್ಯೋತಕವಾಗಿದೆ. ಅದರ ವಿರುದ್ಧ ರಾಟೆಯನ್ನು ತರುವದು ವ್ಯರ್ಥಪ್ರಯತ್ನ, ಇತ್ಯಾದಿ. ಆದರೆ ನನ್ನ ಅಭಿಪ್ರಾಯದಲ್ಲಿ ಭಾರತಕ್ಕೆ ಭಾವೋದ್ದೀಪಕತೆ ಬೇಕಾಗಿಲ್ಲ. ಗಟ್ಟಿಯಾದ ಕೆಲಸ ನಮ್ಮ ಜನಕೋಟಿಗೆ ಬೇಕು. ಗಟ್ಟಿಕೆಲಸ ಭಾವೋದ್ದೀಪಕವೂ ಹೌದು, ಪುಷ್ಟಿಕರವೂ ಹೌದು. ರಾಟೆಯ ಪ್ರಯೋಗಕ್ಕೆ ನಾವಿನ್ನೂ ಸಾಕಷ್ಟು ಅವಕಾಶಕೊಟ್ಟಿಲ್ಲ. ನಮ್ಮಲ್ಲಿ ಅನೇಕರು ಸಾಕಷ್ಟು ಆಳವಾಗಿ ಅದರ ಬಗ್ಗೆ ವಿಚಾರವನ್ನೇ ಮಾಡಿಲ್ಲ. ಹೀಗೆನ್ನುವಾಗ ನನಗೆ ದುಃಖವಾಗುತ್ತದೆ. ಕೈನೂಲಿನ ಬಗ್ಗೆ ಆಗಾಗ ಕೆಲವು ತೀರ್ಮಾನಗಳು ಆಗಿವೆ. ಅದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರೇ ಕಾರ್ಯಗತಗೊಳಿಸಿಲ್ಲ. ನಮ್ಮಲ್ಲಿ ಬಹುಜನಕ್ಕೆ ಅದರಲ್ಲಿ ನಂಬಿಕೆಯೇ ಇಲ್ಲ. ಪರಿಸ್ಥಿತಿ ಹೀಗಿರುವಾಗ ಕೈನೂಲಿನ ಕೆಲಸದಲ್ಲಿ ಚೈತನ್ಯಗೊಳಿಸುವ ಶಕ್ತಿ ಇಲ್ಲದ ಮೂಲಕ ಅದು ವಿಫಲವಾಯಿತು ಎಂದು ಹೇಳುವುದು ನ್ಯಾಯಸಂಗತವಲ್ಲ. ಕೇವಲ ಮುದುಕರ ಉದ್ಯೋಗ ಇದು ಎನ್ನುವುದು ನಿಜಾಂಶಗಳನ್ನು ಅಲಕ್ಷಿಸಿದಂತೆ. ನೂಲಿನ ಗಿರಣಿ ಬೇರೆ ಏನೂ ಅಲ್ಲ. ಅದು ಅನೇಕ ರಾಟೆಗಳನ್ನು ಒಟ್ಟುಗೂಡಿಸಿದಂತೆ ಅವನ್ನು ಗಂಡಸರೇ ನಡೆಸುತ್ತಾರೆ. ಗಂಡಸಿನ ಯೋಗ್ಯತೆಗೆ ಕೆಲವು ಕೆಲಸ ತಕ್ಕುವಲ್ಲ ಎಂಬ ಈ ಭ್ರಾಂತಿ ಹೋಗಬೇಕಾದ ಕಾಲ ಈಗ ಬಂದಿದೆ. ಸಾಧಾರಣ ಪರಿಸ್ಥಿತಿಯಲ್ಲಿ ಕೈನೂಲಿನ ಉದ್ಯೋಗವು ಮಹಿಳೆಯರದೇ ನಿಜ. ಆದರೆ ಮುಂದಿನ ರಾಜ್ಯ ಕೆಲವು ಗಂಡಸರನ್ನು ಯಾವಾಗಲೂ ರಾಟೆಯ ಉದ್ಯೋಗದಲ್ಲಿ ತೊಡಗಿಸಿಯೇ ಇರಬೇಕಾಗುತ್ತದೆ. ಇದು ಗೃಹೋದ್ಯೋಗ. ಆ ಚೌಕಟ್ಟಿನೊಳಗೆಯೇ ಸುಧಾರಣೆಗಳನ್ನು ಅವರು ಮಾಡಬೇಕು. ಈಗ ರಾಟೆಯಲ್ಲಿ ಆಗಿರುವ ಸುಧಾರಣೆಯ ಗಂಡಸರು ನಾವು ಕೆಲವರು ಅದನ್ನು ತಿರುಗಿಸದೇ ಇದ್ದಿದ್ದರೆ, ಅದರ ಬಗ್ಗೆ ಹಗಲೂ ರಾತ್ರಿಯೂ ಯೋಚಿಸದೇ ಇದ್ದಿದ್ದರೆ ಸಾಧ್ಯವಾಗುತ್ತಿರಲಿಲ್ಲ.

ಯಂತ್ರಗಳು:

ಯಂತ್ರಗಳ ವಿಷಯದಲ್ಲಿ ನನ್ನವು ಎಂದು ಹೇಳಲಾದ ಅಭಿಪ್ರಾಯಗಳನ್ನು ನೀವು ನಿಮ್ಮ ಮನಸ್ಸಿನಿಂದ ತೆಗೆದುಹಾಕಬೇಕೆಂದು ನನ್ನ ಅಪೇಕ್ಷೆ. ಯಾವ ಪ್ರಕಾರ ನಾನು ಸಮಗ್ರ ಅಹಿಂಸಾ ಸಿದ್ಧಾಂತವನ್ನು ರಾಷ್ಟ್ರವು ಸ್ವೀಕರಿಸಬೇಕೆಂದು ಹೇಳುತ್ತಿಲ್ಲವೋ ಅದೇ ಪ್ರಕಾರ, ಯಂತ್ರಗಳ ಬಗ್ಗೆ ಸಹ ನನ್ನ ಅಭಿಪ್ರಾಯಗಳೆಲ್ಲವನ್ನೂ ರಾಷ್ಟ್ರವು ಒಪ್ಪಿಕೊಳ್ಳಬೇಕೆಂದು ಪ್ರಯತ್ನಿಸುತ್ತಿಲ್ಲ. ರಾಟೆಯೇ ಒಂದು ಸೊಗಸಾದ ಯಂತ್ರ. ಇದನ್ನು ಕಂಡುಹಿಡಿದ ಆ ಅಜ್ಞಾತ ಶೋಧಕನಿಗೆ ಗೌರವಪೂರ್ಣವಾಗಿ ನನ್ನ ತಲೆ ಪ್ರತಿನಿತ್ಯವೂ ಬಾಗುತ್ತದೆ. ನನಗಿರುವ ಅಸಮಾಧಾನ ಒಂದರ ಬಗ್ಗೆಯೇ. ನಮ್ಮ ದೇಶ ಬಹಳ ವಿಸ್ತಾರವಾದುದು. 1900 ಮೈಲಿ ಉದ್ದ 1500 ಮೈಲಿ ಅಗಲ, ಇದರಲ್ಲಿ ಅಲ್ಲಿ ಇಲ್ಲಿ ಎಲ್ಲೆಲ್ಲೋ ದೂರ ದೂರ ಹರಡಿರುವ ಸಾವಿರಾರು ಮನೆಗಳಲ್ಲಿ ಹಸಿವಿನ ಬಾಧೆ ತಗಲದಂತೆ ಕಾಪಾಡಲು ಆಧಾರವಾದ ಈ ಒಂದೇ ಒಂದು ಗೃಹ ಉದ್ಯೋಗವನ್ನು ಉದ್ದೇಶಪೂರ್ವಕವಾಗಿ ನಾಶಗೊಳಿಸಿದರು. ಅದರ ಬಗ್ಗೆ ನನಗೆ ಅಸಮಾಧಾನ.

ನೂಲಿನ ಮತಾಧಿಕಾರ:

ರಾಟೆಯ ಬಗ್ಗೆ ನನಗಿರುವ ಈ ಅನುರಾಗವನ್ನು ನೋಡಿ, ಅಥವಾ ನಮ್ಮ ಚುನಾವಣೆಯ ಮತಾಧಿಕಾರದಲ್ಲಿ ಇದನ್ನು ಸೇರಿಸುವ ಸಾಹಸವನ್ನು ನೋಡಿ ಈಗ ನಿಮಗೆ ಆಶ್ಚರ್ಯವಾಗದು. ಪಂಡಿತ್ ಮೋತಿಲಾಲ ನೆಹರು ಹಾಗೂ ದೇಶಬಂಧು ದಾಸರು ಪಕ್ಷದ ಪರವಾಗಿ ಇದನ್ನು ಏಕೆ ಒಪ್ಪಿಕೊಂಡರು ಎಂಬ ಬಗ್ಗೆಯೂ ನಿಮಗೆ ಆಶ್ಚರ್ಯವಾಗದು. ನನ್ನ ಮಾತೇ ನಡೆಯಬೇಕು ಎಂದಿದ್ದರೆ, ಕಾಂಗ್ರೆಸ್ಸಿನ ಪಟ್ಟಿಯಲ್ಲಿ ನೂಲಲು ಇಷ್ಟ ಇಲ್ಲದವರು ಅಥವಾ ಯಾವಾಗಲೂ ಖಾದಿಯನ್ನು ಧರಿಸದವರು ಒಬ್ಬರೂ ಇರುತ್ತಿರಲಿಲ್ಲ. ಸ್ವರಾಜ್ಯ ಪಕ್ಷವು ಎಷ್ಟು ಒಪ್ಪಿಕೊಂಡಿದೆಯೋ ಅಷ್ಟಕ್ಕೆ ನಾನು ಕೃತಜ್ಞ. ಈ ತಿದ್ದುಪಡಿಯಾಗಲೀ ಸುಧಾರಣೆಯಾಗಲೀ ನಮ್ಮ ದೌರ್ಬಲ್ಯಕ್ಕೆ ಅಥವಾ ಶ್ರದ್ಧಾಹೀನತೆಗೆ ಒಂದು ರಿಯಾಯಿತಿ. ಆದರೆ ಯಾರಿಗೆ ರಾಟೆಯಲ್ಲಿ ಖಾದಿಯಲ್ಲಿ ಪೂರ್ಣ ನಂಬಿಕೆ ಇದೆಯೋ ಅವರಿಗೆ ಇದರಿಂದ ಹೆಚ್ಚು ಸ್ಫೂರ್ತಿ ಬರುವಂತೆ ಆಗಬೇಕು.

ಮುಂದುವರಿಯುವುದು...

ಭಾರತವು ಮಾನವ ಜನಾಂಗದ ತೊಟ್ಟಿಲು, ಮಾನವ ಮಾತಿನ ಜನ್ಮಸ್ಥಳ, ಇತಿಹಾಸದ ತಾಯಿ, ದಂತಕಥೆಯ ಅಜ್ಜಿ ಮತ್ತು ಸಂಪ್ರದಾಯದ ಮುತ್ತಜ್ಜಿ. ಮಾನವನ ಇತಿಹಾಸದಲ್ಲಿ ನಮ್ಮ ಅತ್ಯಮೂಲ್ಯ ಮತ್ತು ಬೋಧಪ್ರದ ವಸ್ತುಗಳು ಭಾರತದಲ್ಲಿ ಮಾತ್ರ ನಿಧಿಯಾಗಿವೆ.

ಅಂದಿನ ಪತ್ರಿಕಾ ವರದಿಗಳಲ್ಲಿ ಬಾಬು ಜಗಜೀವನರಾಮ್

(05.04.1908–06.07.1986)

– ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಭೂ ಸಂಗ್ರಹಣ ಕುರಿತು ಶ್ರೀ ಜಗಜೀವನರಾಮ್ : 1894ರ ಭೂ ಸಂಗ್ರಹಣ ಕಾಯಿದೆಯ ಮೇಲೆ ಭೂ ಸಂಗ್ರಹಣ ಪುನರ್ ಪರಿಶೀಲನಾ ಸಮಿತಿಯ ವರದಿ, ನವದೆಹಲಿ, ಆಹಾರ ಮತ್ತು ಕೃಷಿ, ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಸಚಿವಾಲಯ ಆಹಾರ ಮತ್ತು ಕೃಷಿ ಸಚಿವ ಶ್ರೀ ಜಗಜೀವನರಾಮ್ ಅವರಿಗೆ ವರದಿಯನ್ನು ಸಲ್ಲಿಸುತ್ತಾ ಸಮಿತಿಯ ಅಧ್ಯಕ್ಷ ಶ್ರೀ ಆನಂದ ನಾರಾಯಣ ಮುಲ್ಲಾ ಹೀಗೆ ಬರೆಯುತ್ತಾರೆ.

'ನಾನು ಅತ್ಯಂತ ಸಂತೋಷದಿಂದ ಈ ವರದಿಯನ್ನು ತಮಗೆ ಸಲ್ಲಿಸುತ್ತಿದ್ದೇನೆ. ಸಾಕ್ಷಿಗಳನ್ನು ಪರಿಶೀಲಿಸುವಾಗ ಅಥವಾ ಸಮಸ್ಯೆಗಳನ್ನು ನಮ್ಮ ನಮ್ಮಲ್ಲೇ ಚರ್ಚಿಸುವಾಗ ಹಲವು ಮುಖ್ಯ ಗುರಿಗಳು ಮತ್ತು ಮೂಲಭೂತ ಮೌಲ್ಯಗಳು ನನ್ನ ಆಲೋಚನೆಯ ಮೇಲೆ ಮತ್ತೆ ಮತ್ತೆ ದಾಳಿ ಮಾಡಿದವು. ಮತ್ತು ನನ್ನ ಅಭಿಪ್ರಾಯಗಳಿಗೆ ದಾರಿ ತೋರಿದವು"

ಆಹಾರ ಮತ್ತು ಕೃಷಿ ಕುರಿತು ಶ್ರೀ ಜಗಜೀವನರಾಮ್ : ದೇಶದ ಆಹಾರ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಆಹಾರ ಮತ್ತು ಕೃಷಿ ಸಚಿವ ಜಗಜೀವನರಾಮ್ ನೇತೃತ್ವದಲ್ಲಿ ಏಪ್ರಿಲ್ 8ರಂದು ಏರ್ಪಡಿಸಿದ್ದ ರಾಜ್ಯ ಮುಖ್ಯಮಂತ್ರಿಗಳು ಮತ್ತು ಆಹಾರ ಸಚಿವರ 2 ದಿನಗಳ ಸಮಾವೇಶವನ್ನು ಪ್ರಧಾನಮಂತ್ರಿ ಉದ್ಘಾಟಿಸಿದರು.

ಫೋಟೋ ಫ್ಲಾಷ್, ನವದೆಹಲಿ, ಏಪ್ರಿಲ್ 1967

ಕೇಂದ್ರದ ಆಹಾರ ಕೃಷಿ, ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಸಚಿವ ಶ್ರೀ ಜಗಜೀವನರಾಮ್ ಅವರು ಜನವರಿ 20 1968ರಂದು ಉದಯಪುರದ ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡುತ್ತಾ 'ಈಸ್ಟ್ ಇಂಡಿಯಾ ಕಂಪನಿಯ ಆಡಳಿತಾವಧಿಯಲ್ಲಿ 1770, 1784, 1802, 1824 ಮತ್ತು 1837ರಲ್ಲಿ ತೀವ್ರವಾದ ಕ್ಷಾಮ ಕಾಣಿಸಿಕೊಂಡಿತ್ತು ಮತ್ತು ಬ್ರಿಟಿಷ್ ಸರ್ಕಾರದ ಆಡಳಿತ ಕಾಲದಲ್ಲಿ 1860ರಲ್ಲಿ ವಾಯುವ್ಯಭಾರತದಲ್ಲಿ 1865ರಲ್ಲಿ 'ಒರಿಸ್ಸಾದಲ್ಲಿ, 1868ರಲ್ಲಿ ರಾಜಸ್ಥಾನದಲ್ಲಿ 1873ರಲ್ಲಿ ಬಿಹಾರದಲ್ಲಿ ಮತ್ತು 1876ರಲ್ಲಿ ದಕ್ಷಿಣ ಭಾರತದಲ್ಲಿ ಹಾಗೂ 1896ರಲ್ಲಿ, 1899ರಲ್ಲಿ ಇಡೀ ರಾಷ್ಟದಲ್ಲಿ ಬರ ಆವರಿಸಿತ್ತು. 1876ರಲ್ಲಿ ಕ್ಷಾಮವನ್ನು ಅನುಸರಿಸಿ ಒಂದು ಕ್ಷಾಮ ಸಮಿತಿಯನ್ನು ರಚಿಸಲಾಯಿತು ಮತ್ತು ಆ ಪ್ರಥಮ ಸಮಿತಿ ವರದಿಯನ್ನು ಆಧರಿಸಿ ಕೃಷಿ ಇಲಾಖೆ ಸ್ಥಾಪಿಸಲಾಯಿತು. ನಮ್ಮ ಕೃಷಿ ದೀರ್ಘಕಾಲ ಸ್ಥಗಿತಗೊಂಡಿದ್ದರಿಂದ ಮತ್ತು ಕೃಷಿ ಉತ್ಪನ್ನ ಸಂಪೂರ್ಣವಾಗಿ ನೈಸರ್ಗಿಕ ಅಂಶಗಳನ್ನು ಅವಲಂಭಿಸಿದ್ದರಿಂದ ಈ ಹಿಂದೆ ಆಗಾಗ್ಗೆ ಆಹಾರಧಾನ್ಯದ ಕೊರತೆಯುನ್ನು ಎದುರಿಸಬೇಕಾಯಿತು. 1947ರ ನಂತರ ಕೃಷಿಯಲ್ಲಿ ಬಹಳ ದೊಡ್ಡ ಬದಲಾವಣೆಗಳು ಕಾಣಿಸಿಕೊಂಡವು. ನೀರಾವರಿ ಸೌಕರ್ಯಗಳ ಅಭಿವೃದ್ಧಿಯಿಂದಾಗಿ ಕೃಷಿಯು ಮುಂಗಾರನ್ನು ಅವಲಂಭಿಸುವುದು ಕಡಿಮೆಯಾಗುತ್ತಾ ಬಂತು. ಭೂ ಫಲವತ್ತತೆಯನ್ನು ಉಳಿಸಲು, ಶ್ರೀಮಂತಗೊಳಿಸಲು ಮತ್ತು ಕೀಟಗಳಿಂದ, ರೋಗಗಳಿಂದ ಬೆಳೆಗಳಿಗೆ ಉಂಟಾಗುವ ಹಾನಿಯನ್ನು ತಡೆಗಟ್ಟಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ" ಎಂದರು.

1968ರ ಫೆಬ್ರವರಿ 3ರಂದು ಹೈದರಾಬಾದಿನ ರಾಜೇಂದ್ರನಗರದ ಆಂಧ್ರ ಪ್ರದೇಶ ಕೃಷಿ ವಿಶ್ವವಿದ್ಯಾಲಯದ 3ನೇ ಘಟಿಕೋತ್ಸವ ಭಾಷಣದಲ್ಲಿ ಕೃಷಿ ಮತ್ತು ಆಹಾರ ಸಚಿವ ಶ್ರೀ ಜಗಜೀವನರಾಮ್ ಅವರು 'ಕೃಷಿ ವಿಶ್ವವಿದ್ಯಾಲಯದ ಮುಖ್ಯಗುರಿ ಎಂದರೆ ಶಿಕ್ಷಣ. ಸಂಶೋಧನೆ ಮತ್ತು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಮಟ್ಟದಲ್ಲಿ ಸಮನ್ವಯವೊಂದನ್ನು ಸಾಧಿಸುವುದೇ ಆಗಿದೆ. ಈ ತತ್ವದ ಹಿಂದಿರುವ ಗ್ರಹಿಕೆಯೆಂದರೆ, ಶಿಕ್ಷಕ ಪರಿಣಾಮಕಾರಿ ಯಾಗಬೇಕಾದರೆ, ಸಂಶೋಧನೆಯಲ್ಲಿನ ಆಸಕ್ತಿಯ ಜೊತೆಗೆ ಅನುಭವ ವೈಶಾಲ್ಯವು ಇರಬೇಕಾಗುತ್ತದೆ ಎಂಬುದು' ಎಂದರು.

1968ರ ಜುಲೈ 17ರಂದು ನವದೆಹಲಿಯಲ್ಲಿ ನಡೆದ 'ಬಡತನದಿಂದ ವಿಮುಕ್ತಿ' ಆಂದೋಲನದ 3ನೇ ರಾಷ್ಟ್ರೀಯ ಪ್ರಚಾರ ಸಮಿತಿಯಲ್ಲಿ ಆಹಾರ ಮತ್ತು ಕೃಷಿ ಮಂತ್ರಿ ಶ್ರೀ ಜಗಜೀವನರಾವ್ ಅವರು 'ಈ ಸಂಘಟನೆಯ ಉದ್ದೇಶವೆಂದರೆ ತೀವ್ರ ಆಹಾರ ಕೊರತೆಯನ್ನು ಎದುರಿಸುತ್ತಿರುವ ರಾಷ್ಟ್ರಗಳು ಸಹಾಯ ಮಾಡುವ ಸ್ಥಿತಿಯಲ್ಲಿರುವ ರಾಷ್ಟ್ರಗಳಿಂದ ಒಳ್ಳೆಯ ಬೆಂಬಲವನ್ನು ಗಳಿಸುವುದೇ ಆಗಿದೆ. ಈಗ ಈ ಪರಿಕಲ್ಪನೆಯಲ್ಲಿ ಸಾಕಷ್ಟು ಬದಲಾವಣೆ ಕಂಡುಬಂದಿದೆ. ನಿರ್ದಿಷ್ಟವಾಗಿ ಭಾರತದಲ್ಲಿ ಈ ಆಂದೋಲನವು ಹಲವಾರು ರಾಷ್ಟ್ರ ಸಂಘಟನೆಗಳಿಂದ ಬಹುಮಾನ, ಬೆಂಬಲಗಳ ಸಹಾಯದಿಂದ ಗೃಹ ಕೃತ್ಯದ ಆಹಾರೋತ್ಪನ್ನಗಳನ್ನು ಪಡೆಯುವ ಪ್ರಯತ್ನವಾಗಿದೆ' ಎಂದರು.

1968ರ ಜನವರಿ 2ನೆಯ ತಾರೀಖಿನಂದು, ಪುಣೆಯ ಕೃಷಿ ಕಾಲೇಜಿನ ವಜ್ರಮಹೋತ್ಸವದಲ್ಲಿ ಮಾತನಾಡುತ್ತಾ ಕೃಷಿ ಮತ್ತು ಆಹಾರ ಸಚಿವ ಶ್ರೀ ಜಗಜೀವನರಾಮ್ ಅವರು, 'ಆಹಾರದಲ್ಲಿ ಸ್ವಾವಲಂಬನೆ ಸಾಧಿಸದೆ ಬಿಡಿ ರಾಷ್ಟವು ಪ್ರಗತಿ ಹೊಂದಲು ಸಾಧ್ಯವಿಲ್ಲ' ಎಂದರು.

ನವದೆಹಲಿಯ ವಿಠಲ್‌ಬಾಯಿಪಟೇಲ್ ಹೌಸಿನಲ್ಲಿ, 1968ರ ಫೆಬ್ರವರಿ 22ರಂದು ನಡೆದ ತೀವ್ರ ಕೃಷಿ ಜಿಲ್ಲಾ ಕಾರ್ಯಕ್ರಮದ ಉದ್ಯೋಗಿಗಳ 7ನೇ ಕೇಂದ್ರೀಯ ಸಮಾವೇಶವನ್ನು ಉದ್ಘಾಟಿಸುತ್ತಾ ಕೃಷಿ ಮತ್ತು ಆಹಾರ ಸಚಿವ ಶ್ರೀ ಜಗಜೀವನರಾಮ್‌ರವರು 'ಪ್ರಸ್ತುತ – ವರ್ಷದ ಪ್ರಖರ ದೂರದೃಷ್ಟಿಯ ಆಹಾರೋತ್ಪಾದನೆಯು ನಮ್ಮ ದೇಶದ ಆರ್ಥಿಕತೆಯನ್ನು ಕುರಿತು ವಿಶ್ವಾಸ ಮತ್ತು ಆಶಾಕಿರಣದ ವಾತಾವರಣವನ್ನು ಸೃಷ್ಟಿಸಿದೆ. ಈ ಗುರಿಯನ್ನು ಸಾಧಿಸುವಲ್ಲಿ ಹೊಸದಾಗಿ – ಪ್ರಾರಂಭಿಸುವ ತರಬೇತಿ ಮತ್ತು ಶಿಕ್ಷಣದ ಕಾರ್ಯಕ್ರಮಗಳು ರೈತರಿಗೆ ಸಹಾಯವಾಗುತ್ತದೆ' ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಮುಂದುವರಿಯುವುದು...

ಕೋಮು ಸೌಹಾರ್ದ



– ಡಾ. ಹೆಚ್.ಎಸ್. ದೊರೆಸ್ವಾಮಿ


(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ದೇಶದಲ್ಲಿ ಹಿಂಸೆ ಹೆಚ್ಚುತ್ತಿದೆ

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿ ಅಹಿಂಸೆಗೆ ಒತ್ತುಕೊಟ್ಟು ಸಮಾಜದಲ್ಲಿ ಹಿಂಸೆ ಬೆಳೆಯದಿರುವುದಕ್ಕೆ ಭಾರಿ ಪ್ರಯತ್ನ ಮಾಡಿದರು. ಅದರಲ್ಲಿ ಸ್ವಲ್ಪಮಟ್ಟಿಗೆ ಅವರು ಯಶಸ್ವಿಗಳೂ ಆದರು. ಅಹಿಂಸೆ ನಕಾರಾತ್ಮಕ ಪದವೆನಿಸಿದರೂ, ಅದು ಒಂದು ಧನಾತ್ಮಕ ಪರಿಕಲ್ಪನೆ (ಕಳುಣುತಜ ಅಂಟಿಟಿಭಿಜಂಣಿ) ಹಿಂಸೆ ಎಂಬುದು ಮೃಗೀಯ ಭಾವನೆ. ಸಂಯಮಶೀಲರ ಆಯುಧ ಅಹಿಂಸೆ, ಹಿಂಸೆಯಲ್ಲ. ಪ್ರತಿ ಮಾನವನಲ್ಲೂ ಅಲ್ಪ ಸ್ವಲ್ಪ ಮೃಗೀಯ ಭಾವನೆ ಇದ್ದದ್ದೇ. ಇದನ್ನು ಶ್ರದ್ಧಾಪೂರ್ವಕವಾಗಿ, ಪ್ರಯತ್ನಪೂರ್ವಕವಾಗಿ ಮನುಷ್ಯ ದೂರಮಾಡುತ್ತಾ ಬಂದಲ್ಲಿ ಅವನು ಮಾನವತ್ವಕ್ಕೆ ಏರುತ್ತಾನೆ. ತನ್ನಲ್ಲಿರಬಹುದಾದ ಅಲ್ಪಸ್ವಲ್ಪ ಮೃಗೀಯ ಭಾವನೆಯನ್ನು ದೂರಮಾಡಲು ಪ್ರಯತ್ನ ಮಾಡುತ್ತಾನೆ. ಅಹಿಂಸೆ ಹೇಡಿಗಳು ಧರಿಸುವ ಒಂದು ಮುಖವಾಡವಲ್ಲ. ಅದು ಸಬಲರ ಅಸ್ತ್ರ ಎಂಬುದು ಗಾಂಧಿಯವರ ಪ್ರಸಿದ್ಧ ವಾಕ್ಯ. ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಬೀದಿಪಾಲಾಗಿರುವ ನಮಗೆ ಶಾಂತಿ ಬೋಧಿಸಲು ಬಂದಿರುವಿರಲ್ಲವೇ? ನೀವು ಸುಮ್ಮನೆ ಹಿಂತಿರುಗಿ, ಇಲ್ಲವಾದರೆ ನಿಮ್ಮ ಪ್ರಾಣಕ್ಕೇ ಸಂಚಕಾರ ಬಂದೀತು" ಎಂದು ಉದ್ರೇಕದಿಂದ ಎಚ್ಚರಿಕೆಯ ಮಾತನ್ನಾಡಿದರು. ಗಾಂಧೀಜಿ ಧೃತಿಗೆಡಲಿಲ್ಲ. "ಬಹುಕಾಲದಿಂದ ಅಣ್ಣ ತಮ್ಮಂದಿರಂತೆ ಬದುಕಿ ಬಾಳುತ್ತಿರುವ ನೀವು ಯಾರದೋ ಕೆಲವರ ಅವಿವೇಕದಿಂದ ಕೊಲೆ ಸುಲಿಗೆಯಾಯಿತೆಂದು, ಪರಸ್ಪರ, ಹಿಂದು ಮುಸಲ್ಮಾನ ಸಹೋದರರು ಒಬ್ಬರ ಕುತ್ತಿಗೆಯನ್ನು ಮತ್ತೊಬ್ಬರು ಹಿಸುಕಲು ತೊಡಗಿರುವುದು ಸಾಧುವಲ್ಲ. ಶಾಂತಿ ತಂದುಕೊಳ್ಳಿ. ತಪ್ಪು ಎಲ್ಲಾಗಿದೆ ಎಂಬುದನ್ನು ಕಂಡುಕೊಳ್ಳಿ. ಅದನ್ನು ತಿದ್ದುಕೊಂಡು ಸಖ್ಯದಿಂದ ಬಾಳುವುದನ್ನು ಕಲಿಯಿರಿ" ಎಂದು ಹೇಳುತ್ತಾ ಗಾಂಧೀಜಿ ಮನೆಯಿಂದ ಮನೆಗೆ ಹಳ್ಳಿಯಿಂದ ಹಳ್ಳಿಗೆ ಹೋದರು. "ಶಾಂತಿ ಸ್ಥಾಪನೆಯ ಈ ಪ್ರಯತ್ನದಲ್ಲಿ ನಾನು ಪ್ರಾಣ ನೀಗಬೇಕೆಂಬುದು ಭಗವಂತನ ಇಚ್ಛೆಯಾದಲ್ಲಿ ಅದಕ್ಕೆ ನಾನು ಸಿದ್ಧ" ಎಂದು ಗಾಂಧೀಜಿ ಘೋಷಣೆ ಮಾಡಿದರು. ಗಾಂಧೀಜಿ ಅವರ ಪ್ರಾರ್ಥನಾ ಸಭೆಗಳಿಗೆ ಮೊದಮೊದಲು ಜನರು ಬರುತ್ತಿರಲಿಲ್ಲ. ಜನರಲ್ಲಿ ತಿಳಿವಳಿಕೆ ಮೂಡಿದಂತೆ ಹೆಚ್ಚು ಹೆಚ್ಚು ಜನ ಬರಲು ಆರಂಭಿಸಿದರು. ದುಷ್ಕೃತ್ಯದಲ್ಲಿ ತೊಡಗಿದ್ದವರು ತಮ್ಮಲ್ಲಿದ್ದ ಮಚ್ಚು, ಕತ್ತಿ, ಕೋವಿಗಳನ್ನು ಗಾಂಧೀಜಿಗೆ ಒಪ್ಪಿಸಿ, ಇನ್ನು ಮುಂದೆ ಹಿಂಸಾಕೃತ್ಯದಲ್ಲಿ ತೊಡಗುವುದಿಲ್ಲವೆಂದು ವಚನವಿತ್ತರು. ಕಾಲಕ್ರಮದಲ್ಲಿ ಬಂಗಾಳದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸಿತು. ಹಾಗೆಯೇ ಪಂಜಾಬಿಗೆ ಕಳಿಸಲ್ಪಟ್ಟ 5,500 ಮಂದಿ ಆಯುಧಪಾಣಿಗಳೂ ಕೊಲೆಗಡುಕರನ್ನು ದಮನ ಮಾಡಿ ಹಿಂಸಾಕೃತ್ಯಗಳು ಮುಂದುವರೆಯದಂತೆ ತಡೆಗಟ್ಟಿದರು. ಆಗ ಮೌಂಟ್‌ಬ್ಯಾಟನ್ ಗಾಂಧೀಜಿಯವರನ್ನು ಕುರಿತು ಆಡಿದ ಒಂದು ಮಾತು ಬಹಳ ಮಾರ್ಮಿಕವಾಗಿದೆ.

ಮುಂದುವರಿಯುವುದು...

ರಾಣಿ ಅವಂತಿಬಾಯಿ



– ಡಾ. ಮುನಿಯಪ್ಪ

ಭಾರತದ ಸ್ವಾತಂತ್ರ್ಯ ಹೋರಾಟದ ನೂರೈವತ್ತು ವರ್ಷಗಳಲ್ಲಿ ಅದೆಷ್ಟೋ ಜನರ ಬಲಿದಾನವಾಗಿದೆ. ಲೋಧಿ ರಾಜಪೂತರ ರಾಣಿ ಅವಂತಿಬಾಯಿ ಅಪ್ರತಿಮ ಹೋರಾಟಗಾರ್ತಿ. 19ನೇ ಶತಮಾನದ ಆವಂತಿಬಾಯಿ ನಾಲ್ಕು ಸಾವಿರ ಸೈನಿಕರೊಂದಿಗೆ ಬ್ರಿಟಿಷ್ ಸೇನೆಯನ್ನೇ ಸೋಲಿಸಿದಳು. ಇವರ ಸಾಹಸ, ಬಲಿದಾನ, ದೇಶಭಕ್ತಿ, ಛಲ ಎಲ್ಲವೂ ಮಾದರಿಯಾಗುವಂಥದ್ದು. ರಾಣಿ ಅವಂತಿಬಾಯಿ ಮಧ್ಯಪ್ರದೇಶದ ಸಿವನಿ ಜಿಲ್ಲೆಯ ಮಂಕೆಹಾಡಿ ಗ್ರಾಮದಲ್ಲಿ ಜಮೀನ್ದಾರರ ಕುಟುಂಬದಲ್ಲಿ 1831ನೇ ಆಗಸ್ಟ್ 16ರಂದು ಜನಿಸಿದಳು. ಸಣ್ಣ ವಯಸ್ಸಿನಲ್ಲೇ ಕುದುರೆ ಸವಾರಿ, ಬಿಲ್ವಿದ್ಯೆ, ಕತ್ತಿವರಸೆ ಸಾಧನೆ ಮಾಡಿ ವೀರಳಾಗಿದ್ದಳು. ಪತಿ ವಿಕ್ರಮಾದಿತ್ಯ ಸಿಂಗ್ ಲೋಧಿ ಅಸ್ವಸ್ಥಗೊಂಡ ಹಿನ್ನೆಲೆಯಲ್ಲಿ ಸಂಸ್ಥಾನದ ಹೊಣೆ ಅವಂತಿಬಾಯಿ ಹೆಗಲಿಗೆ ಬಂದಿತ್ತು. ಆವಂತಿಬಾಯಿಯ ಚತುರ ಆಡಳಿತದಿಂದಾಗಿ ನಾಡು ಸುಭಿಕ್ಷತೆಯತ್ತ ಸಾಗಿತ್ತು. ರಾಮಗಡದಲ್ಲಿ ವಿಕ್ರಮಾದಿತ್ಯ ಸಿಂಗ್ ಲೋಧಿ ಅಸ್ವಸ್ಥರಾದ ಕಾರಣ ಸಂಸ್ಥಾನವನ್ನು ಬ್ರಿಟಿಷ್‌ರ ಆಡಳಿತಕ್ಕೆ ಒಳಪಡಿಸಲು ಬ್ರಿಟಿಷರು ಮುಂದಾದರು. 1851 ಸೆಪ್ಟೆಂಬರ್ 13ರಂದು ಬ್ರಿಟಿಷರು ರಾಮಗಡವನ್ನು ವಶಕ್ಕೆ ಪಡೆದರು. ಬ್ರಿಟಿಷ್ ಸೇನೆಯಲ್ಲಿದ್ದ ಭಾರತೀಯ ಸೈನಿಕರನೇಕರು ಬ್ರಿಟಿಷರ ವಿರುದ್ಧವೇ ದಂಗೆ ಎದ್ದಿದ್ದರು. ಆವಂತಿಬಾಯಿ ನಾಲ್ಕು ಸಾವಿರ ಸೈನಿಕರಿದ್ದ ಸೇನೆಯೊಂದಿಗೆ ಬ್ರಿಟಿಷರ ಮೇಲೆ ಯುದ್ಧ ಮಾಡಿದಳು. ಮಾಂಡ್ಲಾ ಬಳಿಯ ಖೇರಿ ಗ್ರಾಮದಲ್ಲಿ ಈಸ್ಟ್ ಇಂಡಿಯಾ ಕಂಪನಿ ಮತ್ತು ಆವಂತಿಬಾಯಿ ಮಧ್ಯೆ ದೊಡ್ಡ ಯುದ್ಧವೇ ನಡೆಯಿತು. ಇದರಲ್ಲಿ ಅವಂತಿ ಬಾಯಿ ಯಶಸ್ವಿಯಾದಳು. ಸೋಲನುಭವಿಸಿದ ಬ್ರಿಟಿಷರು ಪ್ರತೀಕಾರ ತೀರಿಸಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಏಳು ವರ್ಷಗಳಲ್ಲೇ ರಾಮಗಡ್ ಮೇಲೆ ದಾಳಿ ನಡೆಸಿದ ಬ್ರಿಟಿಷರು ಅವಂತಿಬಾಯಿಯನ್ನು ಸೋಲಿಸಿದರು. ಯುದ್ಧದಲ್ಲಿ ಸೋತರೂ ರಾಣಿ ಸೋಲೊಪ್ಪಲು ಸಿದ್ಧಳಿರಲಿಲ್ಲ. ದೇವಹರಗಡದಿಂದ ತಪ್ಪಿಸಿಕೊಂಡ ರಾಣಿ ಬ್ರಿಟಿಷರ ವಿರುದ್ಧ ಗೆರಿಲ್ಲಾ ತಂತ್ರದ ಮೂಲಕ ದಾಳಿ ಮಾಡತೊಡಗಿದರು. ಆದರೆ, ಬಲಿಷ್ಠ ಬ್ರಿಟಿಷ್ ಸೇನೆ ಅವಂತಿಬಾಯಿಯನ್ನು ಸುತ್ತುವರಿದಿತ್ತು. ವಿದೇಶೀ ಆಕ್ರಮಣಕಾರರ ಕೈಯಲ್ಲಿ ಸಾಯುವುದಕ್ಕಿಂತ ಮರಣವೇ ಲೇಸೆಂದು ಆವಂತಿಬಾಯಿ 1858ನೇ ಮಾರ್ಚ್ 10ರಂದು ಆತ್ಮಾಹುತಿ ಮಾಡಿಕೊಂಡರು. ಬ್ರಿಟಿಷರ ವಿರುದ್ಧ ವೀರೋಚಿತ ಹೋರಾಟ ಮಾಡಿದ ಅವಂತಿಬಾಯಿ ಮುಖ್ಯವಾಹಿನಿಯ ಇತಿಹಾಸ ಪುಟದಲ್ಲಿ ದಾಖಲಾಗ ಬೇಕಾಗಿದೆ.

ಸೌಜನ್ಯ : ಸುವರ್ಣ ನ್ಯೂಸ್

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.



ತಾಯಿ ಮಹಾರಾಜ್ ಮೊಕದ್ದಮೆ

ಟಿಳಕರ ಸುತ್ತ ಹಲವಾರು ಮೊಕದ್ದಮೆಗಳಿದ್ದು ಅವು ಅವರ ಮಾನಸಿಕ ನೆಮ್ಮದಿಯನ್ನು ಕೆಡಿಸಿದ್ದುವು. ಸ್ಥಳೀಯ ಖಾಸಗಿ ಮೊಕದ್ದಮೆಯೊಂದರಲ್ಲಿ ಎರಡು ದಶಕಗಳ ಕಾಲ ಅವರು ಸಿಲುಕಿಕೊಂಡರು. ಈ ಮೊಕದ್ದಮೆಯಲ್ಲಿ ಸರ್ಕಾರ ವಿಶೇಷ ಆಸಕ್ತಿ ವಹಿಸಿದ್ದರಿಂದ ಅದೊಂದು ರಾಜಕೀಯ ಸ್ವರೂಪವನ್ನೇ ತಾಳಿತು. ಜನಸಾಮಾನ್ಯರಂತೂ ಟಿಳಕರನ್ನು ದೈವವೆಂದೇ ಭಾವಿಸಿದ್ದರು. ಅಧಿಕಾರಶಾಹಿ ಅವರನ್ನು ಹೇಗಾದರೂ ಮಾಡಿ ಮುಗಿಸಿಬಿಡಬೇಕೆಂದು ಹೊಂಚುಹಾಕುತ್ತಿತ್ತು. ತಾಯಿ ಮಹಾರಾಜ್ ಮೊಕದ್ದಮೆ ಟಿಳಕರ ಹೆಸರಿಗೆ ಮಸಿ ಬಳಿಯುವಂತಹ ಸದವಕಾಶ ಕಲ್ಪಿಸಿತು. ಪ್ರಾರಂಭದಲ್ಲಿ ಈ ಮೊಕದ್ದಮೆ ಅಂತಹ ಮಹತ್ವದ್ದಾಗಿ ಕಾಣಿಸಲಿಲ್ಲ. ಬಾಬಾ ಮಹಾರಾಜ ಟಿಳಕರ ಆತ್ಮೀಯ ಸ್ನೇಹಿತ. ಆತ ಡೆಕ್ಕನ್ನಿನ ಪ್ರಥಮ ದರ್ಜೆಯ ಸರ್ದಾರ, ಬಾಬಾ ಮಹಾರಾಜ ತೀವ್ರ ಕಾಯಿಲೆಯಿಂದ ಬಳಲುತ್ತಿದ್ದ. ಟಿಳಕರು ಪುಣೆಗೆ ಮರಳಿದ್ದು ತಿಳಿದೊಡನೆ ತನ್ನನ್ನು ಭೇಟಿಯಾಗುವಂತೆ ಅವರನ್ನು ವಿನಂತಿಸಿದನು. ಬಾಬಾ ಮಹಾರಾಜ ಮರಣಶಯ್ಯೆಯಲ್ಲಿದ್ದು ಪತ್ನಿ ಸಕಾರ್‌ಬಾಯಿ (ತಾಯಿ ಮಹಾರಾಜ್). ಹೊರತು ಉತ್ತರಾಧಿಕಾರಿಗಳಾರೂ ಇರಲಿಲ್ಲ. ಆದ್ದರಿಂದ ತನಗಿದ್ದ ಆಸ್ತಿಯನ್ನೆಲ್ಲ ಒಂದು ನ್ಯಾಸವನ್ನಾಗಿ ಪರಿವರ್ತಿಸಿ ಟಿಳಕರಂತಹ ಪ್ರಾಮಾಣಿಕ ಮತ್ತು ಪ್ರಮುಖ ವ್ಯಕ್ತಿ ಸದಸ್ಯರಾಗಿರಬೇಕೆಂದು ಆಶಿಸಿದ್ದ. ಮರಣಶಯ್ಯೆಯಲ್ಲಿದ್ದ ಸ್ನೇಹಿತನ ಇಚ್ಛೆಯನ್ನು ಟಿಳಕರು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡರು.

ಬಾಬಾ ಮಹಾರಾಜ ತನ್ನ ಉಯಿಲನ್ನು ಹೀಗೆ "ನನ್ನ ಪತ್ನಿ ಈಗ ಗರ್ಭಿಣಿ ಅವಳು ಗಂಡು ಮಗುವಿಗೆ ಜನ್ಮ ನೀಡದಿದ್ದಲ್ಲಿ ಅಥವಾ ಹುಟ್ಟಿದ ಮಗ ಅಲ್ಪಕಾಲ ಜೀವಿಸಿದಲ್ಲಿ ನನ್ನ ಕುಟುಂಬದ ಹೆಸರನ್ನು ಮುಂದುವರಿಸುವ ದೃಷ್ಟಿಯಿಂದ ಧರ್ಮದರ್ಶಿಗಳ ಸಲಹೆಯಂತೆ ಒಬ್ಬ ಹುಡುಗನನ್ನು ಹೆಂಡತಿ ದತ್ತು ಪಡೆಯತಕ್ಕದ್ದು. ಇದು ಹಿಂದೂ ಶಾಸ್ತ್ರಕ್ಕೆ ಅನುಗುಣವಾಗಿ, ಆ ಹುಡುಗ ಪ್ರಾಪ್ತ ವಯಸ್ಕನಾಗುವವರೆಗೂ ಸಂಪೂರ್ಣ ವ್ಯವಹಾರವನ್ನು ಧರ್ಮದರ್ಶಿಗಳೇ ನಡೆಸತಕ್ಕದ್ದು'. ಬಾಬಾ ಮಹಾರಾಜ ನ್ಯಾಸದಲ್ಲಿ ಟಿಳಕರೊಂದಿಗೆ ಜಿ.ಎಸ್. ಪರ್ಗೆ, ಕುಂದೋಜಿ–ಕರ ಅವರನ್ನು ಹೆಸರಿಸಿದ್ದರು. ಬಾಬಾ ಮಹಾರಾಜ 1897 ಆಗಸ್ಟ್ 7ರಂದು. ಕೊನೆಯುಸಿರೆಳೆದರು. ಅವನ ಪತ್ನಿ 1898 ಜನವರಿ 18ರಂದು ಗಂಡುಮಗುವಿಗೆ ಜನ್ಮ ನೀಡಿದಳಾದರೂ ಆ ಮಗು ಬದುಕಿದ್ದು ಕೇವಲ ಎರಡು ತಿಂಗಳು ಮಾತ್ರ. ಟಿಳಕರು ತಮಗೆ ನಿರ್ವಹಿಸಿದ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡುವುದರಲ್ಲಿ ಆಸಕ್ತಿ ತಳೆದಿದ್ದರು. 1898 ಸೆಪ್ಟೆಂಬರ್ 6ರಂದು ಅವರು ಸೆರೆಯಿಂದ ಬಿಡುಗಡೆ ಹೊಂದಿದ್ದರು. ಹಿಂದಿರುಗಿ ಬಂದಾಗ ಬಾಬಾ ಮಹಾರಾಜನ ಆಸ್ತಿಯ ಹೊಣೆ ವಹಿಸಬೇಕಾದದ್ದು ಅನಿವಾರ್ಯವೆನಿಸಿತು. ಮಹಾರಾಜನ ಸಾಲ ವಿಪರೀತವಾಗಿತ್ತು, ಅದನ್ನು ಹಿಂದಿರುಗಿಸುವಂತೆ ಸಾಲ ನೀಡಿದವರು ಬಲವಂತ ಪಡಿಸುತ್ತಿದ್ದರು. ಅವರನ್ನು ತೃಪ್ತಿಪಡಿಸಲು ತಮ್ಮ ಸ್ವಂತ ಹಣವನ್ನೇ ಪ್ರಾರಂಭದಲ್ಲಿ ಟಿಳಕರು ನೀಡಿದ್ದುಂಟು. ಕಠಿಣ ಆರ್ಥಿಕ ಶಿಸ್ತನ್ನು ಅನುಸರಿಸುವುದರಿಂದ ಮಾತ್ರವೇ ಸಾಲ ತೀರಿಸಬಹುದಾಗಿತ್ತು, ತಾಯಿ ಮಹಾರಾಜ್ ಅವರಿಗೆ ತಿಂಗಳಿಗೆ ನೀಡಲಾಗುತ್ತಿರುವ ಹಣದಲ್ಲಿ ಟಿಳಕರು ಸ್ವಲ್ಪ ಕಡಿವಾಣ ಹಾಕಿದರು. ತಾನು ಒಂದು ಬೃಹತ್ ಆಸ್ತಿಯ ರಾಣಿ ಎಂದು ಭಾವಿಸಿದ್ದ ಮಹಾರಾಜನ ಪತ್ನಿ ಮನಬಂದಂತೆ ಖರ್ಚು ಮಾಡುತ್ತಿದ್ದಳು. ಅವಳ ಸುತ್ತಲೂ ಇದ್ದವರು ರಾಣಿ ನ್ಯಾಸದ ಸದಸ್ಯರ ಸೆರೆಯಾಳು ಎಂಬುದನ್ನು ಮೂಡಿಸುವಲ್ಲಿ ಯಶಸ್ವಿಯಾದರು. ತನಗೆ ಬೇಕಾದ ಮಗುವೊಂದನ್ನು ಅವಳು ದತ್ತು ಪಡೆಯಬೇಕೆಂದು ಅವರು ಅವಳಿಗೆ ಸಲಹೆ ನೀಡಿದರು. ತಾಯಿ ಮಹಾರಾಜ್ ಮಗನೊಬ್ಬನನ್ನು ದತ್ತು ಪಡೆಯುವುದರ ಬಗ್ಗೆ ವ್ಯವಸ್ಥೆ ಮಾಡಲು ಟಿಳಕರು ಮುಂದಾದರು. ಆದರೆ ಅವರದೇ ವಂಶದಲ್ಲಿ ಪುಣೆ ಅಥವಾ ಕೊಲ್ಹಾಪುರದಲ್ಲಿ ಯಾವ ಹುಡುಗನೂ ದೊರೆಯಲ್ಲಿಲ್ಲ. ಆದ್ದರಿಂದ ಅಂದಿನ ಹೈದರಾಬಾದ್ ಸಂಸ್ಥಾನದ ಅಹಮದ್ ನಗರದಲ್ಲಿರುವ ಬಾಬ್ರಿ ಶಾಖೆಯಿಂದ ಹುಡುಗನೊಬ್ಬನನ್ನು ದತ್ತು ಪಡೆಯಬೇಕೆಂದು ನ್ಯಾಸ ಮಂಡಳಿ ನಿರ್ಧರಿಸಿತು. 1901 ಜೂನ್ 27–28ರಂದು ಟಿಳಕ್, ಖರ್ಪಡೆ, ಮತ್ತು ತಾಯಿ ಮಹಾರಾಜ್ ಅವರು ನಿಡೋಣಿ ಎಂಬ ಹಳ್ಳಿಗೆ ತೆರಳಿ ಹಿಂದೂ ಕಾನೂನಿಗೆ ಅನುಗುಣವಾಗಿ ಜಗನ್ನಾಥ ಎಂಬ ಹುಡುಗನನ್ನು ದತ್ತು ಸ್ವೀಕರಿಸಿದರು.



ಬಾಬಾ ಮಹಾರಾಜ ಅವರೊಂದಿಗೆ ಟಿಲಕರು

ಮುಂದುವರಿಯುವುದು...

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು

– ಡಾ. ಗಣನಾಥಶೆಟ್ಟಿ ಎಕ್ಕಾರು

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

ಗೋಪಾಳ ವಾಮನ ಮಡಗಾಂವಕರ

ಬ್ರಿಟಿಷ್ ಸರಕಾರದ ನೀತಿ ನಿಯಮಗಳ ವಿರುದ್ಧ ಮನೆಯ ಹಿರಿಯರು ತಳೆದ ನಿಲುವು ಗೋಪಾಲ ವಾಮನರಿಗೆ ಚೆನ್ನಾಗಿ ಮನದಟ್ಟಾಗಿತ್ತು. 1920 ರಲ್ಲಿ ಸಿರಸಿಯ ಆಂಗ್ಲೋ–ವರ್ನಾಕೂಲರ್ ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದಾಗ ನೀಡುವ ಬಹುಮಾನದ ಮೇಲೆ ಕಿಂಗ್ ಜಾರ್ಜರ ಚಿತ್ರವಿರುವುದನ್ನು ಕಂಡು ಬಹುಮಾನ ನಿರಾಕರಿಸಿ ಭಾರತಮಾತೆಯ ಚಿತ್ರವಿರುವ ಬಹುಮಾನ ನೀಡಬೇಕೆಂದು ಪ್ರತಿಪಾದಿಸಿದರು. ಆ ಕೂಡಲೆ ಶಾಲೆ ತೊರೆದು ರಾಷ್ಟ್ರೀಯ ಶಾಲೆ ಸೇರಿದರು.

ಮೇಲಿಂದ ಮೇಲೆ ಸಿರಸಿಗೆ ಬರುವ ಗಂಗಾಧರರಾವ್ ದೇಶಪಾಂಡೆ, ಗೋವಿಂದರಾವ್ ಯಾಳಗಿ, ಜಯ ರಾಮಾಚಾರ್ಯ ಕೊಪ್ಪಳ ಇವರಿಗೆ ಸಮೀಪದ ಸ್ಥಳಗಳ ದಾರಿ ತೋರಿಸುವ ಕೆಲಸ ಇವರದಾಗಿತ್ತು. ರಾಷ್ಟ್ರಪತಿ ಗಿರಿ ಅವರ ಮಾವ ಧರ್ಮಾನಂದ ಸ್ವಾಮಿಗಳ ಭಾಷಣಕ್ಕೆ ಟಿಪ್ಪಣಿ ಬರೆದು ಕೊಡುತ್ತಿದ್ದರು. 1924ರ ಬೆಳಗಾಂವ ಕಾಂಗ್ರೆಸ್ ಅಧಿವೇಶನಕ್ಕೆ ಶ್ರೀ ಕರಗುಪ್ಪಿಯವರು ಬರೆದ ಅಸಹಕಾರ ಮೀಮಾಂಸೆ ಪುಸ್ತಕದ ಪ್ರಮುಖ ಬರೆಹಗಾರರಲ್ಲಿ ಇವರೊಬ್ಬರಾಗಿದ್ದರು.

ಆರ್ಥಿಕ ಸಹಾಯವಿಲ್ಲದೆ ರಾಷ್ಟ್ರೀಯ ಶಾಲೆಗಳು ಮುಚ್ಚುವ ಹಂತಕ್ಕೆ ಬಂದಾಗ ಹುಬ್ಬಳ್ಳಿ ಖಾದಿ ಭಂಡಾರಕ್ಕೆ ಸೇಲ್ಸಮನ್ ಆಗಿ ಸೇರಿಕೊಂಡರು. ಗಂಗಾಧರರಾವ್ ದೇಶಪಾಂಡೆ ಅವರ ಸಹಾಯಕರಾಗಿ ಹುದಲಿಯಲ್ಲಿ ಒಂದು ವರ್ಷ ಕೆಲಸ ಮಾಡಿದರು. 1926ರಲ್ಲಿ ಸೇವಾಶ್ರಮ, ನಡೆಸುವ ತರಬೇತಿಗಾಗಿ ಸಬರಮತಿಗೆ ತೆರಳಿ ಖಾದಿ ಮಗ್ಗದ ಕೆಲಸ, ಬಟ್ಟೆ ನೆಯ್ಯುವ ಕೆಲಸ, ಕಲಿತರು. ಎರಡು ತಿಂಗಳು ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರ ಖಾನರೊಡನೆ ಇದ್ದು ಉತ್ತರ ಕರ್ನಾಟಕ ಚಳುವಳಿ ಕುರಿತು ಮಾಹಿತಿ ಸಂಗ್ರಹಿಸಿ ಕೊಟ್ಟರು.

ಉಪ್ಪಿನ ಸತ್ಯಾಗ್ರಹಕ್ಕಾಗಿ 1930 ಮಾರ್ಚ 26 ರಿಂದ ಕಾಲನಡಿಗೆಯಲ್ಲಿ ಸಿರ್ಸಿಯಿಂದ ಹೊರಟು 20 ಹಳ್ಳಿಗಳಲ್ಲಿ ಸಭೆ ನಡೆಸಿ ಹೊನ್ನಾವರ ತಲುಪಿ ಅಲ್ಲಿಂದ ಅಂಕೋಲಾ ತನಕ ನಡೆದರು. ಅರುಣೋದಯ ಪಥಕ ವ್ಯವಸ್ಥೆಯ ಪ್ರಮುಖ ಕಾರ್ಯಕರ್ತರಾಗಿದ್ದರು. ಉಪ್ಪು ಹಾಗೂ ಖಾದಿ ಮಾರಾಟ ಮಾಡಿ ಸಂಗ್ರಹಿಸಿದ ಹಣ ಸತ್ಯಾಗ್ರಹ ನಿಧಿಗೆ ಜಮಾ ಮಾಡುತ್ತಿದ್ದರು. ಎಲ್ಲ ಕಾರ್ಯಕರ್ತರು ಸಂಗ್ರಹಿಸಿದ ಹಣವನ್ನೂ ಸತ್ಯಾಗ್ರಹ ನಿಧಿಗೆ ಜಮಾ ಮಾಡುತ್ತಿದ್ದರು ಮತ್ತು ನಿಧಿಯ ಲೆಕ್ಕ ಬರೆಯುತ್ತಿದ್ದರು. ಮಳೆಗಾಲದಲ್ಲಿ ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಜಂಗಲ್ ಸತ್ಯಾಗ್ರಹ ಪ್ರಚಾರ ನಡೆಯುತ್ತಿತ್ತು. ಸಿರಸಿ ತಾಲ್ಲೂಕಿನಲ್ಲಿ 14 ಕೇಂದ್ರಗಳನ್ನು ಸ್ಥಾಪಿಸಿ 40 ಹಳ್ಳಿಗಳಿಂದ 2 ಸಾವಿರ ರೈತರನ್ನು ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ವ್ಯವಸ್ಥೆ ಮಾಡಿದ್ದರು. ಅಗಸ್ಟ್ ಅಂತ್ಯಕ್ಕೆ ಸಿರಸಿ ಖಾದಿ ಭಂಡಾರ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಾ ತಾಲ್ಲೂಕಿನ 42 ಗ್ರಾಮಗಳ ಪಟೇಲರು ಅಸಹಕಾರ ಚಳುವಳಿ ಅನ್ವಯ ಪಟೇಲಗಿರಿಗೆ ರಾಜೀನಾಮೆ ನೀಡಿ ಮಾಮಲೆದಾರರಿಗೆ ದಸ್ತಾವೇಜು ಒಪ್ಪಿಸುವಂತೆ ಮನವೊಲಿಸುವಲ್ಲಿ ಯಶಸ್ವಿಯಾದರು. 1932 ಮೇ ತಿಂಗಳಿನಲ್ಲಿ ಒಂದು ದಿನ ಪೊಲೀಸರು ಸಿರಸಿ ಕಾಂಗ್ರೆಸ್ ಕಛೇರಿ ಜಪ್ತಿ ಮಾಡಿ ಕಾಗದ ಪತ್ರ ವಶಪಡಿಸಿಕೊಂಡರು. ಅದೇ ರಾತ್ರಿ ಚನ್ನಪಟ್ಟಣ ಬಜಾರ್ ಹಾಗೂ ಸಿಂಪಿಗಲ್ಲಿಯ ಎಲ್ಲ ಮನೆಗಳ ಮೇಲೆ ಕಾಂಗ್ರೆಸ್ ಕಛೇರಿ ಎಂದು ಫಲಕ ಬರೆಯಿಸಿ ಹಾಕಿದರು. ಈ ಕುಚೋದ್ಯ ಅರಿತ ಪೊಲೀಸರು ಇವರನ್ನು ಬಂಧಿಸಿ 15 ತಿಂಗಳ ಶಿಕ್ಷೆ ನೀಡಿದರು. 100/–ರೂ. ದಂಡ ವಿಧಿಸಿದರು. ವಿಸಾಪುರದಲ್ಲಿ ಶಿಕ್ಷೆ ಅನುಭವಿಸಿ ಪುನಃ ಸಿರಸಿಗೆ ಬಂದು ಕರಪತ್ರ ಮುದ್ರಣದಲ್ಲಿ ತೊಡಗಿದರು. ಒಮ್ಮೆ ಪೊಲೀಸರು ಇವರನ್ನು ಹಿಡಿದು ಮಾಹಿತಿ ಕೇಳಿದಾಗ ಉತ್ತರಿಸಿಲ್ಲವೆಂದು ಹಂಟರ್‌ರಿಂದ ಬಾರಿಸಿದ್ದರು. ಹೊಡೆಯುವುದಾದರೆ ಬೇಕಾದಷ್ಟು ಹೊಡೆಯಿರಿ ಎನ್ನುತ್ತಾ ಅಂಗಿ ತೆಗೆದು ಬೆನ್ನು ನೀಡಿ ನಿಂತರು. ಇದರಿಂದ ಪುನಃ ಖಟ್ಲೆ ಹಾಕಿದರು 6 ತಿಂಗಳು ಜೈಲು ವಾಸ ಅನುಭವಿಸಿದರು. 6 ವರ್ಷ ಅವಧಿಯಲ್ಲಿ 3 ಬಾರಿ ವಿಚಾರಣಾ ರಹಿತ ಕೈದಿ ಎಂದು, ಎರಡೂವರೆ ವರ್ಷ ಜೈಲಿನಲ್ಲಿ ಇಟ್ಟಿದ್ದರು. 1936 ಮೇ ತಿಂಗಳಿನಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿ ಹಾಗೂ ಡಾ. ಬಾಬು ರಾಜೇಂದ್ರ ಪ್ರಸಾದ ಇವರ ಉತ್ತರ ಕನ್ನಡ ಜಿಲ್ಲಾ ಪ್ರವಾಸ ಹಾಗೂ ಸಿದ್ದಾಪುರ ಹುಡದಿ ಬೈಲಿನಲ್ಲಿ ಭಾಷಣ ಏರ್ಪಡಿಸುವಲ್ಲಿ ಪ್ರಮುಖರಾಗಿದ್ದರು.

ಸಿದ್ದಾಪುರದ ತಿಮ್ಮಪ್ಪನಾಯಕ ಮಾಸ್ತರ ಹಾಗೂ ಸಿರ್ಸಿಯ ವಾಮನ ಹೊದಿಕೆ ಅವರನ್ನು ಗುರುಗಳೆಂದು ಸ್ವೀಕರಿಸಿ ಅವರ ಆದರ್ಶಗಳನ್ನೇ ಪಾಲಿಸಿಕೊಂಡು ಬಂದವರು. ನೂಲುವುದು, ಬಟ್ಟೆ ನೇಯುವುದರಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಉತ್ತರ ಕರ್ನಾಟಕದ ಪ್ರಮುಖ ಖಾದಿ ಕರ್ತರೆಂದು ಕೇಂದ್ರ ಸರ್ಕಾರ ಇವರನ್ನು ಗೌರವಿಸಿತ್ತು. ಹಿರಿಯ ಸ್ವಾತಂತ್ರ್ಯ ಯೋಧರೆಂದು ಕರ್ನಾಟಕ ಸರಕಾರ 1968 ರಲ್ಲಿ ಇವರನ್ನು ಗೌರವಿಸಿತ್ತು. ರೈತಾಪಿಯಲ್ಲಿ ಅತೀವ ಆಸಕ್ತಿ ತಳೆದ ಇವರು ಸ್ವಾತಂತ್ರ್ಯದ ನಂತರ ಜಪಾನಿನ ಕೃಷಿ ಪದ್ಧತಿ ಅಭ್ಯಾಸಿಸಿ ಬೇಸಾಯದಲ್ಲಿ ಹೊಸ ಕ್ರಮಕ್ಕೆ ಪ್ರಚಾರ ನೀಡಿದರು. 1947ರಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದು ಸಿದ್ದಾಪುರ ತಹಸೀಲ್ದಾರ ಕಛೇರಿ ಎದುರು ಸಾಂಕೇತಿಕವಾಗಿ ಎರಡು ತೆಂಗಿನ ಸಸಿ ನೆಟ್ಟು ಅವುಗಳ ಬೆಳವಣಿಗೆ ಕಂಡು ಹೆಮ್ಮೆ ಪಟ್ಟರು. 81 ವರ್ಷಕಾಲ ಬಾಳಿ ಬದುಕಿ ತನ್ನ ಜೀವನ ದೇಶಕ್ಕಾಗಿ ಕೃಷಿಗಾಗಿ ಮುಡಿಪಿಟ್ಟವರಾಗಿದ್ದಾರೆ.

ಮುಂದುವರಿಯುವುದು...


ಮಹಮದಾಲಿ ಜಿನ್ನಾ ಮತ್ತು ಗಾಂಧೀಜಿ

– ವೇಮಗಲ್ ಸೋಮಶೇಖರ್.

ಮುಂಬಯಿಯ ಮೌಂಟ್ ಪ್ಲೇಜಂಟ್ ರಸ್ತೆಯಲ್ಲಿದ್ದ ಮಹಮದಾಲಿ ಜಿನ್ನಾ ಅವರ ವಾಸ್ತವ್ಯಕ್ಕೆ ಭಾರತದ ವಿಭಜನೆಯನ್ನು ಕುರಿತು ಮಾತನಾಡಲು ಸೇವಾಗ್ರಾಮದಿಂದ ತೆರಳಿದ ಗಾಂಧೀಜಿ 1944ರ ಸೆಪ್ಟೆಂಬರ್ 9ರಿಂದ 30ರವರೆಗೆ ಮುಂಬಯಿನಲ್ಲಿ ತಂಗಿದ್ದರು. ಅವರ ಮಾತು–ಕತೆಗಳು ಜಿನ್ನಾ ಭವನದಲ್ಲಿ ಸುತ್ತುತ್ತಿತ್ತೇ ವಿನಾ, ಸುದ್ದಿಗಾರರ ಕಿವಿಗೆ ಬೀಳುತ್ತಿರಲಿಲ್ಲ. ಗಾಂಧೀಜಿ ಜಿನ್ನಾ ಅವರನ್ನು ಭೇಟಿಯಾಗಲು ಹೋದೊಡನೆಯೇ ಜಿನ್ನಾ ಅವರು ಹೊರ ಬಂದು ಸ್ವಾಗತಿಸಿ, ಕೈಕುಲುಕಿ ಅಪ್ಪಿಕೊಂಡು ನಗು ಮುಖದಿಂದ ಒಳಕ್ಕೆ ಹೆಜ್ಜೆ ಇಡುತ್ತಿದ್ದರು. ಇವರಿಬ್ಬರ ಸ್ನೇಹ ಸುದ್ದಿಗಾರರಿಗೊಂದು ಸಮಸ್ಯೆಯಾಗಿತ್ತು. ಇಂಥ ಸ್ನೇಹದ ಮಧ್ಯದಲ್ಲಿಯೇ ಜಿನ್ನಾ ಧರ್ಮದ ಭೂತವನ್ನು ಎಬ್ಬಿಸಿದ್ದರು. ಒಮ್ಮೆ ಜಿನ್ನಾ ಅವರು "ಗಾಂಧೀಜಿ, ನೀವು ಯಾರನ್ನು ಪ್ರತಿನಿಧಿಕರಿಸುತ್ತೀರಿ? ನೀವು ನನ್ನಲ್ಲಿಗೆ ಬರುವುದು ಹಿಂದುವೆಂದೋ, ಹಿಂದೂ ಕಾಂಗ್ರೆಸ್ಸಿನ ಪ್ರತಿನಿಧಿಯೆಂದೋ" ಎಂದು ಬಾಪೂಜಿಗೆ ಕೇಳಿದ್ದರು. ಗಾಂಧೀಜಿ ಅವರು "ನಾನಿಲ್ಲಿ ಮಾತು–ಕತೆಗಳಿಗೆ ಬರುವುದು ವ್ಯಕ್ತಿಗತವಾಗಿ. ನೀವು ನನ್ನನ್ನು ಒಬ್ಬ ವ್ಯಕ್ತಿಯೆಂದು ಭಾವಿಸಿ ಮಾತನಾಡಿರಿ" ಎಂದರು. ಕೂಡಲೇ ಒಪ್ಪಿ ಅವರೊಡನೆ ಪಾಕಿಸ್ತಾನ ನಿರ್ಮಾಣವನ್ನು ಕುರಿತು ಮಾತು–ಕತೆಗಳನ್ನು ಪ್ರಾರಂಭಿಸಿದರು. ನಲವತ್ತು ಕೋಟಿ ಭಾರತೀಯರನ್ನು ಪ್ರತಿನಿಧಿಸುವ ಬಾಪೂಜಿ ಅವರ ಗುಡುಗು ಜಿನ್ನಾ ಅವರನ್ನು ರಂಜಿಸಿತು ಜಿನ್ನಾ ಭವನದ ಹೊರಗೆ ನೆರೆದಿದ್ದ ಸುದ್ದಿಗಾರರಿಗೆ ಬಾಪೂಜಿ ಏನನ್ನಾದರೂ ಹೇಳುವರೇನೋ ಎಂದು ಕಾಯ್ದಿದ್ದರು. ಮಾತು–ಕತೆಗಳನ್ನು ಮುಗಿಸಿ ಬಾಪೂಜಿ ಹೊರಗಡೆ ಬಂದಾಗ ಸುದ್ದಿಗಾರರು "ಬಾಪೂಜಿ, ನಮಗೇನನ್ನಾದರೂ ತಂದಿದ್ದೀರಾ?" ಎಂದು ಕೇಳಿದರು.

"ಹೂವುಗಳನ್ನಷ್ಟೇ ತಂದಿದ್ದೇನೆ"– ಎಂದು ಮಿತವಾಗಿ ಬಾಪೂಜಿ ಅರ್ಥಗರ್ಭಿತ ಮಾತುಗಳನ್ನಾಡಿ ಹೊರಟುಹೋದರು. ಆ ಸಮಯದಲ್ಲಿ ಗಾಂಧೀಜಿ ಚರ್ಚೆಯನ್ನು ಕುರಿತು ತಾವೇನೂ ಹೇಳಲು ಸಾಧ್ಯವಿಲ್ಲ ಎಂದು ಸೂಚ್ಯವಾಗಿ ಹೇಳಿದ್ದನ್ನೇ ಪತ್ರಿಕೆಗಳಲ್ಲಿ ಪ್ರಕಟಿಸಿದರು. ನಂತರದ ದಿನಗಳಲ್ಲಿ ಪತ್ರಿಕಾ ಪ್ರಪಂಚದವರು ತಮ್ಮ ಅಪರೋಕ್ಷ ಜ್ಞಾನದಿಂದ ಸಂಜಯನಂತೆ ಜಿನ್ನಾಭವನದ ನಾಲ್ಕು ಗೋಡೆಗಳನ್ನು ಭೇದಿಸಿ ತುಣುಕು ತುಣುಕು ಸುದ್ದಿಗಳನ್ನು ಹೊರತೆಗೆಯುತ್ತಿದ್ದರು. ಆ ಸುದ್ದಿಗಳಿಗೆ ತರ್ಕದ ಬಣ್ಣವನ್ನು ಕೊಟ್ಟು ಸುದ್ದಿಗಾರರು ಒದಗಿಸುತ್ತಿದ್ದರು. ಜಿನ್ನಾ ಅವರು ನಗು ಮುಖದಿಂದ, ಬಾಪೂಜಿ ಅವರನ್ನು ಬೀಳ್ಕೊಡಲು ಹೊರಬಂದಾಗ ಪತ್ರಿಕಾ ಪ್ರತಿನಿಧಿಗಳು ಮುಖ ಸಾಮುದ್ರಿಕೆಯಿಂದ ಅವರ ಮೌನಕ್ಕೆ ಮಾತುಗಳನ್ನು ಮೂಡಿಸುತ್ತಿದ್ದರು. 126 ಪೌಂಡ್ ತೂಕ, ಆರಡಿ ಎತ್ತರದ ಜಿನ್ನಾ ಬಾಪೂಜಿಯೊಡನೆ ಅನೇಕ ಭಾವಚಿತ್ರಗಳನ್ನು ತೆಗೆಸಿಕೊಂಡದ್ದನ್ನು ನೋಡಿ, ಸುದ್ದಿಗಾರರು ಮಾತುಕತೆಗಳು ಸುಗಮವಾಗಿ ಸಾಗಿರಬೇಕೆಂದು ತರ್ಕಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಆದರೆ ದಿನೇದಿನೇ ವಿಳಂಬವಾಗುತ್ತಲೇ ಹೊರಟ ಮಾತು–ಕತೆಗಳನ್ನು ಕಂಡು ಮುಂಬಯಿಯ ಪತ್ರಿಕಾ ಪ್ರತಿನಿಧಿಯೊಬ್ಬನು ಈ ಮಾತು–ಕತೆಗಳು ವಿಫಲವಾಗುವಲ್ಲಿ ಸಂದೇಹವಿಲ್ಲವೆಂದು ಭವಿಷ್ಯ ನುಡಿದನು. ಗಾಂಧೀಜಿ ಸೆಪ್ಟೆಂಬರ್ 13ರಂದು ಜಿನ್ನಾ ಅವರೊಡನೆ ನಗೆಯಾಡುತ್ತಾ ತಮ್ಮ ವಾಸ್ತವ್ಯಕ್ಕೆ ಹೋಗಲು ಜಿನ್ನಾಭವನದಿಂದ ಹೊರಕ್ಕೆ ಬಂದಾಗ ಪತ್ರಿಕಾ ಪ್ರತಿನಿಧಿಗಳ ಕಡೆ ಹೊರಳಿ– "ನಿನ್ನೆ ನಮ್ಮ ಮುಖಗಳನ್ನು ನೋಡಿ ನೀವು ನಿಮ್ಮ ತರ್ಕದಿಂದ ಏನನ್ನೋ ಬರೆದಿದ್ದೀರಿ. ಇಂದು ನಾವಿಬ್ಬರೂ ನಿಮ್ಮೆದುರು ನಿಂತಿದ್ದೇವೆ. ನಮ್ಮ ಮುಖಗಳಲ್ಲಿ ಆಶೆಯೊಂದನ್ನು ಬಿಟ್ಟು ನೀವೇನನ್ನೂ ಕಾಣಲಾರಿರಿ" ಎಂದರು. ತಮ್ಮ ಮಾತು – ಕತೆಗಳು ವಿಫಲವಾಗಬಹುದೆಂದು ಬರೆದ ಮುಂಬಯಿ ಪತ್ರಕರ್ತರ ವರದಿಯನ್ನು ಗಾಂಧೀಜಿ ಜಿನ್ನಾ ಅವರಿಗೆ ತೋರಿಸಿದಾಗ, ಅವರು ಪತ್ರಿಕಾ ಪ್ರತಿನಿಧಿಗಳ ಕಡೆ ಕಾಕದೃಷ್ಟಿಯನ್ನು ಚೆಲ್ಲಿ "ನೀವೇಕೆ ವೃಥಾ ನಮ್ಮ ಮಾತು–ಕತೆಗಳಿಗಾಗಿ ತೊಂದರೆ ತೆಗೆದುಕೊಳ್ಳುತ್ತೀರಿ?' ಎಂದು ಜರೆದು ಮಾತನಾಡಿದ್ದರು.

ಪಕ್ಕದಲ್ಲಿಯೇ ಇದ್ದ ಗಾಂಧೀಜಿ ಜಿನ್ನಾರವರಿಗೆ "ನಿಮಗೆ ಗೊತ್ತಿಲ್ಲ, ನಮ್ಮ ಮಾತುಗಳ ಬಗ್ಗೆ ಇವರು ಇದಾಗಲೇ ಸಾಕಷ್ಟು ಬರೆದಿದ್ದಾರೆ. ನೀವು ಪತ್ರಿಕೆಗಳನ್ನೇನಾದರೂ ಓದಿದ್ದೀರಾ? ಅವರಿಗೆ ಕಿಡಿಗೇಡಿತನದಲ್ಲಿ ಆನಂದವಿದೆ" ಎಂದು ಹೇಳಿ, ಮತ್ತೆ ಸುದ್ದಿಗಾರರ ಕಡೆ ಹೊರಳಿ "ನಾವಿಬ್ಬರೂ ಇಲ್ಲಿದ್ದೇವೆ. ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಿ. ಇದಕ್ಕೂ ಮಿಕ್ಕಿ ನಮ್ಮ ಹೃದಯಗಳನ್ನರಿತು ಮುಖಗಳನ್ನು ನೋಡಿ, ಏನಾದರೂ ಬರೆಯುವಂತಿದ್ದರೆ ನಮಗೆ ಮೊದಲು ತೋರಿಸಿರಿ. ನೀವು ಮೌನವನ್ನು ತಾಳಿದರೆ ಭಾರತಕ್ಕೂ ಮತ್ತು ಮಾನವತೆಗೂ ಸೇವೆ ಸಲ್ಲಿಸಿದಂತಾಗುತ್ತಿದೆ" ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದರು. ಈ ಸಮಯದಲ್ಲಿ ಅಂದರೆ 19ನೇ ಮಂಗಳವಾರದಂದು ಈದ್‌ಮಿಲಾದ್ ಬಂದಿದ್ದರಿಂದ ಗಾಂಧೀಜಿ ಜಿನ್ನಾ ಅವರಿಗೆ ಗೋಧಿಯಿಂದ ಮಾಡಿದ ಚಪಾತಿಯನ್ನು ಕಳುಹಿಸಿದ್ದರು. ಜಿನ್ನಾ ಅವರಿಗೆ ಆರೋಗ್ಯ ಸರಿಯಿಲ್ಲದ್ದ ಕಾರಣದಿಂದಾಗಿ ಗಾಂಧೀಜಿ ತಮ್ಮ ಪ್ರಕೃತಿ ಚಿಕಿತ್ಸಾ ವೈದ್ಯರೊಬ್ಬರನ್ನು ವ್ಯಾಧಿ ಗುಣಮುಖವಾಗಲೆಂದು ತಿಳಿಸಿ ಬರಲು ಸಂದೇಶ ಕೊಟ್ಟು ಜಿನ್ನಾ ಅವರ ಬಳಿ ಕಳುಹಿಸಿದ್ದರು. ತಮ್ಮ ಮಾತು–ಕತೆಗಳ ಫಲಾಫಲಗಳ ಬಗ್ಗೆ ಆ ಸ್ಥಿತಿಯಲ್ಲಿ ತಾವೇನೂ ಹೇಳಲು ಸಿದ್ಧರಿಲ್ಲವೆಂದು ಹೇಳುವಲ್ಲಿ, ಬಾಪೂಜಿ ಬುದ್ಧಿಮತ್ತೆಯನ್ನು ಉಪಯೋಗಿಸಿದರು. ಸುದ್ದಿಗಾರರು ಎಷ್ಟು ಜಾಣರೋ ಅಷ್ಟೇ ಚಾಣಾಕ್ಷರು ಬಾಪೂಜಿಯವರಿದ್ದರು. ಈ ಕಾರಣದಿಂದಾಗಿ ಮುಂಬಯಿಯಲ್ಲಿ 22 ದಿವಸ ತಂಗಿದ್ದ ಗಾಂಧೀಜಿ ಅಕ್ಟೋಬರ್ ಒಂದರಂದು ಸೇವಾಗ್ರಾಮಕ್ಕೆ ಹಿಂತಿರುಗಿದ್ದರು.



ಮುಂಬಯಿನಲ್ಲಿದ್ದ ಜಿನ್ನಾ ಅವರ ಮನೆಗೆ ಗಾಂಧೀಜಿ ಅವರ ಭೇಟಿ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ

ಮುಂದುವರಿದ ಸಂದರ್ಶನ – ಸುಶ್ರೀ ಚೆನ್ನಮ್ಮ ಹಳ್ಳಿಕೇರಿ ಅವರೊಂದಿಗೆ ಮಾತುಕತೆಯ ಜೀವನಗಾಥೆ..

ಇಂದಿರಾ : ನಿಮ್ಮ ಬಾಲ್ಯದ ದಿನಗಳ ಮರೆಯಲಾಗದ ನೆನಪುಗಳು ಹೇಗಿದೆ?

ಚೆನ್ನಮ್ಮ : ಅಕ್ಕೂರ ಹದ್ದಿನಲ್ಲಿ ವರದಾನದಿ ದಂಡೆಯ ಮೇಲಿನ ನಮ್ಮ ಹೊಲದಲ್ಲಿ ಗೆಳತಿಯರೊಂದಿಗೆ ದನಕಾಯಲು ಹೋಗುತ್ತಿದ್ದೆ. ದನಗಳು ಮಲಗಿಕೊಂಡಾಗ ಎಲ್ಲರೂ ಕೂಡಿಕೊಂಡು ಹೊಳೆಯಲ್ಲಿ ಸ್ನಾನ ಮಾಡುವದು, ಉಸುಕಿನಲ್ಲಿ ಮನೆ ಕಟ್ಟುವದು, ಕಾಲುವೆ ಮಾಡುವದು, ಮುಂತಾದ ಚಟುವಟಿಕೆ ಮಾಡುತ್ತಿದ್ದೆವು. ಸತ್ಯಹರಿಶ್ಚಂದ್ರ, ವಿಕ್ರಮಾದಿತ್ಯ ನಾಟಕಗಳನ್ನು ವಿಶಾಲವಾದ ಆಕಾಶದ ಕೆಳಗೆ ಆಡುತ್ತಿದ್ದೆವು. ಕಿರೀಟ, ವೇಷಭೂಷಣಗಳನ್ನು ಹುಲ್ಲು ಹಾಗು ಗಿಡದ ಟೊಂಗೆ ಎಲೆಗಳಿಂದ ತಯಾರಿಸುತ್ತಿದ್ದೆವು.

ಇಂದಿರಾ : ಹೊಸರಿತ್ತಿಯ ದುರುಗವ್ವ ಗುಡಿಯಲ್ಲಾದ ಘಟನೆ ಅಮ್ಮಾ ನಿಮಗೆ ಜ್ಞಾಪಕವಿದೆಯಾ?

ಚೆನ್ನಮ್ಮ : ಒಂದು ವರ್ಷ ಕಾಲರಾ, ಹಾಗೂ ಪ್ಲೇಗ ರೋಗಗಳು ಹಬ್ಬಿದವು. "ಗಡಿ ದುರುಗವ್ವನನ್ನು ಮಾಡಿ ಪೂಜಿಸುವುದರಿಂದ ರೋಗಗಳು ಇಲ್ಲದಾಗುತ್ತವೆ" ಎಂಬ ಭಾವನೆಯಿಂದ ಜನರು ಒಂದು ಕಟ್ಟಿಗೆಯ ಗಡಿ ದುರಗವ್ವನನ್ನು ಮಾಡಿ, ನಮ್ಮ ಹೊಲದ ಹತ್ರ (ಅಕ್ಕೂರ ಗಡಿಯಲ್ಲಿ) ಇರಿಸಿದ್ದರು. ಹೊಸರಿತ್ತಿಯಲ್ಲಿ ಪ್ರತಿ ಶನಿವಾರ ಸಂತೆ ಆಗುತ್ತಿತ್ತು. ಅಕ್ಕೂರ ಗ್ರಾಮದ ಜನ ಸಂತೆಯಲ್ಲಿ ವ್ಯಾಪಾರ ಮಾಡುತ್ತಿದ್ರು, ಜನರು ದೇವಿಗೆ ಕಾಯಿಪಲ್ಯ, ಉಳ್ಳಾಗಡ್ಡಿ, ಹಣ್ಣು–ಹಂಪಲು ಹಾಗೂ ಬಿಲ್ಲಿ–ದಮ್ಮಡಿಗಳನ್ನು ಕಾಣಿಕೆಯಾಗಿ ಸಲ್ಲಿಸುತ್ತಿದ್ರು. ಒಂದು ಶನಿವಾರ ಸಹಜವಾಗಿ ನನ್ನ ದೃಷ್ಟಿ ದೇವಿಗೆ ಅರ್ಪಿಸಿದ ವಸ್ತುಗಳ ಕಡೆಗೆ ಹೋಯಿತು. ವಸ್ತುಗಳನ್ನು ತೆಗೆದುಕೊಂಡರೆ ದೇವಿ ಅವರಿಗೆ ಒಳ್ಳೆಯದನ್ನು ಮಾಡುವದಿಲ್ಲ – ಎಂಬ ಭಯದಿಂದ ಯಾರೂ ಹಣ ಹಾಗೂ ಇತರೆ ವಸ್ತುಗಳಿಗೆ ಕೈಹಚ್ಚುತ್ತಿರಲಿಲ್ಲ. ಆದರೆ ಆ ಭಯ ನನಗಿರಲಿಲ್ಲ. "ಇವತ್ತು ನನ್ನ ದನಗಳನ್ನು ನೀವು ನೋಡಿಕೊಳ್ಳಿರಿ" ಎಂದು ನನ್ನ ಗೆಳತಿಯರಿಗೆ ಹೇಳ್ದೆ. ಅದಕ್ಕವರು ಒಪ್ಪಿದ್ರು, ಆವತ್ತು ನಾನು ದೇವಿಯ ಅಕ್ಕ–ಪಕ್ಕದಲ್ಲೆ ಸುತ್ತಾಡುತ್ತಿದ್ದೆ. ದೇವಿಯ ಮುಂದೆ ಒಂದು ಮಣ್ಣಿನ ಮುಚ್ಚಳ ಇಟ್ಟಿದ್ದೆನು ಹಾಗೂ ದೇವಿಯ ಸುತ್ತಮುತ್ತಲಿನ ಜಾಗೆಯನ್ನು ಮೇಲಿಂದ ಮೇಲೆ ಸ್ವಚ್ಛಗೊಳಿಸುತ್ತಿದ್ದೆ. ಭಕ್ತರು ಬೆಣ್ಣೆಯನ್ನು ಮಣ್ಣಿನ ಮುಚ್ಚಳದಲ್ಲಿ ಹಾಕುತ್ತಿದ್ದರು, ಕರಗಿ ನೀರಾಗುವ ಮೊದಲೇ ಅದನ್ನು ತಿನ್ನುತ್ತಿದ್ದೆ. ನನಗೆ ಹಾಲು, ಬೆಣ್ಣೆ, ತುಪ್ಪ ಎಂದ್ರೆ ಬಲು ಪ್ರೀತಿ.

ದೇವಿಯ ಗಡಿಗೆಯಲ್ಲಿ ಎಷ್ಟು ಹಣ ಕೂಡಿತ್ತು ಹಾಗೂ ವಸ್ತುಗಳು ಏನೇನು ಬಂದವು –ಎಂಬ ಲೆಕ್ಕವನ್ನು ಗೆಳತಿಯರಿಗೆ ತಿಳಿಸ್ತಿದ್ದೆ. ಯಾರಿಗೆ ಏನು ಬೇಕು ತೆಗೆದುಕೊಳ್ಳಿರಿ ಎಂದೂ ಹೇಳ್ತಿದ್ದೆ. ಆದರೆ ಗೆಳತಿಯರು ದೇವಿಗೆ ಹೆದರಿ ಏನನ್ನೂ ಮುಟ್ಟುತ್ತಿರಲಿಲ್ಲ. ನಾನು ಮಾತ್ರ ದೇವಿಗಿಟ್ಟ ಕಾಯಿಪಲ್ಯಗಳಾದ ಉಳ್ಳಾಗಡ್ಡಿ, ಮೆಂತೆ ಸೊಪ್ಪು, ಮುಳುಗಾಯಿ (ಬದನೆಕಾಯಿ)ಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಇಟ್ಟು ಬರುತ್ತಿದ್ದೆ. ಇದು ಎಲ್ಲಿಂದ ಬಂತು? ಎಂದು ಮನೆಯವರಿಗೆ ತಿಳಿಸ್ತಲೇ ಇರಲಿಲ್ಲ. ಪ್ರತಿ ರವಿವಾರ ದೇವಿಗೆ ಬಂದ ಹಣದ ಕಾಣಿಕೆಯಿಂದ ನಾನು ಮಂಡಕ್ಕಿ, ಡಾಣಿ, ಉಂಡಿ ಖರೀದಿಮಾಡಿ ತರ್ತಿದ್ದೆ. ಎಲ್ಲರೂ ಸೇರಿ ತಿನ್ನುತ್ತಿದ್ದೆವು. ಆ ದಿನ ಯಾರೂ ರೊಟ್ಟಿ ಕಟ್ಟಿಕೊಂಡು ಬರ್ತಿರಲಿಲ್ಲ. ಅಂದು ನಮ್ಮೆಲ್ಲರಿಗೆ ಹಬ್ಬವೇ ಹಬ್ಬ, ಬರಬರುತ್ತ ದೇವಿ ಕ್ಷೀಣವಾಗುತ್ತ ಹೊರಟಳು. ಆ ದೇವಿಗೆ ಗೆದ್ದಲು ಹತ್ತಿತು. ಸೀರೆ ಹರಿಯಿತು. ರಥದ ಗಾಲಿಗಳು ಮುರಿದವು. ಆ ದೇವಿಯನ್ನು ಹೊತ್ತುಕೊಂಡು ಹೋಗಿ ನದಿಯಲ್ಲಿ ವಿಸರ್ಜನೆ ಮಾಡಿಬಂದೆನು.

ಇಂದಿರಾ : ಸವಣೂರ ರೈಲ್ವೆಸ್ಟೇಶನ್‌ಗೆ ಸ್ವಾತಂತ್ರ್ಯ ಹೋರಾಟಗಾರರು ಬೆಂಕಿ ಇಟ್ಟದ್ದು ಯಾಕೆ ಅಂತ ನೆನಪಿದೆಯಾ?

ಚೆನ್ನಮ್ಮ : ನಾನು ನನ್ನ ತಾಯಿಯ ತವರುಮನೆ ಹತ್ತಿಮತ್ತೂರಗೆ ಹೋಗಿದ್ದೆ. ಸವಣೂರ ಸ್ಟೇಶನ್ ಹತ್ತಿಮತ್ತೂರಿಗೆ ಸಮೀಪದಲ್ಲಿದೆ. ಸ್ವಾತಂತ್ರ್ಯ ಸೇನಾನಿಗಳ ಗುಂಪು ಸವಣೂರ ಸ್ಟೇಶನ್‌ಗೆ ಬೆಂಕಿ ಹಚ್ಚಿತು. ಸ್ಟೇಶನ್ ದಗದಗಿಸುತ್ತಿತ್ತು. ಜನ ಅವರವರ ಮಾಳಿಗೆಯ ಮೇಲೆ ನಿಂತು ಬೆಂಕಿ ನೋಡ್ತಿದ್ರು. ನಾನು ಬೆಂಕಿ ನೋಡಲು ಮಾಳಿಗೆ ಏರಲಾರಂಭಿಸಿದೆ. ನಮ್ಮ ಮಾವ ವೀರಪ್ಪ ನನ್ನ ಕೈಹಿಡಿದು ದರ–ದರ ಎಳಕೊಂಡು ಹೋಗಿ, ಕೋಣೆಯಲ್ಲಿ ದೂಡಿ ಕದಹಾಕಿದ್ರು. ನಾನು ಚಡಪಡಿಸತೊಡಗಿದ್ದೆ. ಎಷ್ಟೋ ಹೊತ್ಗೆ ಬಾಗಿಲ ತೆಗೆದರು. "ಇವಳ್‌ನ ಕೋಣೆಗೆ ಯಾಕೆ ಹಾಕಿದ್ರಿ?" ಎಂದು ಒಬ್ರು ಕೇಳಿದಕ್ಕೆ ನನ್ನ ಮಾವ "ಈ ಹುಡಗಿಯ ಮನೆತನದವರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ರು ಅಂಥ ವಾತಾವರಣದಲ್ಲಿ ಬೆಳೆದ ಹುಡುಗಿ, ಈಕೆ ಸ್ವಾತಂತ್ರ್ಯ ಯೋಧರ ಗುಂಪಿನಲ್ಲಿ ಸೇರಿದರೇನು ಗತಿ" ಎಂದು ಉತ್ತರಿಸಿ, ತಮಗೆ ಅಪವಾದ ಬಂದೀತೆಂದು ಹೆದರಿ ನನ್ನನ್ನು ತಿರುಗಿ ಊರಿಗೆ ಕಳಿಸಿದ್ರು.

ಮುಂದುವರಿಯುವುದು...

ಅಧಿನಾಯಕ

– ಜಿ.ಎಸ್. ಶಿವರುದ್ರಪ್ಪ

ನೀನೊಬ್ಬ ವಿಚಿತ್ರ ಮನುಷ್ಯ
ಎಲ್ಲವನ್ನು ಅಂಗಡಿ ತೆರೆದು
ಬೆಲೆ ಕಟ್ಟಬರದ ಈ ಮಂದಿಯ
ಮುಂದೆ ಹರಾಜಿಗಿಟ್ಟೆ
ಎಲ್ಲವನ್ನೂ ಕಟ್ಟಿಕೊಂಡೆ
ಆದರೂ ಏಕಾಂಗಿಯಾಗಿಯೇ ತೋರಿದೆ
ನೋಡುವುದಕ್ಕೆ ಏಕಾಂಗಿಯಾದರೂ
ಜನಗಣಮನ ಅಧಿನಾಯಕನಾಗಿ ನಡೆದೆ

ಕನ್ನಡ... ಕನ್ನಡಿಗ... ಕರ್ನಾಟಕ : ಅದರಗುಂಚಿ ಶಂಕರಗೌಡ

(1920)

– ಡಾ. ನಿಕೇತನ

ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ಹುರಿದುಂಬಿಸಲು ಗಾಂಧಿ ಅನುಯಾಯಿಗಳು ಹುಬ್ಬಳ್ಳಿಗೆ ಬಂದು ಮಾಡುತ್ತಿದ್ದ ಭಾಷಣಗಳಿಗೆಲ್ಲ ತಪ್ಪದೇ ಹಾಜರಾಗುತ್ತಿದ್ದ ಶಂಕರಗೌಡರು, ಹುಬ್ಬಳ್ಳಿಗೆ ಸುಭಾಷಚಂದ್ರ ಬೋಸರು ಆಗಮಿಸಿದ್ದಾಗ ಅವರ ಭಾಷಣ ಕೇಳಲು ತೆರಳಿದ್ದರು. ಆಗ ಬೋಸರತ್ತ ಹಸ್ತಾಕ್ಷರಕ್ಕಾಗಿ ಪುಸ್ತಕ ಚಾಚಿದಾಗ ಅದರಲ್ಲಿ ಬೋಸರು 'ದೇಶ್ ಕೀ ಸೇವಾ ಕರೋ' ಎಂದು ಬರೆದುಕೊಟ್ಟರು. ಅದರಂತೆ ದೇಶಕ್ಕಾಗಿಯೇ ತಮ್ಮ ಜೀವನ ಮುಡುಪಾಗಿಟ್ಟರು. ಮಹಾತ್ಮ ಗಾಂಧಿ, ಸುಭಾಷ ಚಂದ್ರ ಬೋಸ್ ಅವರ ಪ್ರಭಾವಕ್ಕೊಳಗಾದ ಶಂಕರಗೌಡರು, ಸ್ವಾತಂತ್ರ್ಯ ದೊರಕುವವರೆಗೂ ತಮ್ಮದೇ ವಲಯ ಕಟ್ಟಿಕೊಂಡು ಹೋರಾಟ ಮಾಡಿದರು.

ಶಂಕರಗೌಡರು 1920ರಲ್ಲಿ ನರಗುಂದ ತಾಲೂಕಿನ ಹುಣಸಿಕಟ್ಟೆಗ್ರಾಮದಲ್ಲಿ ಜನಿಸಿದರು. ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು, ಮಲತಾಯಿ ಬಸಮ್ಮ ಅವರ ಆಶ್ರಯದಲ್ಲಿ ಬೆಳೆದರು.

ದೇಶದ ಸ್ವಾತಂತ್ರ್ಯ ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯಾಗಬೇಕೆಂದು ಎಲ್ಲ ಭಾಷಿಕ ಮುಖಂಡರ ತೀರ್ಮಾನವಾಗಿತ್ತು. ಅದಕ್ಕೆ ತಕ್ಕಂತೆ ಕರ್ನಾಟಕ ಏಕೀಕರಣಕ್ಕಾಗಿ ಸಂಘಟನೆ ರಚನೆಯಾಯಿತು. ನಾರಾಯಣ ಪೈ, ದೊಡ್ಡಮೇಟಿ ಅಂದಾನಪ್ಪ ಹಲವು ಮುಖಂಡರು ಉಪವಾಸ, ಧರಣಿ ಮಾಡಿದರು. ಅದರಂತೆ ಶಂಕರಗೌಡರು ಸಹ ಅದರಗುಂಚಿ ಕಲ್ಮೇಶ್ವರ ದೇವಸ್ಥಾನದಲ್ಲಿ ಸುಮಾರು 23 ದಿನಗಳ ಉಪವಾಸ ನಡೆಸಿದರು.

ಇದೇ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಭೆಯನ್ನು ಹುಬ್ಬಳ್ಳಿ ಟೌನ್‌ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಕೆಪಿಸಿಸಿ ಅಧ್ಯಕ್ಷರೂ, ಸಂಸತ್ ಸದಸ್ಯರೂ ಆಗಿದ್ದ ಎಸ್. ನಿಜಲಿಂಗಪ್ಪ ಅವರು ಸಭೆ ನಡೆಸಬೇಕಿತ್ತು. ಆಗ ಅಲ್ಲಿ ಸೇರಿದ್ದವರು 'ಶಂಕರಗೌಡರು ಉಪವಾಸ ಕುಳಿತು ಸಾಯುತ್ತಿದ್ದಾರೆ. ಮೊದಲು ಕರ್ನಾಟಕ ಏಕೀಕರಣದ ಭರವಸೆ ನೀಡಬೇಕು. ಶಂಕರಗೌಡರು ಉಪವಾಸ ಕೈ ಬಿಡುವಂತೆ ಮಾಡಬೇಕು' ಎಂದು ಆಗ್ರಹಿಸಿದರು. ಮುಖಂಡರಿಂದ ಸ್ಪಂದನೆ ಸಿಗದಿದ್ದಾಗ ಕಲ್ಲು ತೂರಾಟ ನಡೆಸಿದರು. ಪರಿಸ್ಥಿತಿ ನಿಯಂತ್ರಣಕ್ಕಾಗಿ ಗೋಲಿಬಾರ್ ಕೂಡ ನಡೆದಿತ್ತು. ಗದ್ದಲದ ನಡುವೆಯೇ ಅಂದು ನಡೆದ ಕೆಪಿಸಿಸಿ ಸಭೆಯಲ್ಲಿ 'ಕರ್ನಾಟಕ ಏಕೀಕರಣ ಮಾಡಬೇಕು", ಆರು ತಿಂಗಳೊಳಗೆ ಏಕೀಕೃತ ಕರ್ನಾಟಕ ರಚಿಸಬೇಕು. ಇಲ್ಲದಿದ್ದಲ್ಲಿ ಆರು ತಿಂಗಳ ನಂತರ ಸಂಸತ್ ಸದಸ್ಯರು, ಮಂತ್ರಿಗಳು, ಮುಂಬೈ ಸರ್ಕಾರದ ವಿಧಾನಸಭೆಗೆ ಇಲ್ಲಿಂದ ಆಯ್ಕೆಯಾದ ಜನಪ್ರತಿನಿಧಿಗಳೆಲ್ಲರೂ ರಾಜೀನಾಮೆ ನೀಡಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ' ಎಂಬ ಎಚ್ಚರಿಕೆಯ ನಿರ್ಣಯವನ್ನು ಕಾರ್ಯಕಾರಿ ಸಮಿತಿ ಕೈಗೊಂಡಿತು. ಆ ಬಳಿಕ ಅದರಗುಂಚಿಗೆ ತೆರಳಿ ಶಂಕರಗೌಡರಿಗೆ ಕಾರ್ಯಕಾರಿ ಸಮಿತಿ ನಿರ್ಣಯ ತಿಳಿಸಿ ಉಪವಾಸವನ್ನು ಕೈಬಿಡುವಂತೆ ಎಸ್. ನಿಜಲಿಂಗಪ್ಪ, ಅವರೂ, ಹಳ್ಳಿಕೇರಿ ಗುದ್ಲೆಪ್ಪ ಅವರು ಮನವಿ ಮಾಡಿದ್ದರು. ಹೋರಾಟದ ಫಲವಾಗಿಯೇ ಹೈಪವರ್ ಕಮಿಟಿ ರಚನೆಯಾಗಿದ್ದರೂ 1955ರಲ್ಲಿ ಕರ್ನಾಟಕದಲ್ಲಿ ರಾಯಚೂರು, ಬೀದರ, ಗುಲಬುರ್ಗಾ, ವಿಜಯಪುರ, ಧಾರವಾಡ, ಕಾರವಾರ ಸೇರಿದಂತೆ ಮತ್ತಿತರ ಪ್ರದೇಶಗಳನ್ನು ಸೇರಿಸಿಕೊಳ್ಳಲು ವಿರೋಧ ವ್ಯಕ್ತವಾಗಿತ್ತು. ಆಗ ಮತ್ತೆ ಹಂಪಿಯಲ್ಲಿ ಶಂಕರಗೌಡರು 'ಅಖಂಡ ಕರ್ನಾಟಕ'ದ ಬೇಡಿಕೆಯನ್ನಿಟ್ಟು ಉಪವಾಸ ಕುಳಿತರು. 10 ದಿನಗಳ ಕಾಲ ಉಪವಾಸ ಕುಳಿತ ಬಳಿಕ ಅಖಂಡ ಕರ್ನಾಟಕ ರಚನೆಗೆ ನಿರ್ಧಾರದ ಪ್ರಕಟಣೆ ಹೊರಬಂತು. 1956ರಲ್ಲಿ ಕರ್ನಾಟಕ ರಾಜ್ಯ ಉದಯವಾಯಿತು.



ಕರ್ನಾಟಕ ಏಕೀಕರಣದಲ್ಲಿ ಅದರಗುಂಚಿ ಶಂಕರಗೌಡರ ಪಾತ್ರ ಬಹುದೊಡ್ಡದು. ನಿರಂತರ ಉಪವಾಸ, ಹೋರಾಟದ ಮೂಲಕ ಗಮನ ಸೆಳೆದಿದ್ದ ಶಂಕರಗೌಡರು, 1995ರಲ್ಲಿ ಶ್ರೀಶೈಲಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದವರು ವಾಪಸಾಗಲೇ ಇಲ್ಲ. ಎಲ್ಲಿ ಹೋದರು ಎಂಬುದು ಕೂಡ ಗೊತ್ತಾಗಲಿಲ್ಲ. ಆಗ ಧಾರವಾಡದ ಎಸ್ಪಿಯಾಗಿದ್ದ ಕೆಂಪಯ್ಯ ಅವರು ಶ್ರೀಶೈಲ, ಸಬರಮತಿ ಆಶ್ರಮಕ್ಕೆ ಸಿಬ್ಬಂದಿಯನ್ನು ಕಳುಹಿಸಿ ಶಂಕರಗೌಡರನ್ನು ಹುಡುಕಿಸುವ ಪ್ರಯತ್ನ ಮಾಡಿದ್ದರು. ಆದರೆ ಅದು ಫಲಕಾರಿಯಾಗಲಿಲ್ಲ. ಹೀಗಾಗಿ ಈಗಲೂ ಶಂಕರಗೌಡರು ಏನಾದರು ಎಂಬುದು ನಿಗೂಢವಾಗಿಯೇ ಉಳಿದಿದೆ.

ಅದರಗುಂಚಿ ಶಂಕರಗೌಡರಂತಹ ಮಹಾನ್ ಹೋರಾಟಗಾರನನ್ನು ನೆನಪಿಸುವಂತಹ ಕಾರ್ಯಕ್ರಮಗಳನ್ನು ಸರ್ಕಾರ ಮಾಡಬೇಕಿದೆ. ಅದರಗುಂಚಿ ಶಂಕರಗೌಡ ಅವರ ವಿಚಾರಧಾರೆ, ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣಕ್ಕಾಗಿ ಇವರ ಕೊಡುಗೆಯನ್ನು ಇಂದಿನ ಯುವಜನರಿಗೆ ತಿಳಿಸುವಂಥಹ ಸ್ಮರಿಸುವಂತಹ ವಿಚಾರ ಸಂಕಿರಣಗಳು, ಕಮ್ಮಟಗಳ ಅವಶ್ಯವಾಗಿ ನಡೆಸಬೇಕಾಗಿದೆ.

ಹೆಮ್ಮೆಯ ಕನ್ನಡಿಗ : ಡಾ. ಯು.ಆರ್. ಅನಂತಮೂರ್ತಿ

(21.12.1932 – 22.08.2014)

– ಡಾ. ಎಸ್. ರಾಮಲಿಂಗೇಶ್ವರ

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಡಾ. ಅನಂತಮೂರ್ತಿ ಅವರು ಕನ್ನಡದ ಪ್ರಮುಖ ಸಾಹಿತಿ, ಚಿಂತಕ ಹಾಗೂ ವಿಮರ್ಶಕ ಮತ್ತು ನವ್ಯ ಚಳುವಳಿಯ ಪ್ರವರ್ತಕರಲ್ಲೊಬ್ಬರಾಗಿದ್ದಾರೆ. ಇಂಗ್ಲೀಷ್ ಪ್ರಾಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ ಇವರು ಶಿಕ್ಷಣ, ಸಾಹಿತ್ಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. 'ದೂರ್ವಾಸಪುರ'ದ ಸಂಸ್ಕೃತ ಪಾಠಶಾಲೆಯಿಂದ ಪ್ರಾರಂಭವಾದ ಅವರ ಓದು ತೀರ್ಥಹಳ್ಳಿ, ಮೈಸೂರುಗಳಲ್ಲಿ ಮುಂದುವರಿಯಿತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ ಪದವಿ, ಕಾಮನ್‌ವೆಲ್ತ್ ವಿದ್ಯಾರ್ಥಿ ವೇತನದೊಂದಿಗೆ ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ಮತ್ತು ತೌಲನಿಕ ಸಾಹಿತ್ಯದಲ್ಲಿ (1966) ಪಿಎಚ್.ಡಿ ಪದವಿ ಪಡೆದರು. ನಂತರ "ಋಜುವಾತು" ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಅನಂತಮೂರ್ತಿ ಅವರು ಶಾಂತವೇರಿ ಗೋಪಾಲಗೌಡ ಮತ್ತು ಲೋಹಿಯಾ ಅವರ ತಾತ್ವಿಕತೆ ಮತ್ತು ಆದರ್ಶದ ಅನುಯಾಯಿಯಾಗಿದ್ದರು. 1970ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಭಾಷೆಯ ಪ್ರಾಧ್ಯಾಪಕರಾಗಿ, 1987ರಿಂದ 1991 ರವರೆಗೆ ಕೇರಳದ ಕೊಟ್ಟಾಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾದ ಅಧ್ಯಕ್ಷರೂ ಆಗಿದ್ದರು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವುದರೊಂದಿಗೆ ಅನೇಕ ಭಾರತೀಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಎರಡು ಬಾರಿ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇವರನ್ನು ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದ ಮೊದಲ ಕುಲಪತಿಯನ್ನಾಗಿ ನೇಮಿಸಲಾಗಿತ್ತು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ 'ಮೇಳಿಗೆ' ಗ್ರಾಮದಲ್ಲಿ ರಾಜಗೋಪಾಲಾಚಾರ್ಯ, ಸತ್ಯಮ್ಮ ದಂಪತಿಗಳಿಗೆ ಮಗನಾಗಿ ಅನಂತಮೂರ್ತಿ ಅವರು ಜನಿಸಿದವರಾಗಿದ್ದಾರೆ. ಅನಂತಮೂರ್ತಿ ಅವರು ದೇಶ ವಿದೇಶಗಳ ಹಲವಾರು ವಿಚಾರ ಸಂಕಿರಣಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ದೇಶ–ವಿದೇಶಗಳ ಸಾಹಿತ್ಯಕ ಪತ್ರಿಕೆಗಳಲ್ಲಿ ಇವರ ಲೇಖನಗಳು, ಪ್ರಬಂಧಗಳು, ವಿಚಾರಗಳು ಪ್ರಕಟವಾಗಿವೆ.

ಕನ್ನಡ ಭಾಷೆಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಆರನೇ ಸಾಹಿತಿ ಇವರಾಗಿದ್ದಾರೆ. ಇವರು ದೂರದರ್ಶ ಹಾಗೂ ಆಕಾಶವಾಣಿಗಾಗಿ ಕನ್ನಡ ಸಾಹಿತ್ಯದ ದಿಗ್ಗಜರಾದ ಗೋಪಾಲಕೃಷ್ಣ ಅಡಿಗ, ಶಿವರಾಮ ಕಾರಂತ, ಆರ್.ಕೆ. ನಾರಾಯಣ್, ಆರ್.ಕೆ .ಲಕ್ಷ್ಮಣ್ ಮತ್ತು ಜನರಲ್ ಕಾರಿಯಪ್ಪ ಮುಂತಾದವರನ್ನು ಸಂದರ್ಶನ ಮಾಡಿದ್ದಾರೆ.



ಇವರ ಕಥಾಸಂಕಲನಗಳು 'ಎಂದೆಂದೂ ಮುಗಿಯದ ಕತೆ', 'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು', 'ಕ್ಲಿಪ್ ಜಾಯಿಂಟ್', 'ಘಟಶ್ರಾದ್ಧ', 'ಸೂರ್ಯನ ಕುದುರೆ', 'ಪಚ್ಚೆ ರೆಸಾರ್ಟ್', 'ಬೇಟೆ', 'ಬಳೆ ಮತ್ತು ಓತಿಕೇತ', (ಎರಡು ಕಥಾಸಂಕಲನಗಳು) 'ಎರಡು ದಶಕದ ಕತೆಗಳು', 'ಮೂರು ದಶಕದ ಕಥೆಗಳು', 'ಐದು ದಶಕದ ಕತೆಗಳಾಗಿ ಕ್ರೋಡೀಕರಣಗೊಂಡು ಪ್ರಕಟಗೊಂಡಿವೆ.

ಕಾದಂಬರಿಗಳು : 'ಸಂಸ್ಕಾರ', 'ಭಾರತೀಪುರ', 'ಅವಸ್ಥೆ', 'ಭವ', 'ದಿವ್ಯ', 'ಪ್ರೀತಿ ಮೃತ್ಯು ಮತ್ತು ಭಯ'.

ವಿಮರ್ಶೆ ಮತ್ತು ವೈಚಾರಿಕ ಸಂಕಲನ : 'ಪ್ರಜ್ಞೆ ಮತ್ತು ಪರಿಸರ', 'ಪೂರ್ವಾಪರ', 'ಸಮಕ್ಷಮ', 'ಸನ್ನಿವೇಶ', 'ಯುಗಪಲ್ಲಟ', 'ವಾಲ್ಮೀಕಿಯ ನೆವದಲ್ಲಿ', 'ಮಾತು ಸೋತ ಭಾರತ', 'ಸದ್ಯ ಮತ್ತು ಶಾಶ್ವತ', 'ಬೆತ್ತಲೆ ಪೂಜೆ ಏಕೆ ಕೂಡದು', 'ಋಜುವಾತು', 'ಶತಮಾನದ ಕವಿ ಯೇಟ್ಸ್', 'ಕಾಲಮಾನ', 'ಮತ್ತೆ ಮತ್ತೆ ಬ್ರೆಕ್ಟ್', 'ಶತಮಾನದ ಕವಿ ವರ್ಡ್ಸ್ ವರ್ತ್', 'ಶತಮಾನದ ಕವಿ ರಿಲ್ಕೆ', 'ರುಚಿಕರ ಕಹಿಸತ್ಯಗಳ ಕಾಲ', 'ಆಚೀಚೆ'.

ನಾಟಕ : 'ಆವಾಹನೆ'

ಕವನ ಸಂಕಲನ : 'ಹದಿನೈದು ಪದ್ಯಗಳು', 'ಮಿಥುನ', 'ಅಜ್ಜನ ಹೆಗಲ ಸುಕ್ಕುಗಳು', 'ಅಭಾವ', 'ಸಮಸ್ತ ಕಾವ್ಯ'.

ಆತ್ಮಕಥನಗಳು : 'ಸುರಗಿ', 'ಮೊಳಕೆ' (ಅಮಿತನ ಆತ್ಮಚರಿತ್ರೆ) ಕೃತಿಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯ ಸೇವೆಗೆ ಕೃಷ್ಣರಾವ್ ಚಿನ್ನದ ಪದಕ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಬಷೀರ್ ಪುರಸ್ಕಾರ, ರವೀಂದ್ರ ಟ್ಯಾಗೋರ್ ಸ್ಮಾರಕ ಪದಕ, ಗಣಕ ಸೃಷ್ಟಿ ಪ್ರಶಸ್ತಿ, ಪದ್ಮಭೂಷಣ, ಶಿಖರ್ ಸಮ್ಮಾನ್ ಪ್ರಶಸ್ತಿಗಳು ಸಂದಿವೆ.

ಅನಂತಮೂರ್ತಿ ಅವರ ಸಂಸ್ಕಾರ, ಅವಸ್ಥೆ ಕಾದಂಬರಿ ಮತ್ತು ಬರ, ಘಟಶ್ರಾದ್ಧ ಕತೆಗಳನ್ನಾಧರಿಸಿ ಚಲನಚಿತ್ರಗಳು ನಿರ್ಮಾಣವಾಗಿವೆ. ಇವೆಲ್ಲವೂ ಭಾರತೀಯ ಚಿತ್ರರಂಗದ ಮಹತ್ವದ ಚಿತ್ರಗಳಾಗಿದ್ದು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾನ್ಯತೆ ಹಾಗೂ ಪ್ರಶಸ್ತಿಗೆ ಭಾಜನವಾಗಿವೆ.

BIOGRAPHY OF MOTHER KASTURBA GANDHI (11.04.1869 - 22.02.1944)

Collection by : V.N. Tippanagouda)

10.1.1908 : *As Indian Satyagrahis filled up the Johannesburg jail, in absence of Mohandas. Kasturba tried to keep up everyone's spirits in the Phoenix Settlement. She be gan to exert gentle, but unquestioned authority. She won respect, co-operation and affection from all because of her unassuming gentle dignity. She was a de manding task master but never dictatorial. She never forgot' or 'overlooked' what was necessary. Though uneducated, she maintained accurate accounts. Extremely self-disciplined she soon became everyone's 'Ba' (mother). Mohandas was released 3 weeks later after an understanding with General Smuts.under which Indians would register voluntarily and the Black Act would be repealed.*

10 days later while going for registration, he was severely beaten by Indian op ponents of voluntary registration. Kasturba could not go to see him because she would not use the Phoenix money for 'selfish needs.' She supported him. I have. been preparing myself to face the worst ever since you took to public life. Your must not be burdened with worries about me or the family'. But when alone she wept.

10.4.1908 : *Birth of Rami, daughter of Harilal and Gulab, Kasturba's first grand-child.*

24.7.1908 :*General Smuts did not repeal the Black Act. Hence, Satyagraha was resumed.*

27.7.1908 : *Harilal too joined Satyagraha and was arrested and awarded 7 day hard labour.*

31.7.1908 : *Mohandas formally gave up law practice.*



10.8.1908 : *Harilal again arrested, awarded one month's hard labour.*

16.8.1908 : *Nearly 3000 Indians, under Gandhiji's leadership, burned their registration cards. 'The Daily Mail', London, compared it with the 'Boston Tea Party' of American Revolution.*

10.10.1908 : *Gandhiji imprisoned for 2 months. In prison, he received message of Kasturba's failing health. He wrote a letter of tender concern to Kasturba: "I hope you will understand this and not feel offended. This is all I ask of you". After release, he saw how haggard, tired and listless she had become. He took her to a doctor in Durban who did a surgery. He went to Johannesburg but got a call from the doctor, "Kasturba is very weak. I feel she must be given beef broth" He rushed to Durban and Ba said she preferred death to taking beef soup. He carried her in a critical state to Phoenix Settlement. She recovered under his ministrations.*

25.2.1909 : *Gandhiji arrested for third time, given 3 months' sentence. Harilal too arrested for third time, given 6 months' hard labour.*

23.6.1909 : *Gandhiji, with Haji Habib, went to London to represent the case of the Indians in South Africa. The mission was 'fruitless'. Left London on 13.11.1909. On return journey, he wrote his first important book Hind Swaraj'.*

To be continued...

ನಮ್ಮ ಓದಿಗೆ

ಸಂಗ್ರಹ : ಮಹೇಶ್

	ಶೀರ್ಷಿಕೆ	ಪ್ರಕಾಶಕರು	ಲೇಖಕರು
1.	ಅಂದದ ಹೆಣ್ಣಿನ ನಾಚಿಕ	ಮಡಿಲು	ಎನ್.ಎಸ್. ಶ್ರೀಧರ ಮೂರ್ತಿ
2.	ವ್ಯಾಸರಾವ್ ನಿಂಜೂರ್ ಅವರ ಸಮಗ್ರ ಕಥೆಗಳು	ಅಂಕಿತ ಪ್ರಕಾಶನ	ವ್ಯಾಸರಾವ್ ನಿಂಜೂರ್
3.	ಒಂದು ಕೋಪಿಯ ಕಥೆ	ಸ್ನೇಹ ಬುಕ್ ಹೌಸ್	ಕೌಶಿಕ್ ಕೂಡುರಸ್ತೆ
4.	ಆ ಪತ್ರಿಕೋದ್ಯಮ	ಬಹುರೂಪಿ	ಜಿ.ಎನ್. ರಂಗನಾಥ ರಾವ್
5.	ಕನ್ನಡ ಭಾಷೆ ರಚನೆ ಮತ್ತು ಬಳಕೆ	ಅಭಿನವ ಪ್ರಕಾಶನ	ಕೆ.ಪಿ. ಭಟ್
6.	ಹೊನ್ನಾವರಿಕೆ	ಅರಿವು ಪ್ರಕಾಶನ	ಎಂ.ಆರ್. ಕಮಲ
7.	ಲೈಫ್ ಇಸ್ ಬ್ಯೂಟಿಫುಲ್	ಸಾವನ್ನ	ಜೋಗಿ
8.	ತೇಜೋ ತುಂಗಭದ್ರಾ	ವಸುಧೇಂದ್ರ'	ಜೋಗಿ
7.	Bangalore's Lalbagh: A Chronicle of The Garden and the City	Suresh Jayaram	1 Shanthi Road
8.	Nature in the City: Bengaluru in the Past, Present, and Future	Harini Nagendra	Oxford University Press India
9 .	Heritage Trees in & around Bangalore	Vijay Thiruvady	Bangalore Environment Trust

ಕಸ್ತೂರ್‌ಬಾ ಗಾಂಧಿ : (11.04.1869 - 22.02.1944)

– ಇಂದಿರಾ ಕೃಷ್ಣಪ್ಪ


(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಕಸ್ತೂರ್‌ಬಾಳಿಗೆ, ಮೋಹನದಾಸ ಹೆಚ್ಚಿನ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋಗಿರುವ ಬಗ್ಗೆ ಸಂತೋಷವಿದ್ದರೂ ಅಗಲಿಕೆಯ ನೋವು ಭಾದಿಸುತ್ತಲೇ ಇತ್ತು. ಆಗೆಲ್ಲಾ ಅತ್ತೆ ಪುತಲೀಬಾಯಿಯಲ್ಲಿ ತಂದೆ ತಾಯಿಯ ಮಮತೆಯನ್ನು ಮತ್ತು ಮಗನಲ್ಲಿ ಮೋಹನನ ಪ್ರೀತಿಯನ್ನು ಕಾಣಲಾರಂಭಿಸಿದಳು. ಅತ್ತೆ – ಪತಿಯನ್ನು ಕಳೆದುಕೊಂಡ ನಂತರ, ಮೋಹನನಲ್ಲಿ ಜೀವನೋತ್ಸವವನ್ನು ಕಾಣುತ್ತಿದ್ದರು. ಆಗಾಗ್ಗೆ ಆಕೆ "ನೋಡು ಕಸ್ತೂರ್, ಹರಿಲಾಲ್ ತಂದೆಯನ್ನೇ ಹೋಲುತ್ತಾನೆ, ನನ್ನ ಮಗನನ್ನೇ ನೋಡಿದಂತಾಗುತ್ತದೆ" ಎಂದು ಮೊಮ್ಮಗನನ್ನು ಮುದ್ದಾಡುತ್ತಿದ್ದರು. ಆದರೇನು? ಆಗ ಮನೆಯ ಯಜಮಾನ ಕರಮಚಂದರು ಇದ್ದಾಗಿನಂತೆ ಮನೆಯ ಸುಖಸಮೃದ್ಧಿಯ ಬದುಕು ಮರೆಯಾಗುತ್ತಾ ಸಾಗಿತ್ತು. ಎರಡನೇ ಸೊಸೆ ನಂದ ಕುನ್ವರ್‌ಳಿಗೆ ಎರಡನೇ ಮಗುವಾಯಿತು. ಇನ್ನಿಬ್ಬರು ಸೊಸೆಯರಾದ ಗಂಗಾ ಹಾಗೂ ಕರ್ಸನದಾಸರಿಬ್ಬರಿಗೂ ಮೊದಲನೇ ಹೆಣ್ಣುಮಕ್ಕಳೇ ಜನಿಸಿದ್ದರು. ಹೀಗೆ ಮನೆಯ ಸದಸ್ಯರ ಸಂಖ್ಯೆ ದಿನೇದಿನೇ ವೃದ್ಧಿಸುತ್ತಲೇ ಇತ್ತು. ಇದರೊಂದಿಗೆ ಮೋಹನದಾಸನ ಶಿಕ್ಷಣದ ವೆಚ್ಚವೂ ಸೇರಿದಂತೆ, ಮನೆಯಲ್ಲಿ ಆರ್ಥಿಕ ಸಂಕಷ್ಟಗಳು ದ್ವಿಗುಣಗೊಳ್ಳತೊಡಗಿತ್ತು. ಇದು ಕಸ್ತೂರ್‌ಬಾಳ ಅರಿವಿಗೆ ಬರಲಾರಂಭಿಸಿದಾಗ, "ತಾನೂ, ತವರು ಮನೆಯಲ್ಲಿ ವೆಚ್ಚ ಮಾಡಿದಂತೆ, ಈಗ ಇಲ್ಲಿ ಮಾಡಲಾಗದು; ಪತಿಯ ಅಣ್ಣಂದಿರ ದುಡಿಮೆಯಲ್ಲಿ ತಾನೂ ಮತ್ತು ಮಗ ಇದ್ದೇವೆ"– ಎಂಬ ಭಾವ ಮನದಲ್ಲಿ ಒಡಮೂಡತೊಡಗಿತ್ತು. 'ಬಾ' ತನ್ನೆಲ್ಲಾ ವೆಚ್ಚಗಳನ್ನು ಕಡಿತಗೊಳಿಸತೊಡಗಿದಳು. ಹೊಸ ಬಟ್ಟೆ, ಆಭರಣಗಳು ದೂರದ ಮಾತೇ ಆಯಿತು. ತವರು ಮನೆಯಲ್ಲಿ ಕೊಟ್ಟ ಆಭರಣಗಳು ಒಂದೊಂದೇ ಕರಗಿ ಹೋಗತೊಡಗಿದವು. ಹಬ್ಬ ಹರಿದಿನಗಳಲ್ಲಿ, ನಾದಿನಿಯರಿಂದ ಸೀರೆ ಪಡೆದು ಉಡಲಾರಂಭಿಸಿದಳು. ಅತ್ತೆ ಪುತಲೀಬಾಯಿ ಅವರಂತೆ, ಎಲ್ಲರ ಊಟವಾದ ನಂತರ ಉಳಿದಿದ್ದನ್ನು 'ಬಾ' ಊಟಮಾಡಲಾರಂಭಿಸಿದಳು. ಮಗನಿಗೆ ಹೊಟ್ಟೆ ತುಂಬಿಸಿದ ನಂತರ, ಅಲ್ಪಸ್ವಲ್ಪ 'ಬಾ'ಳಿಗೆ ದಕ್ಕುತ್ತಿತ್ತು.

'ಬಾ' ಕಿಟಕಿಯ ಬದಿಯಲ್ಲಿ ಕುಳಿತು, ಮೋಹನನಿಂದ ಬರುವ ಪತ್ರಗಳಿಗಾಗಿ, ಪೋಸ್ಟ್‌ಮ್ಯಾನ್‌ನನ್ನು ನಿರೀಕ್ಷಿಸಲಾರಂಭಿಸಿದ್ದಳು. ಹಾಗೆ ಕುಳಿತಾಗಲೆಲ್ಲಾ ಮೋಹನನ ಪ್ರೀತಿಭರಿತ ಕಣ್ಣುಗಳು ಗೋದಿ ಹಿಟ್ಟಿನ ಮಿಠಾಯಿ ಅಗಿಯುತ್ತಿರುವ ಆತನ ಹಲ್ಲುಗಳು ಕಣ್ಣು ಮುಂದೆ ಚಲಿಸುತ್ತಿದ್ದವು. ಆತ ಅಲ್ಲಿ ಇರಬಹುದಾದ ಸ್ಥಿತಿಗತಿಗಳನ್ನು ಕುರಿತು ಚಿಂತಿಸುತ್ತಿರುವಾಗಲೇ, ಪೋಸ್ಟ್‌ಮನ್ ತಂದುಕೊಟ್ಟ ಪತ್ರಗಳು, ಮನೆಯವರ ಕೈ ಸೇರಿದ್ದನ್ನೂ, ಅವರೆಲ್ಲರೂ ಸೇರಿ ಪತ್ರ ಓದುವುದನ್ನೂ, ಎಲ್ಲಾ ಪತ್ರಗಳು, ತಾಯಿ – ಪುತಲೀಬಾಯಿ ಅಥವಾ ಅಣ್ಣ ಲಕ್ಷ್ಮೀದಾಸರಿಗೆ ಹೆಸರಿಸಿ ಬರೆದಿರುವುದು, 'ಬಾ'ಳ ಗಮನಕ್ಕೆ ಬಂದಿತ್ತು. ಆದರೆ ತಾನು ಓದಿ ಬರೆಯಲು ಕಲಿಯಲಿಲ್ಲವೆಂಬ ಬೇಸರವೂ ಉಂಟಾಗಿತ್ತು.

ಪೋಸ್ಟ್‌ಮನ್, ಒಂದು ದಿನ ಬಂದು ದೊಡ್ಡ ಲಕೋಟೆಯನ್ನು ತಂದು ಕೊಟ್ಟನು. ಅದನ್ನು ತೆರೆದ ನಾದಿನಿ, 'ಬಾ'ಳ ಬಳಿಗೆ ಬಂದು "ಕಸ್ತೂರ್, ಬಾ ಇಲ್ಲಿ.., ನೋಡಿಲ್ಲಿ..., ಮೋಹನದಾಸನನ್ನು ನೋಡು ಬಾ ಇಲ್ಲಿ, ಅವನು ಹೇಗೆ ದೊಡ್ಡ ಸಾಹೇಬನಾಗಿದ್ದಾನೆ. ನೋಡು ಬಾರೆ, ಆಂಗ್ಲರ ಸೂಟಿನಲ್ಲಿ ನೋಡೆ..., ಆತನ ಹೇರ್‌ಸ್ಟೈಲ್ ಎಷ್ಟು ಚಂದ ಮಾಡಿಸಿಕೊಂಡಿದ್ದಾನೆ, ಎಷ್ಟು ಸುಂದರವಾಗಿ ಕಾಣಿಸುತ್ತಿದ್ದಾನೆ, ಅಲ್ಲಿ ಆತನಿಗೆ ಬಿಳಿ ಮೇಮ್‌ಗಳು ಸಿಕ್ಕಿರಬಹುದು, ನೀನು ಅವನನ್ನು ಸರಿಯಾಗಿ ನೋಡು"– ಎಂದು ಒಂದೇ ಉಸಿರಿನಲ್ಲಿ ಹೇಳುತ್ತಾ ಆ ಲಕೋಟೆಯನ್ನು ಕಸ್ತೂರಳ ಕೈಗೆ ಕೊಟ್ಟಿದ್ದಳು. ಸರ್‍ರನೆ ಲಕೋಟೆ ತೆರೆದು ನೋಡುವಾಗ 'ಬಾ'ಳ ಹೃದಯದ ಮಿಡಿತ ಜೋರಾಯಿತು. ತಲೆಯ ಮೇಲೆ ಪೇಟವಿಲ್ಲದೆ, ಸೊಗಸಾಗಿ ಬಾಚಿದ, ಬಲಭಾಗ ಬೈತಲೆ ತೆಗೆದ ತಲೆಗೂದಲ ವಿನ್ಯಾಸ, ಐರೋಪ್ಯರ ಸೂಟು, ಟೈ, ಬೋವ್ ಹೊಳಪು ಕಣ್ಣುಗಳ ಭಾವಚಿತ್ರ ನೋಡುತ್ತಾ "ಈತ, ಹರಿಲಾಲನ ಅಪ್ಪನೇ? ನಾನು ನೋಡಿದ, ನನ್ನ ಮೋಹನ ಇವನು ಅಲ್ಲವೇ ಅಲ್ಲ; ಕಣ್ಣೀರು ತುಂಬಿದ ಕಣ್ಣುಗಳು, ಅಗಲಿಕೆಯ ಭಾರದ ಹೃದಯ ಹೊತ್ತು, ರಾಜಕೋಟ್‌ದಿಂದ ನಿರ್ಗಮಿಸಿದ ಮೋಹನ ಅಲ್ಲವೇ ಅಲ್ಲ" ಎಂದು ಕಸ್ತೂರ್ ಆಶ್ಚರ್ಯ ಹಾಗೂ ನೋವಿನ ಭಾರದಿಂದ, ಪೋಟೋವನ್ನು ಎದೆಗಪ್ಪಿಕೊಂಡಳು. ಹದಿನೆಂಟು ತಿಂಗಳುಗಳಿಂದ ಕಹಿಸಿಹಿ ನೆನಪುಗಳೇ ತುಂಬಿದ ಹೃದಯಕ್ಕೆ ಆ ಭಾವಚಿತ್ರದಿಂದ ಮತ್ತಷ್ಟು ಆತಂಕಗಳೇ ಸುತ್ತಿಕೊಂಡವು. ಅವನ ಸುಂದರ ವರ್ಚಸ್ಸು, ಮನದಲ್ಲಿ ಸಂತೋಷದ ಒರತೆ ತಂದರೂ, ಅಲ್ಲಿ ಅವನಿಗೆ "ಗೋರಿ ಮೇಮ್" ಒಬ್ಬಳ ಸಹವಾಸ ಆಗೇ ಇರುತ್ತದೆ, ಎಂಬ ಕಲ್ಪನೆಯಿಂದ ಕಸ್ತೂರ್ ವಿಚಲಿತಳೂ ಆದಳು. ತಕ್ಷಣ, ಮಗು ಹರಿಲಾಲನನ್ನು ಎತ್ತಿಕೊಂಡು ಮಹಡಿಗೆ ಹೋಗಿ, ಅವನನ್ನು ಅಪ್ಪಿಕೊಂಡು ಮುದ್ದಾಡುತ್ತಾ ರೋದಿಸಲಾರಂಭಿಸಿದ್ದಳು. ಹರಿದ ಲಕೋಟೆ ಹಾಗೂ ಅದರೊಳಗಿನ ಮೋಹನನ ಹೊಸ ಅವತಾರದ ಭಾವಚಿತ್ರ ಕೆಳಮನೆಯ ಹಾಲ್‌ನಲ್ಲೇ ಉಳಿದಿತ್ತು.



ಲಂಡನ್ನಿನಲ್ಲಿ ವಿದ್ಯಾರ್ಥಿ ಮೋಹನದಾಸ

ಮುಂದುವರಿಯುವುದು.

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

- ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಹಾತ್ಮ ಗಾಂಧೀಜಿಯವರ ವಿಶೇಷತೆ ಎಂದರೆ, ಅವರ ಪ್ರತಿಯೊಂದು ಕಾರ್ಯವೂ ಧಾರ್ಮಿಕ ಚೈತನ್ಯದಿಂದ ಕೂಡಿರುತ್ತಿತ್ತು. ಅವರು ಚರಕತತ್ವ ಕುರಿತು "ನಾನು ನೂಲುವ ಚರಕದಿಂದ ಹೊರಬರುವ ಪ್ರತಿಯೊಂದು ದಾರದಲ್ಲೂ ದೇವರನ್ನು ಕಾಣುತ್ತಾನೆ. ದೇವರೊಂದಿಗೆ ಸಂಪರ್ಕ ಸಾಧಿಸಲು ಒಂದಲ್ಲಾ ಒಂದು ಸಾಧನ ಬೇಕೇ ಬೇಕು. ನಾನು ಚರಕವನ್ನೇ ದೇವರೊಡನೆ ಸಂಪರ್ಕ ಸಾಧಿಸುವ ಸಾಧನವನ್ನಾಗಿ ಮಾಡಿಕೊಂಡಿದ್ದೇನೆ. ಇದರ ಮೂಲಕವೇ ನಾನು ದೇವರನ್ನು ಕಾಣುತ್ತೇನೆ. ನಮ್ಮಲ್ಲಿ ವಿನಾಶವಾಗಿರುವ ಜೀವನ ಮೌಲ್ಯಗಳನ್ನು ಜೋಡಿಸುವ ಗುಣ ಚರಕದ ನೂಲು ಹೊಂದಿದೆ ಎಂದು ನಾನು ನಂಬಿದ್ದೇನೆ" ಎಂದು ಹೇಳುತ್ತಿದ್ದರು. ಚರಕ ಅತ್ಯಂತ ಸರಳ ಸಾಧನ. ಗಾಂಧೀಜಿ ಅವರು ಅದನ್ನೇ ಸಮಗ್ರತೆಯ ಸಂಕೇತವಾಗಿ ಬಳಸಿದರು. ಗಾಂಧೀಜಿ ಅವರು ಸರಳ ವಸ್ತು-ವಿಷಯಗಳನ್ನೂ, ಐಕ್ಯತೆ ಮತ್ತು ಸಮಗ್ರತೆಯ ಸಂಕೇತವಾಗಿ ಬಳಸುವ ಪರಿಜ್ಞಾನ ಹೊಂದಿದ್ದರು.

ಗಾಂಧೀಜಿ ಅವರಿಗೆ ಬಡತನ ಮತ್ತು ಅಸಮಾನತೆ ನಿರ್ಮೂಲನೆಯೇ ಪ್ರಮುಖ ಗುರಿಯಾಗಿತ್ತು ಈ ಗುರಿ ಸಾಧನೆಗೆ ಚರಕವು ಮಹತ್ವದ ಪಾತ್ರವನ್ನು ವಹಿಸುವುದು. ಆರ್ಥಿಕ ಸಂಕಷ್ಟದ ಸಮಸ್ಯೆಯನ್ನು ಪರಿಹರಿಸಲು ಅವರು ಹೀಗೆಂದರು:

"ಚರಕವು ಶೋಷಣಾ ಮನೋಭಾವವನ್ನು ಪರಿವರ್ತಿಸಿ, ಸೇವಾ ಮನೋಭಾವವನ್ನು ಪ್ರತಿಷ್ಠಾಪಿಸುವುದು". ಮುಂದುವರಿದು "ಖಾದಿಯು ಭಾರತದ ಮಾನವೀಯತೆ, ಏಕತೆ, ಆರ್ಥಿಕ ಸ್ವಾತಂತ್ರ್ಯ ಹಾಗೂ ಸಮಾನತೆಯ ಸಂಕೇತವಾಗಿದೆ. ಮುಖ್ಯವಾಗಿ ಭಾರತದ ಸ್ವಾತಂತ್ರ್ಯದ ಸಮವಸ್ತ್ರವಾಗಿದೆ." ಎಂದು ನುಡಿದರು. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಗಾಂಧೀಜಿ ಅವರು ಪ್ರತಿಪಾದಿಸುವ ಪರಿಹಾರ ಮಾರ್ಗಗಳು ಕೇವಲ ಬೌದ್ಧಿಕವಾಗಿರಲಿಲ್ಲ. ನೈತಿಕತೆಗೆ ಒತ್ತು ನೀಡುವ ಸಮಗ್ರ ಪರಿಹಾರ ಮಾರ್ಗಗಳನ್ನು ಅವರು ಸೂಚಿಸಿದ್ದರು. ಪ್ರಾಚೀನ ಮತ್ತು ವಿಸ್ಮೃತಿಗೊಂಡ ಸಾಂಸ್ಕೃತಿಕತೆಯನ್ನು ಜನಸಾಮಾನ್ಯರಿಗೆ ಪುನರ್ ಮನನಮಾಡುವ ಕಾರ್ಯದಲ್ಲಿ ಅವರು ತೊಡಗಿಕೊಂಡರು.

ದೇಶದ ಯೋಜನೆಗಳ ರೂಪುರೇಷೆ ರೂಪಿಸುವವರು ವಿದ್ವಾಂಸರು, ತಜ್ಞರು ತಮ್ಮನ್ನು ಅಧುನಿಕರೆಂದು ಭಾವಿಸಿದರು. ಅವರು ಸದಾ ಪ್ರಗತಿ, ಕೈಗಾರಿಕೀಕರಣ ಮತ್ತು ಅಧುನಿಕ ತಂತ್ರಜ್ಞಾನಗಳ ಬಗ್ಗೆಯೇ ಚರ್ಚಿಸುತ್ತಿದ್ದರು. ಅವರು ಪ್ರಾಚೀನ ಪರಂಪರೆ ಮತ್ತು ದಾರ್ಮಿಕತೆಯಿಂದ ವಿಮುಖರಾಗಿದ್ದರು. ಆದ್ದರಿಂದಲೇ ಅವರಿಗೆ ಜನಸಾಮಾನ್ಯರನ್ನು ಅರ್ಥೈಸಿಕೊಳ್ಳಲು ಮತ್ತು ಜನರೊಡನೆ ಅನುಸಂಧಾನ ಮಾಡಲು ಸಾಧ್ಯವಾಗಲಿಲ್ಲ.

ಮಹಾತ್ಮಾಜಿಅವರು ರಾಜಕೀಯ ಸಂತರು. ಜನರಲ್ಲಿ ದೀರ್ಘಕಾಲದ ಅನಕ್ಷರತೆ ಮತ್ತು ಬಡತನವಿದ್ದಾಗಲೂ ಅವರಲ್ಲಿ ಧಾರ್ಮಿಕತೆ ಮತ್ತು ಮಾನವೀಯತೆ ಸಾಗರದಷ್ಟು ವಿಶಾಲವಾಗಿದೆ ಎಂದು ಜನಸಮುದಾಯವನ್ನು ಸಮರ್ಪಕವಾಗಿ ಅರಿತುಕೊಂಡರು. ಜನರೂ ಸಹ ತನ್ನನು ಸರಿಯಾಗಿ ತಿಳಿದುಕೊಂಡಿದ್ದಾರೆಂದು ಅರಿತುಕೊಂಡರು. ಜನರು ಸಂಪೂರ್ಣ ವಿಶ್ವಾಸವನ್ನು ಈ 'ಪುಟ್ಟ ಮನುಷ್ಯ'ನ ಮೇಲಿಟ್ಟರು. ಇದಕ್ಕೆ ಗಾಂಧೀಜಿಯವರು ಆಧ್ಯಾತ್ಮಿಕ ಮಾರ್ಗದಿಂದ ಜನರ ಮನದಾಳವನ್ನು ಸ್ಪರ್ಶಿಸಿದ್ದೇ ಮುಖ್ಯಕಾರಣವಾಗಿತ್ತು. ಫ್ರಾನ್ಸ್‌ನ ತತ್ವಜ್ಞಾನಿ ಬರ್ಗ್ಸನ್ ಅವರ ಮಾತು ಈ ಸಂದರ್ಭದಲ್ಲಿ ಹೇಳುವುದು ಅರ್ಥಪೂರ್ಣವಾಗುವುದು, ಅವರು: "ತತ್ಕಾಲದ ಅನುಭವಗಳ ಆಧಾರದ ಮೇಲೆ ನಮ್ಮ ಆಲೋಚನಾ ಕ್ರಮವಿರುತ್ತದೆ. ಆದರೆ ಆಶಯಗಳು, ಸಂಕಲ್ಪಗಳು ಮತ್ತು ಪ್ರಕ್ರಿಯೆಗಳು ಜೀವನದಲ್ಲಿನ ಭೂತಕಾಲ ಮತ್ತು ಅಂತರಾತ್ಮದ ಧ್ವನಿಯನ್ನು ಆಧರಿಸಿರುತ್ತದೆ" ಎಂಬ ಅನುಭವಜನ್ಯ ಮಾತು ಮಾರ್ಗದರ್ಶಿ ಸೂತ್ರವಾಗಿದೆ. ಸಾಮಾನ್ಯ ಜನತೆ ಬಗ್ಗೆ ಗಾಂಧೀಜಿಅವರು ಅಪಾರ ವಿಶ್ವಾಸ ಹೊಂದಿದ್ದರು. ಜನರ ಅಭಿಪ್ರಾಯಗಳು ಭೂಮಿತಾಯಿ- ಯೊಂದಿಗಿನ ಅನುಭವವನ್ನೇ ಆಧರಿಸಿರುತ್ತದೆ. ಮತ್ತು ಅಂತರಾತ್ಮದ ನುಡಿಗಳಿಂದ ಅವರು ಪ್ರೇರಣೆ ಪಡೆಯುತ್ತಾರೆ. ನಮ್ಮ ಪೂರ್ವಜರ ಬುದ್ಧಿಮತ್ತೆ ಶ್ರೇಷ್ಠವಾದವು. ಅನುಭವ ಮತ್ತು ಜ್ಞಾನಗಳಿಂದ ಮಿಳಿತವಾದ ವಿವೇಕ ಅವರಲ್ಲಿತ್ತು. ನಮ್ಮ ಇಂದಿನ ಜ್ಞಾನ ಶಿಸ್ತುಗಳು ಸಹ ಪೂರ್ವಜರ ವಿದ್ವತ್ತನ್ನು ಆಧರಿಸಿಯೇ ರಚಿತವಾಗಬೇಕು. ಇಲ್ಲವಾದರೆ ಅವು ವಿಫಲವಾಗುವುದು ನಿಶ್ಚಿತ.

ಇಷ್ಟೊಂದು ನ್ಯೂನ್ಯತೆಗಳಿರುವ ಅಭಿವೃದ್ಧಿ ಮಾದರಿ ಹೇಗೆ ಯಶಸ್ವಿಯಾಗಲು ಸಾಧ್ಯ? ಈ ನೆಲದ ಪರಂಪರೆಯ ಅರಿವಿಲ್ಲದ, ಅಧ್ಯಾತ್ಮಿಕತೆಗೆ ಒತ್ತು ನೀಡದ, ಸಾಮಾನ್ಯ ಜನರ ಆಂತರ್ಯದ ಧ್ವನಿಗೆ ಗೌರವ ಇಲ್ಲದ, ಅಭಿವೃದ್ಧಿಯು ಯಶಸ್ವಿಯಾಗುತ್ತದೆ ಎಂದು ಹೇಗೆ ನಂಬುವುದು? ಕೋರಾ ಮಾಥ್ಯೂ ಅವರ ಪ್ರಕಾರ "ಯಾವ ಅಭಿವೃದ್ಧಿಯು ಜನರ ಜ್ಞಾನ ವ್ಯವಸ್ಥೆಯನ್ನು ನೆಲಸಮಗೊಳಿಸುತ್ತದೆಯೋ ಅಂತಹ ಅಭಿವೃದ್ಧಿಯನ್ನು ಯಾರೂ ಸ್ವಾಗತಿಸಬಾರದು. ಇದರಿಂದ ಜನರಲ್ಲಿ ಸ್ವಾಭಿಮಾನವನ್ನು ಹುಟ್ಟುಹಾಕಲು ಸಾಧ್ಯವಿಲ್ಲ. ನಮ್ಮ ಆಯ್ಕೆಯ ಮಾರ್ಗವು ಅಂತಿಮವಾಗಿ ನಾವು ಎಂಥಹ ಸಮಾಜವನ್ನು ನಿರ್ಮಿಸುತ್ತೇವೆ ಎನ್ನುವುದನ್ನು ನಿರ್ಧರಿಸುತ್ತದೆ.

ಮುಂದುವರಿಯುವುದು...

ನಾಡು ಕಟ್ಟಿದ ನಾಡಪ್ರಭು

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಗವಿಗಂಗಾಧರೇಶ್ವರ ದೇವಾಲಯ ಬೆಂಗಳೂರು :



ಗವಿಗಂಗಾಧರೇಶ್ವರ ದೇವಾಲಯವು ಬೆಂಗಳೂರು ಕೋಟೆಯಿಂದ ಸುಮಾರು ಆರು ಕಿಲೋಮೀಟರ್ ದೂರದ ಗವೀಪುರ ಗ್ರಾಮದ ಹತ್ತಿರವಿರುವ ಗುಹಾಂತರ ದೇವಾಲಯ. ಬೃಹತ್ತಾದ ಎರಡು ಹುಟ್ಟು ಬಂಡೆಗಳ ನಡುವೆ ಇರುವ ನೈಸರ್ಗಿಕ ಗುಹೆ. ಪ್ರಾಚೀನದಲ್ಲಿ ಗೌತಮ ಮುನಿಯು ಧ್ಯಾನಕ್ಕಾಗಿ ಉಪಯೋಗಿಸುತ್ತಿದ್ದರು. ಈ ಗುಹೆಯಲ್ಲಿ ಪ್ರಕೃತಿದತ್ತವಾದ ಶಿವಲಿಂಗವಿದೆ. ಈ ದೇವಾಲಯಕ್ಕೆ ಯಲಹಂಕ ಪ್ರಭು ಕೆಂಪೇಗೌಡನ ಆಡಳಿತ ಕಾಲದಲ್ಲಿ ವಿಶೇಷವಾದ ಮನ್ನಣೆ ಮತ್ತು ಈಗಿನ ಸ್ವರೂಪದ ಅಭಿವೃದ್ಧಿಯನ್ನು ಮಾಡಲಾಗಿತ್ತು. ದಕ್ಷಿಣದ ಕಡೆ ಪಾರ್ವತಿ ಅಮ್ಮನವರ ಗರ್ಭಗುಡಿ ಇದೆ. ಅದರ ಪಕ್ಕದಲ್ಲಿ ಗಣೇಶ ಮೂರ್ತಿಯ ಗುಡಿ ಇದೆ. ಇದರ ಪಶ್ಚಿಮ ಭಾಗದಲ್ಲಿ ಮಳೆಗಾಲದಲ್ಲಿ ಹರಿದು ಬರುವ ಝರಿಯ ನೀರು ಸಂಗ್ರಹವಾಗಿ ಮುಂದೆ ಹೋಗುವಂತೆ ಗರ್ಭಗುಡಿಗಳಿಂದ ಬೇರ್ಪಡಿಸಲಾಗಿದೆ. ಎರಡೂ ಪ್ರದಕ್ಷಿಣಾ ಪಥದ ಪಕ್ಕದಲ್ಲಿ ಮುಖಮಂಟಪದಲ್ಲಿ ಬಾರದ್ವಾಜ, ಸುಖ, ಚಂಡಿಕೇಶ್ವರ, ದಕ್ಷಿಣಾಮೂರ್ತಿ, ಸುಬ್ರಹ್ಮಣ್ಯ, ಯಕ್ಷೇಶ್ವರ, ಸಪ್ತಮಾತೃಕೆಯರು, ಕಾಲಭೈರವೇಶ್ವರ, ವೀರಭದ್ರ ಮತ್ತು ಹೊನ್ನಾದೇವಿ ಮೂರ್ತಿಗಳನ್ನು ಸಾಲಾಗಿ ಚಿಕ್ಕ ಚಿಕ್ಕ ಕೋಷ್ಟಕಗಳಲ್ಲಿ ಜೋಡಿಸಿದ್ದಾರೆ. ಗರ್ಭಗುಡಿಗಳ ಮುಂಭಾಗದಲ್ಲಿ ಬಲವಾದ ಕಂಬಗಳ ವಿಶಾಲವಾದ ಸಭಾ ಮಂಟಪವಿದೆ. ಈ ಮಂಟಪ ಆಯತಾಕಾರವಾಗಿದ್ದು, ಬಲವಾದ ಕಂಬಗಳು ಮತ್ತು ಗೋಡೆಗಳಿಂದ ನಿರ್ಮಿಸಲಾಗಿದೆ, ಮುಖ ಮಂಟಪದ ಮುಂಭಾಗದ ವಿಶಾಲವಾದ ಅಂಗಳದಲ್ಲಿ ನಾಡಪ್ರಭು ಕಾಲದ ವಿನ್ಯಾಸದ ಬಲಿಪೀಠವಿದೆ. ಇದರ ಪಕ್ಕದಲ್ಲಿ 25 ಅಡಿ ಎತ್ತರದ ಏಕ ಶಿಲಾ ಕಂಬ ದರ್ಪಣ, ಪತಾಕೆಗಳು ತ್ರಿಶೂಲ ಮತ್ತು ಡಮರು ಶಿಲ್ಪಗಳಿವೆ. ಪಾರ್ವತಿ ಅಮ್ಮನವರ ಗರ್ಭಗುಡಿಯ ಒಳ ಭಾಗದಲ್ಲಿ ಚಿಕ್ಕದಾದ ಗುಡಿಯೊಂದಿದ್ದು ಅದನ್ನು ಮಗಳ ದೇವತೆಯ ಗುಡಿಯೆಂದು ಕರೆಯುತ್ತಾರೆ.

ಗಂಗಾಧರೇಶ್ವರ ದೇವಾಲಯದ ಉತ್ತರದ ಕಡೆ ಇಳಿಜಾರಾಗಿದ್ದು ಮಳೆಯ ನೀರು ಗರ್ಭಗುಡಿಯ ಒಳಗೆ ಹೋಗದಂತೆ ಮುಖಮಂಟಪವನ್ನು ಎತ್ತರವಾಗಿ ಎರಡು ಹಂತಗಳಲ್ಲಿ ನಿರ್ಮಿಸಿದ್ದಾರೆ. ಕಂಬಗಳ ಮೇಲೆ ಬೇಡರ ಕಣ್ಣಪ್ಪ, ಗಣೇಶ, ನಂದಿ, ಯತಿ, ಲಿಂಗಪೀಠ, ಆತ್ಮಲಿಂಗವನ್ನು ಪೂಜೆಗೈಯುತ್ತಿರುವ ಯತಿ, ಕುಳಿತಿರುವ ಸಿಂಹ ಮುಂತಾದ ಶಿಲ್ಪಗಳನ್ನು ಅಲಂಕಾರಿಕವಾಗಿ ಕೆತ್ತಲಾಗಿದೆ. ಈ ದೇವಾಲಯದ ಅಂಗಳದಲ್ಲಿನ ಬಲಿಪೀಠವನ್ನು ಅಡ್ಡಲಾಗಿ ಪಟ್ಟಿಕೆಯಾಕಾರದ ವಿನ್ಯಾಸಗಳಿಂದ ಕೆತ್ತಲಾಗಿದೆ. ಇದರ ತಳಭಾಗದಲ್ಲಿ ಚಿಕ್ಕ ಗಾತ್ರದ ಆನೆ ಶಿಲ್ಪಗಳ ಪಟ್ಟಿಕೆ ಮಾಡಲಾಗಿದೆ. ಇದು ಕೆಂಪೇಗೌಡರ ಕಾಲದ ವಿಶೇಷ ವಿನ್ಯಾಸದ ಬಲಿಪೀಠ, ದೇವಾಲಯದ ಮೇಲ್ಭಾಗದಲ್ಲಿ ಅಷ್ಟಕೋನಾಕೃತಿಯ ಎರಡು ಶಿಖರಗಳನ್ನು ಪ್ರತ್ಯೇಕವಾಗಿ ಕಟ್ಟಲಾಗಿದೆ. ದೇವಾಲಯದ ಮುಂಭಾಗದಲ್ಲಿ ಡಮರು, ತ್ರಿಶೂಲ, ದರ್ಪಣ ಮತ್ತು ಪತಾಕೆಗಳು ಇರುವುದರಿಂದ ಇದನ್ನು ಭಾರತೀಯ ವಾಸ್ತು ಪರಂಪರೆಯನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಕಟ್ಟಿದ ದೇವಾಲಯವಾಗಿದೆ ಎಂದು ಗ್ರಹಿಸಲಾಗಿದೆ. ಮತ್ತು ಅಷ್ಟ ಮಂಗಳಗಳಲ್ಲಿ ಕಂಡು ಬರುವ ದರ್ಪಣ ಮತ್ತು ಪತಾಕೆಗಳು ಶುಭ ಸೂಚಕವಾಗಿದ್ದರೆ, ಡಮರು ಮತ್ತು ತ್ರಿಶೂಲ ಶೈವ ಕ್ಷೇತ್ರವೆಂಬುದರ ನಿದರ್ಶನವಾಗಿದೆ.

ಮುಂದುವರಿಯುವುದು...

ಆಧಾರಿತ ಕೃತಿ : ಯಲಹಂಕ ನಾಡಪ್ರಭುಗಳು

ಲೇಖಕರು : ಎಚ್.ಎಂ. ಬೋರಯ್ಯ





ಗವಿಗಂಗಾಧರೇಶ್ವರ ದೇವಾಲಯ, ಬೆಂಗಳೂರು

ಮಾದಕ ವಸ್ತುಗಳ ಮಾಯಾಜಾಲ

– ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಲ್ಕೋಹಾಲ್ ಸ್ವರೂಪ ಹಾಗೂ ಸೇವನೆ

ರಕ್ತದಲ್ಲಿ ಯಾವಾಗ ಎಷ್ಟು ಮದ್ಯಸಾರವಿರುತ್ತದೆ ಎನ್ನುವುದರ ಮೇಲೆ, ಆತನ ನಡೆ ನುಡಿ ಪ್ರಜ್ಞಾಸ್ಥಿತಿ ಅವಲಂಬಿತವಾಗುತ್ತದೆ. ಉದಾಹರಣೆಗೆ :

ಮದ್ಯಸಾರದ ಪ್ರಮಾಣ ಮತ್ತು ವ್ಯಕ್ತಿಯ ಮೇಲೆ ಆಗುವ ಪರಿಣಾಮ

20. ಮಿ. ಗ್ರಾಂ % : ಏನೂ ಪರಿಣಾಮವಿಲ್ಲ, ಕುಡಿಯುವ ಮೊದಲಿದ್ದ ಸ್ಥಿತಿಯೇ ಇರುತ್ತದೆ.

40 ಮಿ. ಗ್ರಾಂ % : ಆರಾಮವೆನಿಸುತ್ತದೆ. ತಾನು ಚೆನ್ನಾಗಿದ್ದೇನೆ ಎನ್ನುವ ಭ್ರಮೆ.

60 ಮಿ.ಗ್ರಾಂ% : ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಲು ವಿಫಲನಾಗುತ್ತಾನೆ.

80 ಮಿ. ಗ್ರಾಂ% : ದೇಹದ ಅಂಗಾಂಗಗಳ ಹೊಂದಾಣಿಕೆಯ ಚಲನೆ ಇರುವುದಿಲ್ಲ (ತೊದಲ ಮಾತು, ನೇರವಾಗಿ ನಡೆಯಲಾಗುವುದಿಲ್ಲ)

100 ಮಿ. ಗ್ರಾಂ % ತನ್ನ ದೇಹ ಮತ್ತು ಮನಸ್ಸಿನ ಮೇಲಿನ ಹತೋಟಿಯನ್ನು ಕಳೆದುಕೊಳ್ಳುತ್ತಾನೆ. ಕುಡಿಯ ಬೇಕೇ ಬಾರದೇ ಎಂಬುದೂ ಗೊತ್ತಾಗುವುದಿಲ್ಲ.

120 ಮಿ. ಗ್ರಾಂ % ವಾಂತಿಯಾಗುತ್ತದೆ.

150 ಮಿ.ಗ್ರಾಂ % ನೇರವಾಗಿ ನಿಲ್ಲಲಾರದೆ ಬೀಳುತ್ತಾನೆ..

300 ಮಿ. ಗ್ರಾಂ % ಪ್ರಜ್ಞೆ ಇರುವುದಿಲ್ಲ. 400 ಮಿ. ಗ್ರಾಂ % ಕೋಮ ಸ್ಥಿತಿ ಹಾಗೂ ಸಾವು.

ಕರ್ನಾಟಕ ಸರಕಾರದ ಅಬಕಾರಿ ಇಲಾಖೆಯ ನೆರವಿನಿಂದ ಕರ್ನಾಟಕದ ಐದು ಜಿಲ್ಲೆಗಳಲ್ಲಿ, ಮದ್ಯಪಾನದ ವಿಚಾರವಾಗಿ ಸರ್ವೆ ಒಂದನ್ನು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ನಡೆಸಿತು. 5573 ವಿದ್ಯಾರ್ಥಿಗಳು (ಹೈಸ್ಕೂಲು, ಪದವಿಪೂರ್ವ, ಪದವಿ, ಪದವಿಯೋತ್ತರ, ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳ) ಹಾಗೂ 4007 ವಿದ್ಯಾರ್ಥಿಗಳಲ್ಲದವರನ್ನು ಸಂದರ್ಶಿಸಿ ಪ್ರಶ್ನಾವಳಿಯ ಮುಖಾಂತರ ಅವರಲ್ಲಿ ಯಾರು ಮದ್ಯಪಾನ ಮಾಡುತ್ತಾರೆ, ಎಷ್ಟು ಸಲ ಮಾಡುತ್ತಾರೆ ಇತ್ಯಾದಿ ಮಾಹಿತಿಯನ್ನು ಕಲೆ ಹಾಕಿತು. ವಿದ್ಯಾರ್ಥಿಗಳಲ್ಲಿ 30ರಿಂದ 46 ರಷ್ಟು ಮಂದಿ ಒಮ್ಮೆ ತಾವು ಆಲೋಹಾಲ್ ಸೇವಿಸಿರುವುದಾಗಿಯೂ ಶೇಕಡ 2ರಿಂದ 5ರಷ್ಟು ಮಂದಿ ತಾವು ವಾರದಲ್ಲಿ ಹಲವು ಸಲ ಸೇವಿಸುವುದಾಗಿಯೂ ತಿಳಿಸಿದರು. ವಿದ್ಯಾರ್ಥಿಗಳಲ್ಲದವರಲ್ಲಿ ಶೇಕಡ 25ರಿಂದ 40ರಷ್ಟು ಮಂದಿ, ಇಡೀ ಜೀವನದಲ್ಲಿ ಒಮ್ಮೆ ಆಲ್ಕೋಹಾಲ್ ಸೇವಿಸಿದ್ದರೆಂದು ಹೇಳಿದರೆ, ಮೂರರಿಂದ 14ರಷ್ಟು ಮಂದಿ ವಾರದಲ್ಲಿ ಹಲವು ಸಲ ಸೇವಿಸುವುದಾಗಿ ತಿಳಿಸಿದರು. ಯಾವುದೇ ಕ್ರಮದಲ್ಲಿ ಆಲೋಹಾಲ್ ಸೇವಿಸುವವರಲ್ಲಿ ಶೇಕಡ 10ರಿಂದ 15ರಷ್ಟು ಮಂದಿ, ಅದರ ಚಟಕ್ಕೆ ಬೀಳುವುದು ಕಂಡುಬರುವುದು ಗಮನಾರ್ಹ. ಅಂದರೆ ನಮ್ಮ ರಾಜ್ಯದಲ್ಲಿ ಕನಿಷ್ಠ ಐದು ಲಕ್ಷ ಜನ ಅತಿಯಾದ ಪ್ರಮಾಣದಲ್ಲಿ ಮದ್ಯಪಾನ ಮಾಡುತ್ತಾರೆ ಹಾಗೂ ಹಲವು ಬಗೆಯ ಆರೋಗ್ಯ ಮತ್ತಿತರ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಮುಂದುವರಿಯುವುದು

ಫಂಗಸ್ ಸೋಂಕು

– ಡಾ. ವಸುಂಧರಾ ಭೂಪತಿ

ನಮಗೆ ಅನಾರೋಗ್ಯ ಉಂಟಾಗಲು ಕೇವಲ ಅಹಿತಕರ ಆಹಾರ, ಕಲುಷಿತ ನೀರು ಮತ್ತು ಅಶುದ್ಧ ಗಾಳಿ ಕಾರಣವಲ್ಲ. ಸುತ್ತಮುತ್ತಲಿನ ಪರಿಸರ ಮತ್ತು ದಿನನಿತ್ಯ ಇರುವ ವಾತಾವರಣವೇ ವಿವಿಧ ರೀತಿಯ ಸೋಂಕುಗಳನ್ನು ತಂದೊಡ್ಡಬಹುದು. ಫಂಗಸ್ಸಿನ ಸೋಂಕು ಅವುಗಳಲ್ಲಿ ಒಂದು. ಫಂಗಸ್ ಒಂದು ಸೂಕ್ಷ್ಮಾಣುಜೀವಿ. ಇದು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಬರಿಗಣ್ಣಿಗೆ ಕಾಣಿಸುವುದಿಲ್ಲ. ಕೆಲವೊಮ್ಮೆ ಫಂಗಸ್ಸುಗಳು ಮಾನವರ ದೇಹದೊಳಗೆ ಪ್ರವೇಶಿಸಿ ಹಾನಿಕಾರಕವಾಗಿ ಪರಿಣಮಿಸುತ್ತವೆ. ಶರೀರದ ರೋಗನಿರೋಧಕ ಶಕ್ತಿ ಕುಂಠಿತಗೊಂಡಾಗ ಫಂಗಸ್ಸುಗಳು ಅನೇಕ ಸೋಂಕುಗಳನ್ನು ಉಂಟುಮಾಡುತ್ತವೆ. ಫಂಗಸ್ ಸೋಂಕು ಮಾನವರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸೋಂಕಾಗಿದೆ. ದೇಹದಲ್ಲಿ ತೇವಾಂಶ ಅಧಿಕವಾಗಿರುವ ಪ್ರದೇಶಗಳಲ್ಲಿ ಫಂಗಸ್ಸಿನ ಸೋಂಕು ಉಂಟಾಗುವ ಸಾಧ್ಯತೆ ಹೆಚ್ಚು. ಶ್ವಾಸಕೋಶ, ಮೆದುಳಿಗೆ ಫಂಗಸ್ಸಿನ ಸೋಂಕು ತಗುಲಿದರೆ ಅಪಾಯಕಾರಿ. ಫಂಗಸ್ಸಿನ ಸೋಂಕುಗಳು ಹೆಚ್ಚಾಗಿ ಚರ್ಮದ ಮೂಲಕ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಚರ್ಮದ ಸ್ವಚ್ಛತೆಯ ಕಡೆಗೆ ಅತ್ಯಂತ ಹೆಚ್ಚು ಗಮನ ಹರಿಸಬೇಕು.

ಕುತ್ತಿಗೆ, ಭುಜ, ಬೆನ್ನಿನ ಮೇಲೆ ದುಂಡಗಿನ ಅಥವಾ ಬಿಳಿ, ಕೆಂಪು, ಕಪ್ಪು, ಕಂದು ಬಣ್ಣದ ಆಕಾರರಹಿತ ಮಚ್ಚೆಗಳು, ಈ ಮಚ್ಚೆಗಳಲ್ಲಾಗುವ ತುರಿಕೆ, ತೊಡೆ ಸಂಧಿ, ಕಂಕಳು, ಕೈ, ಕಾಲು ಬೆರಳಿನ ಸಂಧಿ, ಸ್ತನಗಳ ಕೆಳಭಾಗದಲ್ಲಿ, ಸೊಂಟದ ಭಾಗದಲ್ಲಿ ಚರ್ಮದ ಬಣ್ಣ ಬದಲಾಗುವುದು, ಉರಿ, ತುರಿಕೆ ಉಂಟಾಗುವುದು ಮುಂತಾದವು ಫಂಗಸ್ ಸೋಂಕಿನ ಲಕ್ಷಣಗಳಾಗಿವೆ. ಇಂತಹ ಲಕ್ಷಣಗಳು ಕಂಡುಬಂದರೆ ತಡ ಮಾಡದೇ ವೈದ್ಯರನ್ನು ಕಂಡು ಚಿಕಿತ್ಸೆ ಪಡೆದುಕೊಳ್ಳಬೇಕು. ಸೋಂಕನ್ನು ನಿರ್ಲಕ್ಷ್ಯ ಮಾಡಿದರೆ ಮುಂದೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ಗಾಳಿ, ನೀರು, ಮಣ್ಣು ಸೇರಿದಂತೆ ವಿವಿಧ ಮೂಲಗಳಿಂದ ಫಂಗಸ್ಸುಗಳು ಮನುಷ್ಯನ ದೇಹ ಸೇರಿ ಪರಿಣಾಮ ಬೀರುತ್ತವೆ. ಫಂಗಸ್ಸುಗಳು ಸೌಮ್ಯ ಸ್ವರೂಪಗಳಿಂದ ಹಿಡಿದು ಅಪಾಯ ಎನಿಸುವ ಸೋಂಕುಗಳಿಗೂ ಕಾರಣವಾಗಬಹುದು. ಅನ್ನನಾಳ, ಮೆದುಳಿನ ಮೇಲ್ಕವಚ ಸೇರಿದಂತೆ ವಿವಿಧ ಅಂಗಗಳಿಗೆ ಶಿಲೀಂಧ್ರಗಳ ಸೋಂಕು ಉಂಟಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ. ಶಿಲೀಂಧ್ರಗಳ ಬೆಳವಣಿಗೆಗೆ ತೇವಾಂಶವೇ ಕಾರಣವಾಗಿರುತ್ತದೆ. ದೇಹದ ಯಾವುದೇ ಭಾಗ ತೇವಾಂಶದಿಂದ ಕೂಡಿರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಸ್ನಾನ ಮಾಡಿದ ನಂತರ ದೇಹವನ್ನು ಟವೆಲ್‌ನಿಂದ ಸರಿಯಾಗಿ ಒರೆಸಿಕೊಳ್ಳಬೇಕು. ಸ್ವಚ್ಛ ಕಾಲುಚೀಲ, ಟವೆಲ್, ಬಟ್ಟೆಗಳನ್ನು ಪ್ರತಿನಿತ್ಯ ಬಳಸಬೇಕು. ತೇವಾಂಶರಹಿತ ಒಳಉಡುಪುಗಳನ್ನು ಬಳಸಬೇಕು. ಸಾಬೂನು ಮತ್ತು ಬಾಚಣಿಗೆಗಳು ಎಲ್ಲರಿಗೂ ಪ್ರತ್ಯೇಕವಾಗಿ ಇರಬೇಕು. ವಾರದಲ್ಲಿ ಕನಿಷ್ಠ ಒಂದು ಸಲವಾದರೂ ತಲೆಗೆ ಸ್ನಾನ ಮಾಡಬೇಕು.

ಮುಂದುವರಿಯುವುದು...

ಪಪ್ಪಾಯ– ಪರಂಗಿ ಹಣ್ಣು

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಪಪಾಯಿ ಹಣ್ಣು ಸರ್ವಕಾಲದಲ್ಲೂ ಸಿಗುವಂತಹ ಹಾಗೂ ಬಹಳ ಸುಲಭವಾಗಿ, ಯಾವುದೇ ತರಹದ ಮಣ್ಣಿನಲ್ಲಿ ಬೆಳೆಯುವಂತಹದ್ದು. ಔಷಧಿಯ ಗುಣವುಳ್ಳ ಈ ಹಣ್ಣಿನಲ್ಲಿ ಪ್ಯಾಪಿನ್, ವಿಟಮಿನ್ 'ಸಿ' ಫೈಟೋ ನ್ಯೂಟ್ರಿಯೆಂಟ್ಸ್ ಇರುತ್ತದೆ. ಬಹಳ ಕಡಿಮೆ ಕ್ಯಾಲರಿ ಇರುವಂತಹ ಹಣ್ಣು. ಈ ಎಲ್ಲಾ ರಸಾಯನ ಗುಣಗಳು ಈ ಹಣ್ಣಿನಲ್ಲಿ ಇರುವುದರಿಂದ ಇದು ಆಂಟಿ ಬ್ಯಾಕ್ಟೀರಿಯಲ್, ಆಂಟಿ ವೈರಲ್ ಆಗಿ ಕೆಲಸ ಮಾಡುತ್ತದೆ. ಶರೀರದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಪರಂಗಿ ಹಣ್ಣು ಫಲಕಾರಿಯಾಗುತ್ತದೆ. ಪಪ್ಪಾಯವನ್ನು ಹಣ್ಣಾಗಿ ಸೇವಿಸಬಹುದು. ಹಣ್ಣು ಮಿಶ್ರಿತ ಸಲಾಡ್ ಆಗಿ ಸೇವಿಸಬಹುದು, ಪಪ್ಪಾಯ ಜ್ಯೂಸ್ ಮಾಡಿ ಬಳಸಬಹುದು. ಪಪಾಯ ಕಾಯಿಯನ್ನು ಪದಾರ್ಥಕ್ಕೆ ಅಲ್ಲದೆ ತರಕಾರಿ ಆಗಿ ಬಳಸಬಹುದು, ಪಪ್ಪಾಯ ಎಲೆಯನ್ನು ಹಿಂಡಿ ಅದರ ರಸವನ್ನು ಕುಡಿದರೆ ಬಿಳಿ ರಕ್ತ ಕಣಗಳು ಹೆಚ್ಚಾಗುತ್ತದೆ.

ಉಪಯೋಗಗಳು:

- ಪಪ್ಪಾಯ ತಿನ್ನುವುದರಿಂದ ಲಿವರ್ ಮೇಲೆ ಕಡಿಮೆ ಒತ್ತಡದಲ್ಲಿ ಆಹಾರ ಜೀರ್ಣವಾಗಲು ಸಹಾಯವಾಗುತ್ತದೆ.
- ಪಪ್ಪಾಯ ಹಣ್ಣಿನಲ್ಲಿ ನೈಸರ್ಗಿಕ ಸಕ್ಕರೆ ಅಂಶ ಫ್ರಕ್ಟೋಸ್ ಇರುವುದರಿಂದ ಯಾವುದೇ ಭಯವಿಲ್ಲದೆ ಸಕ್ಕರೆ ಕಾಯಿಲೆ ಅವರು ಉಪಯೋಗಿಸಬಹುದು.
- ಹಸಿವು ಕಡಿಮೆ ಆಗುವವರಿಗೆ ಪಪ್ಪಾಯ ಹಣ್ಣು ಸುಲಭವಾಗಿ ಹಸಿವನ್ನು ಹೆಚ್ಚಿಸಲು ಉಪಕಾರಿಯಾಗುತ್ತದೆ.
- ಮಲಬದ್ಧತೆಯನ್ನು ನಿವಾರಿಸಿಕೊಳ್ಳಲು ಪ್ರತಿದಿನ ಪಪ್ಪಾಯ ಸೇವನೆ ಮಾಡಬಹುದು.
- ಸ್ಥೂಲಕಾಯದವರು ಪಪ್ಪಾಯ ಸೇವನೆಯಿಂದ ತೂಕ ಕಡಿಮೆ ಮಾಡಿಕೊಳ್ಳಬಹುದು.ಈ ಹಣ್ಣಿನಲ್ಲಿ ಕ್ಯಾಲೋರಿ ಕಡಿಮೆ ಇರುವುದರಿಂದ ಸ್ಥೂಲಕಾಯದ ಜೊತೆಗೆ ಸಂಧಿವಾತಕ್ಕೂ ಕೂಡ ಉಪಯೋಗವಾಗುವುದು.
- ಪ್ರತಿದಿನ ಪಪ್ಪಾಯ ಸೇವನೆ ಮುಂಬರುವ ದೃಷ್ಟಿ ತೊಂದರೆಗಳನ್ನು ತಡೆಗಟ್ಟುತ್ತದೆ.
- ಗ್ಯಾಸ್/ ಅಸಿಡಿಟಿ ಸಮಸ್ಯೆ ಇರುವವರು ಪಪಾಯ ಸೇವನೆ ದಿನಚರಿಯಾಗಿ ಮಾಡಿಕೊಳ್ಳಬಹುದು.
- ಹೆಚ್ಚು ಕೊಲೆಸ್ಟ್ರಾಲ್ ಸಮಸ್ಯೆ ಇರುವಂತವರು ಪಪ್ಪಾಯ ಹಣ್ಣಿನ ಸೇವನೆ ಮಾಡುವುದು ಒಳಿತು.
- ಪಪ್ಪಾಯ ಗಿಡದ ಎಲೆಯ ರಸವು ಯಾವುದೇ ವೈರಲ್ ಜ್ವರದಲ್ಲಿ ವಿಶೇಷವಾಗಿ ಡೆಂಗಿ ಜ್ವರದಲ್ಲಿ ಉಪಯೋಗಕರವಾಗಿರುವುದು ಕಂಡುಬಂದಿರುತ್ತದೆ.ದಿನಕ್ಕೆ 3 ಹೊತ್ತು 3 ದಿನ ಪಪಾಯ ಎಲೆಯ ರಸವನ್ನು ಸೇವಿಸಿದರೆ ಸಾಕು.
- ಪಪ್ಪಾಯ ಬೀಜವನ್ನು ಒಣಗಿಸಿ ನುಣ್ಣಗೆ ಪುಡಿ ಮಾಡಿ ಒಂದು ಚಮಚ ತೆಗೆದುಕೊಂಡು ಅದಕ್ಕೆ ಒಂದು ಚಮಚ ಜೇನುತುಪ್ಪವನ್ನು ಸೇರಿಸಿ ದಿನಕ್ಕೆ ಮೂರು ಸಲ ಮೂರು ದಿನ ಮಕ್ಕಳಿಗೆ ಕೊಡಬೇಕು. ಇದರಿಂದ ಮಕ್ಕಳ ಜಂತು ನಾಶಕ್ಕೆ ಬಹಳ ಉತ್ತಮ.

ಇಷ್ಟೆಲ್ಲಾ ಪರಿಣಾಮಗಳಿರುವುದರಿಂದ ಪ್ರಕೃತಿ ಚಿಕಿತ್ಸಾ ಕೇಂದ್ರಗಳಲ್ಲಿ 3–5 ದಿವಸಗಳವರೆಗೆ ಪಪ್ಪಾಯಿ ಮತ್ತು ಮಜ್ಜಿಗೆ ಅಥವಾ ಪಪ್ಪಾಯಿ ಮತ್ತು ಸೂಪ್‌ಗಳ ಮೇಲೆಯೇ ಉಪವಾಸ ಚಿಕಿತ್ಸೆಯನ್ನು ಮಾಡಿ ಶರೀರ ಶುದ್ಧಿಯನ್ನು ಮಾಡಲಾಗುತ್ತದೆ. ಸಾಮಾನ್ಯವಾಗಿ ರಾತ್ರಿ ಊಟದಲ್ಲಿ ಅನ್ನ ಸೇವನೆ ಬಿಟ್ಟು ಚಪಾತಿ/ ಮುದ್ದೆ ತರಕಾರಿ ಮತ್ತು ಪಪ್ಪಾಯಿ ಹಣ್ಣು ಸೇವಿಸಿದರೆ ಆರೋಗ್ಯಕ್ಕೆ ಒಳ್ಳೆಯದು. ಹೆಚ್ಚಿನ ಖರ್ಚು ಇಲ್ಲದ, ಸುಲಭವಾಗಿ ವರ್ಷವಿಡೀ ಸಿಗುವ, ಆರೋಗ್ಯಕರ ಮತ್ತು ಪುಷ್ಟಿಕರ ಫಲ ಈ ಪಪ್ಪಾಯ ಆಗಿದೆ.

ಪುಸ್ತಕ ಪರಿಚಯ



ಡಾ. ರಾಮಲಿಂಗೇಶ್ವರ

ಮಕ್ಕಳ ಕಸ್ತೂರ್‌ಬಾ

ಲೇಖಕರು : ಪ್ರೊ. ಲೀಲಾ ವಾಸುದೇವ್, ಪ್ರಕಾಶಕರು : ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

ಬೆಂಗಳೂರಿನ ಮಲ್ಲೇಶ್ವರಂನ ಬಿ.ಇ.ಎಸ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ನಿವೃತ್ತರಾಗಿ ಅದೇ ವಿದ್ಯಾ ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಸೇವೆಸಲ್ಲಿಸುತ್ತಿರುವ ಲೇಖಕಿ ಆಧ್ಯಾತ್ಮಿಕ ಚಿಂತಕಿ ಪ್ರೊ. ಲೀಲಾ ವಾಸುದೇವ್ ಅವರು ಪ್ರವೃತ್ತಿಯಲ್ಲಿ ಸಾಮಾಜಿಕ ಸೇವೆಯಲ್ಲಿಯೂ ಮುಂಚೂಣಿಯಲ್ಲಿರುವವರು. ಇವರ 'ಮಕ್ಕಳ ಕಸ್ತೂರ್‌ಬಾ' ಕೃತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಸ್ವಾತಂತ್ರ್ಯೋತ್ಸವ 75ರ ಅಮೃತ ಮಹೋತ್ಸವ 2022ರ ಆಗಸ್ಟ್ 15 ರಂದು ಪ್ರಕಟಿಸಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನ ಪತಿ ಗಾಂಧೀಜಿ ಅವರಿಗೆ ಬೆನ್ನೆಲುಬಾಗಿ ನಿಂತ ಕಸ್ತೂರ್‌ಬಾ ಅವರ ಮಕ್ಕಳ ಮೇಲಿನ ಪ್ರೀತಿ – ವಾತ್ಸಲ್ಯದ ಅನುಭವಗಳನ್ನು ಪ್ರೊ. ಲೀಲಾ ವಾಸುದೇವ್ ಅವರು ಸರಳ ಗದ್ಯದಲ್ಲಿ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ, ಎಲ್ಲರಿಗೂ ಅರ್ಥವಾಗುವಂತೆ ಬರೆದಿರುವುದಕ್ಕೆ ಅವರಿಗೆ ಗಾಂಧಿ ಭವನದ ಪರವಾಗಿ ಅಭಿನಂದನೆಗಳು ಹಾಗೂ ಶುಭಾಶಯಗಳು. 64 ಪುಟಗಳ ಪುಟ್ಟ ಕೃತಿಯನ್ನು ಸಾರಸ್ವತ ಲೋಕವು ಬಹಳ ಆಪ್ತವಾಗಿ ಸ್ವೀಕರಿಸುತ್ತಾರೆಂಬ ನಂಬುಗೆ ನಮ್ಮದು. ಗಾಂಧಿ ಭವನದ ಈ ಹಿಂದಿನ ಅಧ್ಯಕ್ಷರಾದ ಸನ್ಮಾನ್ಯ ಡಾ. ಹೊ. ಶ್ರೀನಿವಾಸಯ್ಯ ಅವರಿಗೆ ಅರ್ಪಿಸಲಾಗಿದೆ. ಗಾಂಧಿ ಭವನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಹಾಗೂ ಉಪಾಧ್ಯಕ್ಷರು ಪ್ರೊ. ಜಿ.ಬಿ. ಶಿವರಾಜ್ ಅವರ ಔಚಿತ್ಯಪೂರ್ಣ ಮುನ್ನುಡಿ ಬರೆದಿರುವುದು, ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಪ್ರೊ. ಲೀಲಾ ವಾಸುದೇವ್ ಅವರಿಂದ ಮತ್ತಷ್ಟು ಕೃತಿಗಳು ಮೂಡಿಬರಲೆಂದು ಆಶಿಸುತ್ತೇನೆ.

ಇತಿಹಾಸದ ಪುಟಗಳು – ರಾಯದುರ್ಗದ ಸುತ್ತಿನ ಗಡಿನಾಡಿನ ಶಾಸನಗಳು

– ಡಾ. ಬಿ. ರಾಜಶೇಖರಪ್ಪ

ರಾಯದುರ್ಗದಲ್ಲಿ ನಡೆದ ಆಂಧ್ರ ಗಡಿನಾಡ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಚಿಕೆ ರಾಯದುರ್ಗ ನುಂಕೆಮಲೆ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾದ ಆಯ್ದ ಲೇಖನಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ಸೌಜನ್ಯ : ಕನ್ನಡ ಸಾಹಿತ್ಯ ಪರಿಷತ್ತು, ಆಂಧ್ರ ಗಡಿನಾಡು ಘಟಕ, ಗಡಿನಾಡು ಸಮ್ಮೇಳನಾಧ್ಯಕ್ಷರು : ಡಾ. ವೂಡೇ ಪಿ. ಕೃಷ್ಣ
ಪ್ರಧಾನ ಸಂಪಾದಕರು : ಪ್ರೊ. ವಿ. ಅಗ್ರಹಾರಂ ಎಚ್.ಬಿ. ಶಿವಕುಮಾರ್, ಸಂಪಾದಕರು : ಡಾ. ಕೆ.ವಿ. ಮುದ್ದವೀರಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಚಳ್ಳಕೆರೆ ತಾಲ್ಲೂಕು

ಚೌಳೂರು ಕೆರೆಯ ಕಾಲುವೆಯ ಮಗ್ಗುಲಲ್ಲಿದ್ದ ಸುಮಾರು 1100ದ ಶಾಸನ (ಚಳ್ಳ-40) : "ಪಂಡಿತಜೀಯ ಮತ್ತು ಬಳ್ಳೇಶ್ವರ ಜೀಯ ಎಂಬುವರು ಆ ಕೆರೆಯ ತೂಬನ್ನು ಮಾಡಿಸಿ ಅದರ ನಿರ್ವಹಣೆಗಾಗಿ ಬಯಲ ಬಿತ್ತುವಟ(ಭೂಮಿ) ಬಿಟ್ಟನು, ಎಂದೂ ಇದನ್ನು ಪಡೆದುಕೊಟ್ಟವನು ನಾಗಯ್ಯ ಎಂಬುವವನೆಂದು" ಹೇಳುತ್ತದೆ. ಧಾರ್ಮಿಕ ವ್ಯಕ್ತಿಗಳು ಸಹ ಕೆರೆಯ ತೂಬನ್ನು ಮಾಡಿಸುವ ಜನಹಿತ ಕಾರ್ಯಗಳಲ್ಲಿ ತೊಡಗುತ್ತಿದ್ದರು ಎಂಬುದಕ್ಕೆ ಈ ಶಾಸನ ನಿದರ್ಶನವಾಗಿದೆ.

"ಅನೇಕ ಬಿರುದುಗಳನ್ನುಳ್ಳ ಅಬ್ಬೆಯ ನಾಯಕನ ತಮ್ಮ ಕೋಟೆಯ ನಾಯಕನ ಮಗ ಮಲ್ಲೆಯನಾಯಕನು ಚನ್ನಕೇಶವ ದೇವಸ್ಥಾನದ ಮುಂದೆ 1391ರಲ್ಲಿ ಗರುಡದೇವರು, ಹನುಮಂತ ದೇವರು ಎಂಬ ಎರಡೂ ಶಿಲ್ಪಗಳನ್ನು ಮಾಡಿಸಿ ಪ್ರತಿಷ್ಠೆ ಮಾಡಿಸಿದನು" ಎಂದು ಪರುಶುರಾಮಪುರದ ಚನ್ನಕೇಶವ ದೇವಾಲಯದ ಮುಂದೆ ಇರುವ ಗರುಡ ಶಿಲ್ಪದ ಮೇಲಿನ ಶಾಸನ (ಚಳ್ಳ-37) ಹೇಳುತ್ತದೆ. ಈ ಶಿಲ್ಪಗಳು ಜಿಲ್ಲೆಯಲ್ಲೇ ಬಹುದೊಡ್ಡ ಶಿಲ್ಪಗಳ ಸಾಲಿಗೆ ಸೇರುತ್ತವೆ.

ಗೌರಸಮುದ್ರ ಗ್ರಾಮದ ಹೊಲವೊಂದರಲ್ಲಿ 14030 ಶ್ರೀಮನ್ಮಹಾನಾಯಕಾಚಾರ್ಯನ ಶಾಸನ (ಚಳ್ಳ-42) : "ಆಪ್ತನು ಅನೇಕ ಬಿರುದಾಂಕಿತನು ಆದ ಪುಲುಸುಮಾಮಿಡಿಯ ಚನ್ನಪ್ಪನು ತನ್ನ ಒಡೆಯನ ಮುಂದೆ, ನಾಗಾರ್ಜುನನ ಕೋಟೆಯ ಬಳಿಯಲ್ಲಿ ಕಾದಾಡಿ ಮಡಿದನು; ಆಗ ಅವನ ತಂದೆ ಕಾಮೆಯ ನಾಯಕನು ಮೃತ ಸುತನ ಹೆಸರಲ್ಲಿ ವೀರಸ್ತಂಭವನ್ನು ಪ್ರತಿಷ್ಠಿಸಿದನು; ಆ ಕಂಬವನ್ನು ಮಾಡಿದ ಬೋಗೋಜನಿಗೆ ಅಲ್ಲಿಯ ಕೆರೆಯ ಒಂದಷ್ಟು ಭೂಮಿಯನ್ನು ಕೊಟ್ಟನು" ಎಂದು ತಿಳಿಸುತ್ತದೆ. ಇಲ್ಲಿರುವ ಶ್ರೀಮನ್ ಮಹಾನಾಯಕಾಚಾರ್ಯ ಯಾರು? ಎಲ್ಲಿಯವನು? ನಾಗಾರ್ಜುನನ ಕೋಟೆ ಯಾವುದು? ಎಂಬುದು ನಿಶ್ಚಿತವಿಲ್ಲ. ಮಡಿದ ವೀರನಿಗೆ (ವೀರಗಲ್ಲಿನ ಹಾಗೆ) ವೀರಸ್ತಂಭವನ್ನೂ ನಿಲ್ಲಿಸುತ್ತಿದ್ದರೆಂಬ ಸಾಂಸ್ಕೃತಿಕ ಅಂಶವೊಂದು ಇಲ್ಲಿ ಕಂಡುಬರುತ್ತದೆ.

15518 ಪರುಶುರಾಮಪುರದ ಒಂದು ಶಾಸನದಲ್ಲಿ (ಚಳ್ಳ-35) : ಗೋಟೂರ ಔಬಳೇಶ್ವರ ಅರಸು ತಮ್ಮ ತಂದೆ ಔಬಳರಾಜಯ್ಯನಿಗೂ ತಾಯಿ ನರಸಮ್ಮನಿಗೂ ಗಣ್ಯವಾಗಬೇಕೆಂದು ಕೋಟೆಯ ಕೆರೆಯ ಹಿರಿಯ ಕೆರೆಗೆ ಸೇರಿದ ಹುಲ್ಲುಮನಿ ಕಾವಲನ್ನು ಶ್ರೀ ಚನ್ನಕೇಶವ ದೇವರ ಸನ್ನಿಧಿಯಲ್ಲಿ ಬಿಟ್ಟದ್ದನ್ನು ಹೇಳಲಾಗಿದೆ. 'ಗೋದನಗಳು' ಇಲ್ಲಿ ಮೇಯ್ದು, ನೀರು ಕುಡಿಯಲೆಂದು ಇಲ್ಲಿಯ 'ಧರ್ಮಕೆರೆ'ಯನ್ನು ಬಿಟ್ಟಿದ್ದಾಗಿ ಮತ್ತು ಯಾರಾದರು ಕೇಡೆಸಗಿದರೆ ಅವರು ಪಾಪಕ್ಕೆ ಪಕ್ಕಾಗುವುದಾಗಿ ಸಹ ಹೇಳಲಾಗಿದೆ. ಪ್ರಾಚೀನ ಕಾಲದ ಪಶುಸಂಗೋಪನೆಯನ್ನು ಈ ಶಾಸನ ಹೇಳುತ್ತದೆ ಎನ್ನಬಹುದು. ದನಗಳು ಮೇಯಲು ಹುಲ್ಲುಗಾವಲನ್ನು ಮತ್ತು ನೀರು ಕುಡಿಯಲು ಧರ್ಮದ ಕೆರೆಯನ್ನು ಬಿಡುತ್ತಿದ್ದರೆನ್ನುವುದು ನಮ್ಮ ಪೂರ್ವಿಕರ ಸಂಸ್ಕೃತಿಯ ಒಂದು ವಿಶೇಷವೆಂದೇ ಹೇಳಬಹುದು.

ಜೀರೇದೇವರ ಗುದ್ರ ಎಂಬಲ್ಲಿ ಇರುವ 1559ರ ಶಾಸನ (ಚಳ್ಳ-54) : ವಿಜಯನಗರದಲ್ಲಿ ಸದಾಶಿವರಾಯನು ಆಳುವಾಗ್ಗೆ ಮಹಾಮಂಡಲೇಶ್ವರನಾದ ತಿರುಮಲ ರಾಜಯ್ಯನಿಗೆ ಕಾರ್ಯಕರ್ತನಾದ, ಅನೇಕ ವಿಶೇಷ ಬಿರುದುಗಳನ್ನುಳ್ಳ ಕೋಟೆ ಕೆರೆಯ ಅಬ್ಬೆಯ ನಾಯಕ, ಬೊಮ್ಮನಾಯಕರ ವಂಶಸ್ಥನಾದ ಹರತಿಯ ಹೊಟ್ಟೆಣ್ಣನಾಯಕನು ಹಂಪೆಯ ವಿರೂಪಾಕ್ಷ ದೇವರ ಸ್ಥಾನಪತಿ ವೆಂಕಟಯ್ಯ ಅಥವಾ ವೆಂಕಟಾದ್ರಿಗೆ ಶ್ರೀ ವಿರೂಪಾಕ್ಷ ದೇವರ ವಿವಿಧ ನಿತ್ಯ ಸೇವೆಗಾಗಿ ಭೂದಾನ ನೀಡಿದ ಶಾಸನವಾಗಿದೆ. ಅವನು ಧಾರೆಯೆರೆದು ಕೊಟ್ಟ ದಾನ, ಗ್ರಾಮ ಚಿತಗೊಂಡನ ಹಳ್ಳಿಯು ರಾಯದುರ್ಗ ರಾಜ್ಯದ ಕೋಟೆಕೆರೆಯ ವೇಂಟೆಗೆ ಸೇರಿದ ದೊಡ್ಡೇರಿ ಸೀಮೆಯ ಮಧ್ವಸಮುದ್ರ ಸ್ಥಳದ ಚಟ್ಟೆಯ ಕಂಭಕ್ಕೆ ಸೇರಿದ ಗ್ರಾಮವಾಗಿತ್ತು. ಇಲ್ಲಿ ಕೊಟ್ಟಿರುವ ದಾನ, ಗ್ರಾಮದ ವಿವರ ವಿಜಯನಗರ ಕಾಲದ ಆಡಳಿತ ವಿಭಾಗಗಳ ಸಂಕೀರ್ಣ ಕ್ರಮವನ್ನು ತೋರಿಸುತ್ತದೆ. ಇಲ್ಲಿ ಹೇಳಿರುವ ಚಟ್ಟೆಯ ಕಂಭ ಮತ್ತು ಮಧ್ವಸಮುದ್ರ ಇವು ಈಗ ಚಟ್ಟೆ ಕಂಬ ಮತ್ತು ಮತ್ಸಮುದ್ರ ಎಂಬ ಊರುಗಳೇ ಆಗಿವೆ.

ಚಳ್ಳಕೆರೆ ಬಳಿಯ ಹಿರೇಮಧುರೆ ಗ್ರಾಮದ 1723ರ ಶಾಸನ (ಚಳ್ಳ-32) : ಚಿತ್ರದುರ್ಗ ಪ್ರಾಂತ್ಯವನ್ನು ಹಿರೇಮದಕರಿ ನಾಯಕನು ಆಳುತ್ತಿದ್ದಾಗ, ಅವನ ಪಾರುಪತ್ಯಗಾರ ದಾಸಣ್ಣ, ಅಟವಣದ ಕರಿಯಪ್ಪ ಇವರ ಪಾರುಪತ್ಯದಲ್ಲಿ ಭೂಸಣ್ಣ ಹಿರೇಮಧುರೆ ಎಂಬುವನು ಗೌಡ ರಾಜಯ್ಯನಿಗೆ ಭೂಮಿಯನ್ನು ಮಾನ್ಯವಾಗಿ ನೀಡಿದ್ದನ್ನು ದಾಖಲಿಸಿದೆ. ಗ್ರಾಮದ ಗೌಡಿಕೆ ಮಾಡುತ್ತಿದ್ದವನಿಗೆ ಅವನ ಕಾರ್ಯಕ್ಕೆ ಪ್ರತಿಯಾಗಿ ಪಾಳೆಯಗಾರರ ಪ್ರಭುತ್ವ ಭೂಮಿಯನ್ನು ಅನುಭವಿಸಲು ನೀಡುತ್ತಿತ್ತು ಎಂದು ಇದರಿಂದ ತಿಳಿಯಬಹುದು.

ಮುಂದುವರಿಯುವುದು...

ಸಾಧಕರು

ಸಂಗ್ರಹ : ಶಾಮಲ, ಅಧ್ಯಾಪಕರು (ನಿ)

ಪಾಲಕ್ಕಾಡಿನ ನಂಜಿಯಮ್ಮಗೆ ರಾಷ್ಟ್ರಪ್ರಶಸ್ತಿ



ಕೇರಳದ ಪಾಲಕ್ಕಾಡಿನ ಅಟ್ಟಪಾಡಿ ಕಾಡಿನ ಪ್ರತಿಭೆ ನಂಜಿಯಮ್ಮ, 2020ರಲ್ಲಿ ಸಂಗೀತ ನಿರ್ದೇಶಕ, ಸಿನಿಮಾ ನಿರ್ದೇಶಕರಿಂದ ಜಗತ್ತಿಗೆ ಪರಿಚಯಿಸಲ್ಪಟ್ಟರು. ನಂಜಿಯಮ್ಮ, ಮಲಯಾಳಂನ 'ಅಯ್ಯಪ್ಪನುಂ ಕೋಶಿಯುಂ' ಸಿನಿಮಾದಲ್ಲಿ 'ಕಲಕಾತ್ತ' ಹಾಡನ್ನು ಹಾಡಿದ್ದಾರೆ. ಈ ಹಾಡಿಗೆ ಇಂದು ರಾಷ್ಟ್ರಪ್ರಶಸ್ತಿ ಘೋಷಣೆಯಾಗಿದೆ. ಸಾಂಪ್ರದಾಯಿಕ ಹಾಗೂ ಶಾಸ್ತ್ರೀಯ ಸಂಗೀತದ ಅಭ್ಯಾಸವಿಲ್ಲದ ಹಳ್ಳಿ ಹೆಣ್ಣುಮಗಳು ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. ಅಟ್ಟಪ್ಪಾಡಿಯ ಕಾಡಿನ ಹಾಡಿಗಳಲ್ಲಿ ವಾಸಿಸುವ ನಂಜಿಯಮ್ಮ ಇರುಲ್ ಭಾಷೆಯಲ್ಲಿ ಜನಪದ ಹಾಡುಗಳನ್ನು ಗುಡ್ಡಗಾಡುಗಳಲ್ಲಿ ಕುರಿ–ದನ ಕಾಯುವಾಗ ತಮ್ಮ ಸಂತೋಶಕ್ಕೆ ಹಾಡಿಕೊಳ್ಳುತ್ತಿದ್ದರು. ಅವರ ಸಮುದಾಯದಲ್ಲಿಯೂ ಉತ್ತಮ ಪದಗಾರ್ತಿಯಾಗಿ ಇವರು ಖ್ಯಾತಿ ಪಡೆದಿದ್ದರು. ಅಲ್ಲಿನ ಜನಪದ ಕಲಾವಿದ ಪಳನಿ ಸ್ವಾಮಿ, ನಂಜಿಯಮ್ಮನವರ ಸ್ವರ ಮಾಧುರ್ಯ ಮತ್ತು ಪ್ರತಿಭೆಯನ್ನು ಗಮನಿಸಿ ಆತನ ಜನಪದ ಕಲಾತಂಡದಲ್ಲಿ ಅವಕಾಶ ನೀಡುತ್ತಿದ್ದರು. ಜನಪದ ಕಲಾವಿದರ 'ಆಜಾದಿ ಕಲಾ ಸಮಿತಿ'ಯಲ್ಲಿ ಹಾಡಿದ ನಂಜಿಯಮ್ಮನ ಗಾಯನ ವೀಕ್ಷಿಸಿದ ಸಂಗೀತ ನಿರ್ದೇಶಕ ಜೇಕ್ಸ್ ಬಿಜಾಯ್ ತಮ್ಮ ಸಿನಿಮಾದಲ್ಲಿ ಹಾಡುವ ಅವಕಾಶ ನೀಡುತ್ತಾರೆ. ಇರುಲ್ ಸಮುದಾಯದ ಜನಪದ ತಂಡವನ್ನೇ ಕರೆತಂದು ನಂಜಿಯಮ್ಮನವರಿಂದ ಹಾಡಿಸುತ್ತಾರೆ. ಈ ಹಾಡು ಹಿಟ್ ಆದ ಬಳಿಕ ಹಲವು ಅವಕಾಶಗಳು ನಂಜಿಯಮ್ಮನನ್ನು ಅರಸಿ ಬಂದವು. ಕೆಲವು ಡಾಕ್ಯುಮೆಂಟರಿಗಳಲ್ಲಿ, ಟಿವಿ ಶೋಗಳಲ್ಲಿ, ಸಿನಿಮಾಗಳಲ್ಲಿ ಹಾಡಿದರು. ಈ ಗಾಯನ ಮಾತ್ರವಲ್ಲ ನಟನೆಯ ಅವಕಾಶವೂ ನಂಜಿಯಮ್ಮಗೆ ದೊರಕುತ್ತಿವೆ. 2020 ರಲ್ಲಿ ಬಿಡುಗಡೆ ಆದ ಸಿನಿಮಾಗಳಿಗೆ ರಾಷ್ಟ್ರಪ್ರಶಸ್ತಿ ಘೋಷಣೆ ಆಗಿದ್ದು, ಅತ್ಯುತ್ತಮ ಗಾಯಕಿ ಪ್ರಶಸ್ತಿ ನಂಜಿಯಮ್ಮನವರಿಗೆ ದೊರಕಿದೆ. 'ಅಯ್ಯಪ್ಪನುಂ ಕೋಶಿಯುಂ' ಸಿನಿಮಾದ 'ಕಲಕತ್ತ' ಹಾಡು ಹಾಡಿದ್ದಕ್ಕೆ ನಂಜಿಯಮ್ಮ ರಾಷ್ಟ್ರಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸೌಜನ್ಯ : ಒನ್ ಇಂಡಿಯಾ

ಸಾಹಿತ್ಯಕ್ಕಾಗಿ ನೊಬೆಲ್ – ಸೆಲ್ಮಾ ಲಾಗರ್ ಲೋಫ್



ಪ್ರಪಂಚದಲ್ಲಿ ಸಾಹಿತ್ಯಕ್ಕಾಗಿ ನೊಬಲ್ ಪ್ರಶಸ್ತಿ ಪಡೆದ ಮಹಿಳಾ ಸಾಹಿತಿ ಸೆಲ್ಮಾ ಒಟ್ಟೆಲಿಯಾ ಲೊವಿಸಾ ಲಾಗರ್‌ಲೋಫ್ ಅವರು 1858 ರ ನವೆಂಬರ್ 20ರಂದು ಜನಿಸಿದ್ದರು. ಇವರ ತಂದೆ ರಾಯಲ್ ವರ್ಮಲ್ಯಾಂಡ್ ರೆಜಿಮೆಂಟಿನಲ್ಲಿ ಲೆಫ್ಟಿನೆಂಟ್ ಆಗಿದ್ದರು. ಎರಿಕ್ ಗುಸ್ಟಾಫ್ ಲಾಗರ್‌ಲೋಫ್ ಮತ್ತು ಲೂಯಿಸ್‌ರ ಆರು ಮಕ್ಕಳಲ್ಲಿ ಐದನೆಯವಳೇ ಸೆಲ್ಮಾ ಆಗಿದ್ದಾರೆ. ಆಕೆಯ ಅಜ್ಜಿ ಮೊಮ್ಮಗಳಿಗೆ ಕಾಲ್ಪನಿಕ ಮತ್ತು ಫ್ಯಾಂಟಸಿ ಕತೆಗಳನ್ನು ಹೇಳುತ್ತಿದ್ದರು. ಸೆಲ್ಮಾ ಶಾಲಾ ಶಿಕ್ಷಕಿಯಾಗಿ ಹತ್ತು ವರ್ಷಗಳ ಕಾಲ ಗ್ರಾಮಾಂತರ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಿದರು. ಕತೆ ಹೇಳುತ್ತಾ ಮಕ್ಕಳ ಕಲ್ಪನಾ ಶಕ್ತಿಯನ್ನು ವಿಸ್ತರಿಸಿದ್ದರಿಂದಾಗಿ ಮಕ್ಕಳಿಗೆ ಸೆಲ್ಮಾ ಅಚ್ಚುಮೆಚ್ಚಿನ ಶಿಕ್ಷಕಿಯಾಗಿದ್ದಳು. ಇವರು ಸ್ವೀಡಿಷ್ ನೊಬೆಲ್ ಅಕಾಡೆಮಿಯ ಮೊದಲ ಮಹಿಳಾ ಸದಸ್ಯೆಯಾಗಿ ಆಯ್ಕೆಯಾದರು. ಸೋವಿಯತ್ ರಷ್ಯಾ ಇವರ ಚಿತ್ರದ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತ್ತು. ಸ್ವೀಡಿಷ್ ಬ್ಯಾಂಕ್ ನೋಟೊಂದರಲ್ಲಿ ಅವರ ಚಿತ್ರವನ್ನು ಛಾಪಿಸಿತು. ನೋಟೊಂದರಲ್ಲಿ ಚಿತ್ರಿಸಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಇವರು ಪಾತ್ರರಾಗಿದ್ದಾರೆ. ಮೂಕಿ ಸಿನಿಮಾದ ಕಾಲದಲ್ಲಿಯೇ ಇವರ ಕಾದಂಬರಿಗಳು ಚಲನಚಿತ್ರಗಳಾಗಿ ಪ್ರಶಸ್ತಿ ಪಡೆದವು. ಇವರು 16ಕ್ಕೂ ಹೆಚ್ಚು ಕಾದಂಬರಿ, 9 ಸಣ್ಣಕಥಾ ಸಂಕಲನ, 2 ನಾಟಕ, 3 ಆತ್ಮಚರಿತ್ರೆಗಳು ಹಾಗೂ ವ್ಯಕ್ತಿಚಿತ್ರವನ್ನು ಬರೆದಿದ್ದಾರೆ. ಇವರ ಕೃತಿಗಳಾದ 'ದ ಎಂಪರರ್ ಆಫ್ ಪೋರ್ಚಗಲ್', 'ದ ವಂಡ್ರಫುಲ್ ಅಡ್ವೆಂಚರ್ ಆಫ್ ನೇಲ್ಸ್', 'ಇಸ್ಟರ್ ಸ್ಟೋರಿಸ್', 'ಕ್ರೇಸ್ಟ್ ಲೆಜೆಂಡರ್', ಮುಂತಾದ ಕೆಲವನ್ನು ಹೆಸರಿಸಬಹುದು. ಕೇವಲ ಸಾಹಿತಿಯಾಗಿ ಮಾತ್ರವಲ್ಲದೆ ಸೆಲ್ಮಾ ಮಹಿಳಾ ಹಕ್ಕುಗಳ ಚಳುವಳಿಯಲ್ಲಿಯೂ ಸಕ್ರಿಯರಾಗಿದ್ದರು. ಸ್ವೀಡನ್‌ನಲ್ಲಿ ಮಹಿಳೆಯರ ಮತದಾನದ ಹಕ್ಕಿನ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. 1911ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮತದಾರರ ಕಾಂಗ್ರೆಸ್‌ನ ಉದ್ಘಾಟನೆಯನ್ನು ಸೆಲ್ಮಾ ನೆರವೇರಿಸಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿದರು. ಇದರಿಂದಾಗಿ 1919ರಲ್ಲಿ ಸ್ವೀಡಿಷ್ ಸರ್ಕಾರ ಮಹಿಳೆಯರಿಗೆ ಮತದಾನದ ಹಕ್ಕು ನೀಡಿತು. ಇವರ ಪ್ರಮುಖ ಕಾದಂಬರಿ 'ಗೊಸ್ಟಾಬರ್ಲಿಂಗ್ ಸಾಗಾ' ಚಲನಚಿತ್ರವಾಗಿ, ನಾಟಕವಾಗಿಯೂ ಜನಪ್ರಿಯಗೊಂಡಿದೆ. ಈ ಕೃತಿಗೆ 1909ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ಸಾಹಿತ್ಯದ ಸಾಧನೆಗೆ ನೊಬೆಲ್ ಪುರಸ್ಕಾರ ಪಡೆದ ಪ್ರಥಮ ಮಹಿಳೆ ಸೆಲ್ಮಾ ಅವರಾಗಿದ್ದಾರೆ. ಸ್ವೀಡನ್ನಿನ ಏಳು ಜನ ಗಣ್ಯರು ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರಲ್ಲಿ "ಸೆಲ್ಮಾ ಲಾಗರ್‌ಲೋಫ್ ಒಬ್ಬರೇ ಮಹಿಳೆ" ಎಂಬುದು ಕೂಡ ಗಮನಾರ್ಹ ವಿಷಯವಾಗಿದೆ.

ಸೌಜನ್ಯ : ಸುವರ್ಣ ನ್ಯೂಸ್

ಸಾಮಾಜಿಕ ಮತ್ತು ಸಾಂಸ್ಕೃತಿಕ ಪುಟ

ಸಂಗ್ರಹ : ಅಖಿಲಾ ವಿದ್ಯಾಸಂದ್ರ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಾಲಂದಾ ವಿಶ್ವವಿದ್ಯಾನಿಲಯ



ಸ್ನಾತಕೋತ್ತರ ಪದವಿ ಪರೀಕ್ಷೆಗೆ ಪ್ರವೇಶ : ನಾಲಂದ ವಿಶ್ವವಿದ್ಯಾಲಯವು ಸಾಮಾನ್ಯ ಜ್ಞಾನಪೀಠವಾಗಿರಲಿಲ್ಲ. ಅಲ್ಲಿ ಸ್ನಾತಕೋತ್ತರ ಪದವಿಯ ಬಗ್ಗೆ ಪಾಠಪ್ರವಚನ ನೀಡಲಾಗುತ್ತಿತ್ತು. ಈ ವರ್ಗಕ್ಕೆ ಪ್ರವೇಶ ನಿಯಮ ಮಾತ್ರ ಅತೀ ಕಠಿಣವಿತ್ತು. ಪ್ರವೇಶಪೂರ್ವದಲ್ಲಿ ಒಂದು ಲಿಖಿತ ಹಾಗೂ ಮೌಖಿಕ ಪರೀಕ್ಷೆ ನಡೆಸಲಾಗುತ್ತಿತ್ತು. ಈ ಪರೀಕ್ಷೆಯಲ್ಲಿ ಶೇ. 20ರಷ್ಟು ಮಂದಿ ಮಾತ್ರ ಉತ್ತೀರ್ಣರಾಗುತ್ತಿದ್ದರಂತೆ ! ಈ ಪ್ರವೇಶ ಪೂರ್ವೈ ಪರೀಕ್ಷೆಯ ಕಠಿಣತೆ ಎಷ್ಟಿತ್ತೆಂದು ತಿಳಿಯುತ್ತದೆ. ಕೇವಲ ಬುದ್ಧಿಮತ್ತೆಯ ಜ್ಞಾನಿಗಳಿಗೆ ಮಾತ್ರ ಪ್ರವೇಶ ಸಿಗುತ್ತಿತ್ತು.

ಆಹಾರ ವ್ಯವಸ್ಥೆ ಮತ್ತು ಸ್ನಾನಗೃಹ : ವಿದ್ಯಾಕೇಂದ್ರಕ್ಕೆ ಪುಕ್ಕಟೆಯಾಗಿ ಶ್ರೀಮಂತ ದಾನಿಗಳಿಂದ ಬಟ್ಟೆ, ಆಹಾರ, ಹಾಸಿಗೆ ಮತ್ತು ಔಷಧಗಳ ಪೂರೈಕೆಯಾಗುತ್ತಿತ್ತು. ಹ್ಯೂಯೆನ್‌ತ್ಸಾಂಗನ ಕಾಲದಲ್ಲಿ (ಕ್ರಿಶ. 629–645) ನಾಲಂದದಲ್ಲಿ 10 ಸಹಸ್ರ ಮಂದಿ ವಿದ್ಯಾರ್ಥಿಗಳಿದ್ದು ಅವರ ಜೀವನಮಟ್ಟವು ಬೌದ್ಧ ಯತಿಗಳ ಯೋಗ್ಯತಾನುಸಾರವಾಗಿ ಭಿನ್ನಭಿನ್ನವಾಗಿತ್ತು. ಹೂಯೆನ್ ತ್ಸಾಂಗನು ತಾನಿದ್ದ ವಿಹಾರಕ್ಕೆ ಪ್ರತಿ ನಿತ್ಯ 120 ಜಂಬೂ ನೇರಳೆ ಹಣ್ಣು 20 ಅಡಿಕೆ, 20 ಜಾಯಿಕಾಯಿ ಫಲಗಳು, ಒಂದು ಔನ್ಸ್ ಕರ್ಪೂರ ಹಾಗೂ ಮಾಗಧ ರಾಜ್ಯದಲ್ಲಿ ಮಾತ್ರ ಬೆಳೆಯುತ್ತಿದ್ದ ಉತ್ತಮ ಜಾತಿಯ ಮಹಾಸಾಲಿ ಅಕ್ಕಿ ಒಂದು ಪೆಕ್ ಪೂರೈಸಲಾಗುತ್ತಿತ್ತು. ಈ ಅಕ್ಕಿಯು ಕೇವಲ ಅರಸರಿಗೆ ಅಥವಾ ಧಾರ್ಮಿಕ ಮಹಾಶಯರಿಗೆ ಮಾತ್ರ ನೀಡಲಾಗುತ್ತಿತ್ತು ಎನ್ನಲಾಗಿದೆ. ವಿದ್ಯಾರ್ಥಿಗಳ ಅಭ್ಯಂಜನ ವ್ಯವಸ್ಥೆಗಾಗಿ ಪೀಠವು ಸಕಲ ಏರ್ಪಾಡುಗಳನ್ನು ಮಾಡಿತ್ತು. ಸ್ನಾನ ವ್ಯವಸ್ಥೆಯನ್ನು ಕುರಿತು ಇತ್ಸಿಂಗ್ ಹೀಗೆ ವರ್ಣಿಸುತ್ತಾನೆ ; 'ನಾಲಂದ ವಿಹಾರದ ಸಮೀಪ 10 ದೊಡ್ಡ ಸ್ನಾನಗೊಳಗಳಿದ್ದವು. ಅಲ್ಲಿ ಸ್ನಾನ ಮಾಡಲು ಶಿಷ್ಯರಿಗೆ ಸೂಚನೆ ನೀಡಲು ನಿಗದಿಪಡಿಸಿದ ಕಾಲಕ್ಕೆ ದೊಡ್ಡ ಗಂಟೆ ಬಡಿಯುತ್ತಿದ್ದರು. ಪ್ರತಿಯೊಬ್ಬರೂ ತಮ್ಮ ಬಟ್ಟೆಯ ಸಹಿತ ಹುಮ್ಮಸ್ಸಿನಿಂದ ಬರುತ್ತಿದ್ದರು. ಕೆಲ ಸಮಯ ನೂರಾರು ಮಂದಿ, ಕೆಲವು ಬಾರಿ ಸಾವಿರಾರು ಮಂದಿ 'ಸ್ನಾನಕ್ಕಾಗಿ ಧಾವಿಸುತ್ತಿದ್ದರು. ನಮ್ರತೆ, ವಿನಯ್, ಹಸನ್ಮುಖ ಭಾವ, ಎಲ್ಲ ಶಿಷ್ಯರಲ್ಲೆದ್ದು ಕಾಣುತ್ತಿತ್ತು. ಈ ಸ್ನಾನಗೊಳಗಳಿಗೆ ಬರಲಪೇಕ್ಷಿಸದವರಿಗಾಗಿ ವಿಹಾರದ ಒಳಾಂಗಣದಲ್ಲಿ ಮತ್ತೊಂದು ಕಿರುಗೊಳದ ಏರ್ಪಾಡೂ ಇತ್ತು. ನಾಲಂದದಲ್ಲಿ ' ಹೀನಯಾನ ಮತ್ತು ಮಹಾಯಾನ ಪಂಥದ ಶಿಷ್ಯರೂ ಇರುತ್ತಿದ್ದರು.

ಮುಂದುವರಿಯುವುದು...

ಐಎನ್‌ಸ್ ವಿಕ್ರಾಂತ್ ಲೋಕಾರ್ಪಣೆ

ಸಂಗ್ರಹ : ಮಹೇಶ್



ಭಾರತದಲ್ಲಿ ದೇಶಿಯವಾಗಿ ವಿನ್ಯಾಸಗೊಳಿಸಿದ ಮತ್ತು ನಿರ್ಮಿಸಿದ ಮೊದಲ ವಿಮಾನವಾಹಕ ನೌಕೆ INS ವಿಕ್ರಾಂತ್ ಆಗಿದೆ. ಕೊಚ್ಚಿನ್ ಶಿಪ್ ಯಾರ್ಡ್ ಲಿಮಿಟೆಡ್‌ನ ಸಮಾರಂಭದಲ್ಲಿ 20,000 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಯುದ್ಧನೌಕೆ ವಿಕ್ರಾಂತ್ ಕಾರ್ಯಾರಂಭದೊಂದಿಗೆ, ಭಾರತವು ವಿಮಾನವಾಹಕ ನೌಕೆಯನ್ನು ವಿನ್ಯಾಸಗೊಳಿಸುವ ಮತ್ತು ನಿರ್ಮಿಸುವ ಸಾಮರ್ಥ್ಯವನ್ನು ಹೊಂದಿರುವ ರಾಷ್ಟ್ರಗಳ ಸಾಲಿಗೆ ಸೇರ್ಪಡೆಯಾಗಿದೆ. ಈ ಯುದ್ಧ ಹಡಗು 262 ಮೀಟರ್ ಉದ್ದ ಮತ್ತು 62 ಮೀಟರ್ ಅಗಲ ಮತ್ತು 28 ಗಂಟೆಗಳ ಗರಿಷ್ಠ ವೇಗವನ್ನು ಹೊಂದಿದೆ. ವಿಕ್ರಾಂತ್ ಸುಮಾರು 2200 ಕಂಪಾರ್ಟ್‌ಮೆಂಟ್‌ಗಳನ್ನು ಹೊಂದಿದೆ. ಮಹಿಳಾ ಅಧಿಕಾರಿಗಳು ಮತ್ತು ನಾವಿಕರು ಸೇರಿದಂತೆ ಒಟ್ಟು 1,600 ಸಿಬ್ಬಂದಿಯನ್ನು ಹೊಂದಿದೆ. ವಿಕ್ರಾಂತ್ ಕಳೆದ ವರ್ಷ ಆಗಸ್ಟ್ 21ರಿಂದ ಹಲವಾರು ಹಂತದ ಸಮುದ್ರ ಪ್ರಯೋಗಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಐಎನ್‌ಎಸ್ ವಿಕ್ರಾಂತ್‌ನ್ನು ಭಾರತೀಯ ನೌಕಾಪಡೆಯ ಆಂತರಿಕ 'ವಾರ್‌ಶಿಪ್ ಡಿಸೈನ್ ಬ್ಯೂರೋ' (WDB) ವಿನ್ಯಾಸಗೊಳಿಸಿದೆ ಮತ್ತು ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಿಸಿದೆ. INS ವಿಕ್ರಾಂತ್ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಅಡಿಯಲ್ಲಿ ಸಾರ್ವಜನಿಕ ವಲಯದ ಹಡಗುಕಟ್ಟೆಯಾಗಿದೆ. INS ವಿಕ್ರಾಂತ್ ಭಾರತದ ಕಡಲ ಇತಿಹಾಸದಲ್ಲಿ ಇದುವರೆಗೆ ನಿರ್ಮಿಸಲಾದ ಅತಿದೊಡ್ಡ ಹಡಗು. ಇದು ಅತ್ಯಾಧುನಿಕ ಯಾಂತ್ರೀಕೃತ ವೈಶಿಷ್ಟಗಳನ್ನು ಹೊಂದಿದ, 1971ರ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ ಭಾರತದ ಮೊದಲ ವಿಮಾನವಾಹಕ ನೌಕೆ, ಆಧುನಿಕ ತಾಂತ್ರಿಕತೆ ಬಳಸಿ ನೂತನವಾಗಿ ವಿನ್ಯಾಸಗೊಳಿಸಿದ ವಿಮಾನವಾಹಕ ನೌಕ, ಎಂದು ಹೆಸರಾಗಿದೆ.

ಸೌಜನ್ಯ : ಒನ್ ಇಂಡಿಯಾ

How to See yourself

by Dalai Lama, Translated by Jeffrey Hopkins

Buddhist notion that love and insight work cooperatively to bring about enlightenment, like the two wings of a bird. The overarching theme is that self-knowledge is the key to personal development and positive relationships. Dalai Lama shows us how, in the absence of true self-knowledge, we hurt ourselves through misguided, exaggerated notions of self, others, external events, and physical things. Even our senses deceive us, drawing us into attachment and negative actions that can only come back to haunt us in the future.

How to Make Meditation Meaningful :

You have to put together that if objects really did exist in the way they seem to, the logical consequences would be impossible, and on this basis you can fully appreciate that phenomena do not exist this way. People and things may still seem to exist concretely and independently from their own side, but you will know that they do not. Gradually, this awareness will weaken your misconceptions and diminish the trouble they cause. Since accepting appearances as truth is the basic problem, the antidote is to come to realize the falsity of appearances through reasoning.

Three Ways of Seeing Objects :- There are three modes of mental operation on an object:

1. Conceiving the object to inherently exist, which is what ignorance does
2. Conceiving the object to not inherently exist, which is what insight does
3. Conceiving the object without qualifying it with either inherent existence or an absence of inherent existence, as when just ordinarily seeing something, such as a house.

Even when you are not seeing an object as inherently existent, the way ignorance does, you are not necessarily seeing it as not inherently existent, the way insight does, since there are thoughts that do neither, which fall into the third category. This is why you need to delineate specifically those phenomena about which you are making this fundamental mistake. Just thinking about something else will not reverse ignorance. It would be like searching for a robber in town after the robber has gone to the forest.

When ignorance is overcome, you will have uprooted the mistaken beliefs that superimpose on objects qualities such as beauty and ugliness beyond what they actually have. Then all other afflictive emotions—lust, hatred, jealousy, belligerence, and so on—that have ignorance as their root are overcome. When afflictive emotions are removed, they can no longer motivate your actions (karma). Then your powerless birth and rebirth in cyclic existence driven by predispositions established by your actions (the other aspect of karma) are overcome, and liberation is attained.

You need to contemplate this progression so that it is clear to you, and then unerringly seek the truth. When you fully understand how you enter into and disengage from the round of suffering, you will appreciate and value knowing the way persons and things actually are. If you do not come to understand that ruinous attitudes can be extinguished, the existence of liberation will not be clear to you. But when you understand that mistaken perspectives can indeed be removed, your intention to achieve liberation will strengthen. This is why insight is so important.

Meditative Reflection

Consider this:

1. Ignorance leads to exaggerating the importance of beauty, ugliness, and other qualities.
2. Exaggeration of these qualities leads to lust, hatred, jealousy, belligerence, and so on.
3. These destructive emotions lead to actions contaminated by misperception.
4. These actions (karma) lead to powerless birth and rebirth in cyclic existence and repeated entanglement in trouble.
5. Removing ignorance undermines our exaggeration of positive and negative qualities; this undercuts lust, hatred, jealousy, belligerence, and so on, putting an end to actions contaminated by misperception, thereby ceasing powerless birth and rebirth in cyclic existence.
6. Insight is the way out.

To be Continued...


Courtacy : Atria Books

ಭಾರತದ ಪ್ರಥಮ ಪ್ರಧಾನ ಮಂತ್ರಿ : ಜವಹರಲಾಲ್ ನೆಹರು

ಸಂಗ್ರಹ : ಪ್ರೊ. ಎಂ. ಚಂದ್ರಶೇಖರಯ್ಯ

ಜವಾಹರಲಾಲರು ಹುಟ್ಟಿದ್ದು ಅಲಹಾಬಾದ್‌ನಲ್ಲಿ 1889ರ ನವೆಂಬರ್ 14ರಂದು. ಪ್ರತಿ ವರ್ಷವೂ ಈ ತೇದಿಯಂದು ಅವರ ಮನೆಯಲ್ಲಿ ಒಂದು ವಿಶೇಷ ಸಮಾರಂಭ ನಡೆಯುತ್ತಿತ್ತು. ಅಂದು ಬೆಳಿಗ್ಗೆ ಬಾಲಕ ಜವಾಹರಲಾಲ್‌ರನ್ನು ಒಂದು ದೊಡ್ಡ ತಕ್ಕಡಿಯಲ್ಲಿಟ್ಟು ತೂಗಲಾಗುತ್ತಿತ್ತು. ತೂಗಲು ಬಟ್ಟುಗಳ ಬದಲು ಗೋಧಿಯ ಅಥವಾ ಅಕ್ಕಿಯ ಮೂಟೆಗಳನ್ನಿಡಲಾಗುತ್ತಿತ್ತು. ಈ ಸಾಂಪ್ರದಾಯಿಕ ತುಲಾಭಾರ ಸಮಾರಂಭ ಮುಗಿದ ನಂತರ ಆ ಗೋಧಿ ಅಥವಾ ಅಕ್ಕಿಯನ್ನು ಬಡ ಜನರ ಮಧ್ಯೆ ಹಂಚಲಾಗುತ್ತಿತ್ತು. ಜವಾಹರಲಾಲರನ್ನು ಹೀಗೆ ಅಂದು ಹಲವಾರು ಬಾರಿ ತೂಗಲಾಗುತ್ತಿತ್ತು. ಗೋಧಿ, ಅಕ್ಕಿ, ಮಿಠಾಯಿ ಹಾಗೂ ಬಟ್ಟೆಬರೆಗಳನ್ನು ಸುತ್ತ ಇದ್ದ ಜನರಿಗೆ ಹಂಚುತ್ತಿದ್ದುದನ್ನು ಕಂಡು ಜವಾಹರಲಾಲರು ಅತ್ಯಾನಂದಗೊಳ್ಳುತ್ತಿದ್ದರು. ಇದರಿಂದಾಗಿ ಅನೇಕ ಮಂದಿ ನವೆಂಬರ್ 14 ಅನ್ನು ನೆನಪಿನಲ್ಲಿಟ್ಟಿರುತ್ತಿದ್ದರು. ಅದಕ್ಕೆ ಹಿಂದಿನ ರಾತ್ರಿಯೇ ಕುಟುಂಬಗಳೇ ನೆಹರೂ ಅವರ ಮನೆಯ ಹತ್ತಿರಕ್ಕೆ ಬಂದು ಮಾರನೆಯ ಬೆಳಿಗ್ಗೆ ಗೇಟು ತೆರೆಯುವವರೆಗೂ ಹೊರಗೇ ಕಾಯುತ್ತಿದ್ದರು. ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದವರು ತಮ್ಮ ಪಾಲಿನ ಬಳುವಳಿಗಳನ್ನು ಪಡೆದು ಕೊಂಡು, ಬಾಲಕನ ತಂದೆಗೆ ಗೌರವಪೂರ್ವಕವಾಗಿ ಬಾಗಿ ಪ್ರಣಾಮ ಸಲ್ಲಿಸಿ ಹೋಗುತ್ತಿದ್ದರು. ಮಕ್ಕಳು ತಮಗೆ ದೊರೆತ ಮಿಠಾಯಿ ತಿಂದು ಆ ಪುಟ್ಟ 'ರಾಜಕುಮಾರ"ನತ್ತ ಬೆರಗುಗಣ್ಣುಗಳಿಂದ ನೋಡುತ್ತಿದ್ದರು.

ಜವಾಹರಲಾಲರು ಒಂಟಿತನದಲ್ಲೇ ಬೆಳೆದರು. ಅವರ ಚಿಕ್ಕಪ್ಪ ದೊಡ್ಡಪ್ಪನವರ ಮಕ್ಕಳೆಲ್ಲ ಅವರಿಗಿಂತ ತುಂಬ ದೊಡ್ಡವರಾಗಿದ್ದರು. ಆ ಮಕ್ಕಳು ಇವರ ಬಗೆಗೆ ಪ್ರೀತಿಯಿಂದಿದ್ದರೂ, ಇವರಿಗೇ ಅವರ ಮಧ್ಯೆ ಇರಲು ಆಸಕ್ತಿ ಇರಲಿಲ್ಲ. ಎಳೆಯ ಜವಾಹರಲಾ ತಂದೆಯವರೊಡನೆ ಇರುವುದನ್ನೇ ಇಷ್ಟಪಡುತ್ತಿದ್ದರು. ಆದರೆ ಇದು ಹೆಚ್ಚಿನ ವೇಳೆ ಸಾಧ್ಯವಾಗುತ್ತಿರಲಿಲ್ಲ. ಜೊತೆಯಲ್ಲಿದ್ದಾಗ ಜವಾಹರಲಾಲನ ತಂದೆ ಸಮಯವನ್ನು ಸ್ವಾರಸ್ಯಕರವಾಗಿ ಕಳೆಯಲು ಉಪಾಯ ಹುಡುಕುತ್ತಿದ್ದರು. ಉದಾಹರಣೆಗೆ, ಅವರು ಬಣ್ಣ ಬಣ್ಣದ ಕಾಗದದಿಂದ ಮಾಡಿದ, ಉದ್ದ ಬಾಲವುಳ್ಳ, ಗಾಳಿಪಟವನ್ನು ಹಾರಿ ಬಿಡುತ್ತಿದ್ದರು. ಗಾಳಿಪಟವು ನೀಲನಭದಲ್ಲಿ ಎತ್ತರಕ್ಕೇರಿ ಒಮ್ಮೆ ಇತ್ತ ಅತ್ತ ತೂರಾಡುತ್ತ, ಥಟಕ್ಕನೆ ಕೆಳಗಿಳಿಯುತ್ತ ಆಮೇಲೆ ಅಷ್ಟೇ ಬೇಗ ಮೇಲೇರುತ್ತ ಹಾರಾಡುತ್ತಿದ್ದಿತು. ತಂದೆಗೆ ಸಂಬಂಧಿಸಿದಂತೆ ಅವರ ಎತ್ತರ ನಿಲುವು, ದೃಢ ಕಾಯ, ವಿಶಾಲ ಎದೆ, ನಿರ್ಭಯವಾದ ಬುದ್ಧಿವಂತ ಕಣ್ಣುಗಳು, ಪ್ರತಿಯೊಂದೂ – ಜವಾಹರಲಾಲನಿಗೆ ಆನಂದ ತರುತ್ತಿತ್ತು. ಅವರ ತಂದೆ ವೇಸ್‌ಕೋಟ್‌ನೊಂದಿಗೆ ಯೂರೋಪಿಯನ್ ಸೂಟ್ ತೊಡುತ್ತಿದ್ದರು. ಸಣ್ಣ ಸರಪಣಿಯುಳ್ಳ ಜೇಬುಗಡಿಯಾರ ಇರಿಸಿಕೊಂಡಿರುತ್ತಿದ್ದರು. ಎಳೆಯ ಜವಾಹರಲಾಲನ ದೃಷ್ಟಿಯಲ್ಲಿ ಅವರು ತಂದೆ ಧೈರ್ಯದ ಸಾಕಾರ ಸ್ವರೂಪಿಯಾಗಿದ್ದರು. ಬಾಲಕ ತಂದೆಯನ್ನು ಪ್ರೀತಿಸುತ್ತಿದ್ದ, ಅದೇ ಹೊತ್ತಿನಲ್ಲಿ ಹೆದರುತ್ತಲೂ ಇದ್ದನು.



ಕಾಶ್ಮೀರಿ ಬ್ರಾಹ್ಮಣ ಮೋತಿಲಾಲ ನೆಹರೂ ಅವರ ಮನೆಯಲ್ಲಿ ಸಂಪ್ರದಾಯ ಬದ್ಧ ಮುಸ್ಲಿಮ್ ಮುಬಾರಕ್ ಆಲಿ ಆಶ್ರಯ ಪಡೆದಿದ್ದರು. ಅವರು ಮೋತಿಲಾಲರ ಕಾರಕೂನರಾಗಿ ಕೆಲಸಮಾಡುತ್ತಿದ್ದರೂ ಅವರನ್ನು ಕುಟುಂಬದ ಒಬ್ಬ ಸದಸ್ಯರನ್ನಾಗಿಯೇ ಪರಿಗಣಿಸಲಾಗಿತ್ತು. ಮುಬಾರಕ್ 1857–1859ರ ಘಟನೆಗಳನ್ನು ಕಣ್ಣಾರೆ ಕಂಡಿದ್ದರು. ಆಂಗ್ಲ ಸೈನಿಕರು ಅವರ ತಂದೆಯನ್ನು ಅವರ ತಾಯಿಯ ಕಣ್ಮುಂದೆಯೇ ಗಲ್ಲಿಗೇರಿಸಿ ಕುಟುಂಬದ ಇತರ ಸದಸ್ಯರನ್ನು ಕೊಂದಿದ್ದರು. ಅವರಿಗೆ ಜೀವನದಲ್ಲಿ ಉಳಿದಿದ್ದ ಅತ್ಯಂತ ಪ್ರೀತಿಪಾತ್ರವಾದವರು ನೆಹರೂ ಮನೆತನ. ಜವಾಹರನ ಬಗೆಗೆ ಅವರಲ್ಲಿ ಕೋಮಲ ಭಾವನೆ ಇದ್ದಿತು. ಜವಾಹರನಿಗೂ ಮುಬಾರಕ್‌ರ ಬಗೆಗೆ ಅಂತಹುದೇ ಭಾವನೆ ಹೊಂದಿದ್ದನು. ಜವಾಹರ ಯಾವುದೇ ತೊಂದರೆಗೆ ಒಳಗಾದಾಗಲೂ ತಕ್ಷಣವೇ ಮುಬಾರಕ್ ಆಲಿ ಅವರ ಬಳಿಗೆ ಧಾವಿಸುತ್ತಿದ್ದನು. ಅವರ ಬಳಿ ಕುಳಿತು ಬಾಲಕ ಗಂಟೆಗಟ್ಟಲೆ 'ಅರೇಬಿಯನ್ ರಾತ್ರಿಗಳು' ಕಥೆಗಳನ್ನು ಕೇಳುತ್ತಿದ್ದನು.

ಮುಂದುವರಿಯುವುದು...



ತಂದೆ ಮೋತಿಲಾಲ್ ನೆಹರು, ತಾಯಿ ಸ್ವರೂಪ ರಾಣಿ ಜೊತೆ ಬಾಲಕ ಜವಹರಲಾಲ್ ನೆಹರು

Chronology of events of personal & Public life of Mahatma Gandhi
(year wise - from 1869)

December 2. *Commended Bande Mataram as India's national anthem.*

December 4. *As Secretary, British Indian Association, bade farewell to Sir Arthur Lawley, Governor-designate of Madras.*

December 6. *Cape Colony Supreme Court decided Natal Indians had the right of domicile in Cape Colony, on the basis of long residence, even when accompanied by families.*

December 22. *British Indian Association protested to High Commissioner about bracketing of British Indians with coloured persons in Orange River Colony draft ordinances. Later, High Commissioner turned down Indian request for amending definition of "Coloured Person" in legislation.*

December 23. *Gandhi commended cause of education to Indian youth, citing Gokhale. Deprecated third-party intervention in settlement of communal disputes in India.*

December 30. *Reviewed the position of British Indians in South Africa during 1905 and appealed to Indians to continue their struggle "with reasonableness, ... with patience and yet with persistence".*

Deplored factious riots among Muslim community in Heidelberg.

Acted as best man at wedding of Mr Polak and Miss Douns.

1906 - January 1. *Pound one tax on Indians aged 18 or above enforced; Natal Early. The Closing Act came into force.*

January 20. *Mansukhlal Hiralal Naazar, at one time Editor, Indian Opinion, died.*

February 3. *Hindi and Tamil columns of Indian Opinion discontinued.*

February 22. *In statement to Dadabhai Naoroji, Gandhi stressed the need for safeguarding Indian interests under responsible government in the Transvaal and Orange River Colony.*

February 26. *Suggested to Dadabhai Naoroji that a deputation wait on the British ministers on behalf of South African Indians.*

February 28. *Spoke at presentation of address by Natal Indian Congress Abdul Kadir, retiring President.*

The Natal native trouble, known as Zulu Rebellion, led by Bambata, broke out.

future of Indian Opinion, Gandhi reiterated its objects and appealed to Indian community to make the journal its

March 17. *Gandhi exhorted Indians to volunteer their services to the Government on the occasion of the Zulu Rebellion. Urged the Government, in Indian Opinion, to employ Indians in voluntary work,*

To be continued...

Courtesy : Mahatma Gandhi A Chronology, Published by : Ministry of Information & Broadcasting, Govt. of India, Collection by : Dr. Poornima Jogi, N.S.S.

ಸರ್.ಎಂ. ವಿಶ್ವೇಶ್ವರಯ್ಯ ಜನ್ಮದಿನ (15.09.1861 – 14.04.1962)

ಸಂಗ್ರಹ : ಡಾ. ವಿ. ಪ್ರಶಾಂತ



ಚಿಕ್ಕಬಳ್ಳಾಪುರ ನಂದಿಬೆಟ್ಟದ ಬುಡದಲ್ಲಿರುವ ಮುದ್ದೇನಹಳ್ಳಿಯಲ್ಲಿ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರು ಜನಿಸಿದರು. ಅವರ ಜನ್ಮದಿನ ಪ್ರತಿ ವರ್ಷ 'ಎಂಜಿನಿಯರ್ಸ್ ಡೇ' ಆಗಿ ಆಚರಿಸಲಾಗುತ್ತದೆ. ವಿಶ್ವೇಶ್ವರಯ್ಯ ಅವರು ಭಾರತದ ಮೊದಲ ಸಿವಿಲ್ ಎಂಜಿನಿಯರ್. ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಯನ್ನು ಸರ್ಕಾರ, ಸರ್ಕಾರಿ ಸಂಸ್ಥೆಗಳು, ಎಂಜಿನಿಯರ್ ಸಂಘಗಳು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಜನರು ನೆನಪಿಸಿಕೊಳ್ಳುತ್ತಾರೆ. ವಿಶ್ವೇಶ್ವರಯ್ಯ ಅವರು ಇಂಜಿನಿಯರಿಂಗ್ ಕಾಲೇಜಿನಿಂದ ಪದವಿ ಪಡೆದರು. ಇವರಿಗೆ ನೀರಾವರಿ ಹಾಗೂ ಪ್ರವಾಹ ತಡೆ ಯೋಜನೆಗಳು ಆಸಕ್ತಿಯ ಕ್ಷೇತ್ರಗಳಾಗಿದ್ದವು. ಇವರು ಭಾರತೀಯ ನೀರಾವರಿ ಕಮಿಷನ್ ಸೇರಿದ ನಂತರ ದಖನ್ ಪ್ರಸ್ತಭೂಮಿಯಲ್ಲೇ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ಪರಿಚಯಿಸಿದರು. ಸರ್ ಎಂ. ವಿ.ಅವರು ಅರ್ಥರ್ ಕಾಟನ್ ಅವರಿಂದ ಬಹಳಷ್ಟು ಪ್ರಭಾವಿತರಾಗಿದ್ದರು. ಕಾವೇರಿ ನದಿಗೆ ಅಣೆಕಟ್ಟು ಕಟ್ಟುವಲ್ಲಿ ಮಹಾರಾಜರಲ್ಲಿ ವರದಿ ಸಲ್ಲಿಸಿದ್ದರು. ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಜೊತೆ ಮೈಸೂರು ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಕೆಲಸ ಮಾಡಿದರು. ಮಂಡ್ಯ ಜಿಲ್ಲೆಯಲ್ಲಿ ಮಹಾರಾಜರು ನಿರ್ಮಿಸಿರುವ ಕೃಷ್ಣರಾಜಸಾಗರ ಅಣೆಕಟ್ಟು ವಿಶ್ವೇಶ್ವರಯ್ಯ ಅವರ ಕನಸಿನ ಕೂಸು. ಪುಣೆ ಸಮೀಪ 1903ರಲ್ಲಿ ನಿರ್ಮಿಸಿದ ಖಡಕ್ ವಾಸ್ಲಾ ಜಲಾಶಯದಲ್ಲಿ ಅಳವಡಿಸಿರುವ ಅಟೊಮ್ಯಾಟಿಕ್ ಬ್ಯಾರಿಯರ್ ವಾಟರ್ ಫ್ಲಡ್‌ಗೇಟ್‌ಗಳು ವಿಶ್ವೇಶ್ವರಯ್ಯ ಅವರ ಕಲ್ಪನೆ ಮತ್ತು ಚಿಂತನೆಯ ಸಾಮರ್ಥ್ಯವನ್ನು ಸಾರಿ ಹೇಳುತ್ತಿವೆ. ಬೆಂಗಳೂರಿನಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು. ಇದೇ ಕಾಲೇಜಿಗೆ ನಂತರ ಅವರ ಹೆಸರನ್ನೇ ಇಡಲಾಯಿತು. ಮೈಸೂರು ವಿಶ್ವವಿದ್ಯಾಲಯದ ಬೆಳವಣಿಗೆಗಾಗಿಯೂ ಶ್ರಮಿಸಿದರು. ಬ್ರಿಟಿಷ್ ಸರ್ಕಾರವು ವಿಶ್ವೇಶ್ವರಯ್ಯ ಅವರ ಸೇವೆಯನ್ನು ಗುರುತಿಸಿ, 'ನೈಟ್ ಕಮಾಂಡರ್ ಆಫ್ ದಿ ಬ್ರಿಟಿಷ್ ಇಂಡಿಯನ್ ಎಂಪೈರ್' ಎಂಬ ಬಿರುದನ್ನು ಪ್ರದಾನಿಸಿತ್ತು. ಭಾರತದ ಸರ್ಕಾರವು ಇವರಿಗೆ 1955ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

History of Medival India

by Satish Chandra
Translated by Jeffrey Hopkins

Continued from previous edition...

India and the WorldThe thousand-year period between the eighth and the eighteenth century saw important changes in India and the world. New social and political forms rose in Europe as well as Asia. The new forms also had profound effects on the thinking and living patterns of the people. These changes also impacted India since India had long-standing trade and cultural relations with countries around the Mediterranean Sea, and the various empires that arose in the area, including the Roman and Persian empires.

THE ARAB WORLD

Arab science began to decline after the twelfth century partly due to political and economic developments affecting the area, but even more on account of growing orthodoxy which stifled free thought. But it continued to grow in Spain until the fourteenth century..

AFRICA

The Arabs also brought Africa more closely into the Indian Ocean and Middle Eastern trade. Arab migrations and mercantile activity along the east coast of Africa increased enormously, extending up to Malindi, Zanzibar etc. However, the Arab trade included large-scale export of slaves, such as also gold, ivory, etc; There was in Africa powerful Ethiopian kingdom of long standing which had many towns. The Ethiopians were engaged in the Indian Ocean trade across Aden to India. The Ethiopians, called Habshis, were Christians. They were closely allied to the Byzantine empire in the Indian Ocean trade. Their economic position weakened with the decline of the Byzantine empire.

EAST AND SOUTHEAST ASIA

China's society and culture had attained a climax in the eighth and ninth centuries under Tang rule. The Tang rulers extended their overlordship over large parts of Sinkiang in Central Asia, including Kashgar. This helped in giving a fillip to the overland trade across what is called the Silk Road. Not only silk, but fine quality porcelain, and works in jade-a semi-precious stone-were exported to West Asia, Europe and India across this road. Foreign traders were welcome in China. Many of them-Arabs, Persians and Indians-came to South China, across the land and the seas, and settled down in Canton. The Tang empire declined in the middle of the ninth century, and was replaced in the tenth century by another dynasty, the Sung, which ruled over China for about one hundred years. Its growing weakness gave an opportunity to the Mongols to conquer China in the thirteenth century. The Mongols wrought great death and destruction in China. But due to their highly disciplined and mobile cavalry forces, the Mongol rulers were able to unify north and south China under one rule for the first time. For some time, they also brought under their sway Tonkin (north Vietnam) and Annam (south Vietnam). In the north, they overran Korea. Thus, the Mongols established one of the largest empires in East Asia. The Venetian traveller, Marco Polo, who spent some time at the court of Kublai Khan, the most famous of the Mongol rulers of China, has left a picturesque account of his court. Marco Polo returned to Italy by sea, visiting Malabar in India on the way. Thus, already different parts of the world were coming closer together, and their coII!_ mercial and cultural contacts were increasing. The countries of Southeast Asia had to meet the expansionist urges of some of the Chinese rulers, China having developed a strong navy by this time. But during most of the time, the Southeast Asian states remained independent. The two most powerful kingdoms which flourished in the region during the period were the Sailendra and Kambuja empires. The Sailendra dynasty which arose in the seventh century, and constituted the Sri Vijaya empire, flourished till the tenth century. At its height, the empire included Sumatra, Java, the Malaya peninsula, parts of Siam (modern Thailand) and even the Philippines. According to a ninth century Arab writer, the empire was so large thateven the fastest vessel could not complete a round trip of it in two years. The Sailendra rulers had a powerful navy, and dominated the sea trade to China. The Sri Vijaya empire was replaced by the Majapahit empire in the eleventh century. It further extended the limits of the Sri Vijaya empire and continued till the fourteenth century. The Pallavas of south India also had a powerful navy. The Pallava navy was especially active in the Bay of Bengal. The sea trade with the countries of Southeast Asia and China was so important that in the tenth century, a Chola ruler sent a series of naval expeditions to Sumatra and Malaya to keep the sea lanes of communications open.

To be continueed...

Courtacy : Orient Black Swan

ಶ್ರದ್ಧಾಂಜಲಿ

ವೆಂಕಣ್ಣ ನಾಯಕ (1920 – 04.09.2022)



ಸ್ವಾತಂತ್ರ್ಯ ಹೋರಾಟಗಾರ, ಶತಾಯುಷಿ ವೆಂಕಣ್ಣ ಬೊಮ್ಮಯ್ಯ ನಾಯಕ ಅಂಕೋಲಾ ತಾಲೂಕಿನವರು. ಅವರು ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಚಳವಳಿ, ಜಂಗಲ್ ಸತ್ಯಾಗ್ರಹ, ಹುಲ್ಲುಬನ್ನಿ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ ಒಳಗೊಂಡು ಹಲವು ಪ್ರಮುಖ ಹೋರಾಟದಲ್ಲಿ ಭಾಗವಹಿಸಿದ್ದರು. ಇದರ ಪರಿಣಾಮ 1942ರ ಡಿಸೆಂಬರ್ 5ರಿಂದ 1943ರ ಜೂ.7ರವರೆಗೆ ನಾಸಿಕ್‌ದಲ್ಲಿ ಇರುವ ಸೆಂಟ್ರಲ್ ಜೈಲ್‌ನಲ್ಲಿ ಸೆರೆವಾಸ ಅನುಭವಿಸಿದ್ದರು. ಸ್ವಾತಂತ್ರ್ಯದ ಬಳಿಕ ತಳಗದ್ದೆಯ ಸೇವಾ ಸಹಕಾರಿ ಸಂಘ ಸಂಸ್ಥಾಪನಾ ಅಧ್ಯಕ್ಷರಾಗಿ, ಸೂರ್ವೆ ಸೇವಾ ಸಹಕಾರಿ ಸಂಘ ಅಧ್ಯಕ್ಷರಾಗಿ, ತಾಲೂಕು ಕೃಷಿ ಹುಟ್ಟುವಳಿ ಮಾರಾಟ ಸಹಕಾರಿ ಸಂಘ, ಶೆಟಗೇರಿಯ ಸತ್ಯಾಗ್ರಹ ಸ್ಮಾರಕ ವಿದ್ಯಾಲಯ ಸಂಸ್ಥಾಪಕ, ಅಗಸೂರಿನ ಗಂಗಾವಳಿ ಸಹಕಾರಿ ಹಂಚಿನ ಕಾರ್ಖಾನೆ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳ ನಿರ್ದೇಶಕರಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಕರ್ನಾಟಕದ ಬಾರ್ಡೋಲಿ ಅಂಕೋಲಾದ ಐತಿಹಾಸಿಕ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ತ್ಯಾಗ ಬಲಿದಾನ ಅವಿಸ್ಮರಣೀಯವಾದುದು. ಅವರ ನಿಧನದಿಂದ ಸ್ವಾತಂತ್ರ್ಯ ಹೋರಾಟದ ಮುಕುಟಮಣಿಯೊಂದು ಕಳಚಿದಂತಾಗಿದೆ.

ಉಮೇಶ್ ಕತ್ತಿ (14.03.1961 – 06.09.2022)



ಉತ್ತರ ಕರ್ನಾಟಕ ಭಾಗದ ರಾಜಕೀಯ ಧುರೀಣರಾದ ಉಮೇಶ್ ಕತ್ತಿ ತಿಲಕವಾಡಿಯಲ್ಲಿ ಜನಿಸಿದ್ದರು. ತಂದೆ ವಿಶ್ವನಾಥ್ ಕತ್ತಿ ಅವರೂ ಸಹ ರಾಜ್ಯದ ಹಿರಿಯ ರಾಜಕಾರಣಿಯಾಗಿದ್ದರು. ಉಮೇಶ್ ಕತ್ತಿ ಅವರಿಗೆ ರಾಜಕೀಯ ರಕ್ತಗತವಾಗಿ ಬಂದಿತ್ತು. ಹೀಗಾಗಿ ಹುಕ್ಕೇರಿ ಕ್ಷೇತ್ರದಿಂದ 1985ರಲ್ಲಿ ಮೊದಲ ಬಾರಿಗೆ ಜನತಾ ಪಕ್ಷದಿಂದ ಜಯ ಗಳಿಸಿದ್ದರು. 2010ರಲ್ಲಿ ಕೃಷಿ ಸಚಿವರಾಗಿದ್ದು, ಕರ್ನಾಟಕದಲ್ಲಿ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಕೀರ್ತಿ ಇವರದ್ದಾಗಿದೆ. ಉಮೇಶ್ ಕತ್ತಿ ಅವರು ರಾಜಕೀಯ ಜೀವನದಲ್ಲಿ 9 ಬಾರಿ ಚುನಾವಣೆ ಎದುರಿಸಿ, 8 ಬಾರಿ ಗೆದ್ದು ದಾಖಲೆ ಬರೆದಿದ್ದಾರೆ. ಜೊತೆಗೆ ನಾಲ್ಕು ಬಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಉಮೇಶ್ ಕತ್ತಿ ಅವರು ಸಕ್ಕರೆ, ಲೋಕೋಪಯೋಗಿ, ಬಂಧೀಖಾನೆ, ತೋಟಗಾರಿಕೆ, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಹಲವು ಹುದ್ದೆಗಳನ್ನು ನಿಭಾಯಿಸಿದ ಅನುಭವಿಯೂ ಆಗಿದ್ದರು. ಇವರ ನಿಧನದಿಂದ ನೇರನುಡಿಗಳ, ಜನರ ಪ್ರತಿಧ್ವನಿಯೊಂದು ಆರಿದಂತಾಗಿದೆ.

ಪ್ರೊ.ಬಿ. ಗಂಗಾಧರಮೂರ್ತಿ (1945 – 10.09.2022)



ಖ್ಯಾತ ಲೇಖಕ, ಚಿಂತಕ ಪ್ರೊ.ಬಿ ಗಂಗಾಧರಮೂರ್ತಿ ಅವರು ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿ ನಿವೃತ್ತರಾಗಿದ್ದರು. ಅವರು ಕಳೆದ ನಾಲ್ಕು ದಶಕಗಳಿಂದ ಬಂಡಾಯ ಸಾಹಿತ್ಯ, ದಲಿತ ಚಳವಳಿ, ಜ್ಞಾನವಿಜ್ಞಾನ ಚಳವಳಿ, ವಿಚಾರವಾದಿ ಚಳವಳಿ ಹೀಗೆ ನಾಡಿನ ಬಹುತೇಕ ಪ್ರಗತಿಪರ ಚಳವಳಿಗಳ ಭಾಗವಾಗಿದ್ದರು. ಸಂಸ್ಕೃತಿ ಚಿಂತಕರಾಗಿ, ಬರಹಗಾರರಾಗಿ, ಅನುವಾದಕರಾಗಿ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಕರೆಯಲ್ಪಡುವ ವಿದುರಾಶ್ವತ್ಥದಲ್ಲಿ ಸ್ವಾತಂತ್ರ್ಯ ಸ್ಮಾರಕ ಸಂಕೀರ್ಣವನ್ನು ಅಪಾರ ಶ್ರಮ ಹಾಗೂ ಬದ್ಧತೆಯಿಂದ ವಿಶಿಷ್ಟವಾಗಿ ರೂಪಿಸಿ, ವಿನ್ಯಾಸಗೊಳಿಸಿದ್ದರು. ಲೇಖಕರಾಗಿಯೂ ಗಂಗಾಧರಮೂರ್ತಿ ಅವರು ಮಹತ್ವದ ಕೆಲಸ ಮಾಡಿದ್ದಾರೆ. ಹೂ ಅರಳುವಂಥ ಮಣ್ಣು (ಕವನ ಸಂಕಲನ), ನಾಗಸಂದ್ರ ಭೂ ಆಕ್ರಮಣ ಚಳವಳಿ, ಭಾರತದ ಬೌದ್ಧಿಕ ದಾರಿದ್ರ್ಯ(ಅನುವಾದ), ಭಾರತೀಯ ಸಮಾಜದ ಜಾತಿ ಲಕ್ಷಣ (ಅನುವಾದ), ಅಂಬೇಡ್ಕರ್ ಮತ್ತು ಮುಸ್ಲಿಮರು (ಅನುವಾದ), ವಸಾಹತುಪೂರ್ವ ಕಾಲದ ಜಾತಿಹೋರಾಟಗಳು, ಹಿಂದುತ್ವ ಮತ್ತು ದಲಿತರು, ಸೂಫಿ ಕಥಾಲೋಕ, ಭಾರತದ ಸ್ವಾತಂತ್ರ್ಯ ಚಳವಳಿಯ ಪ್ರಧಾನೇತರ ಹೋರಾಟಗಳು ಮುಂತಾದ ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ಕೆಲವು ತಿಂಗಳ ಹಿಂದೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು. ಗಾಂಧಿ ಭವನದಲ್ಲಿ ನಡೆದ ಅಂಬೇಡ್ಕರ್ ಕೃತಿ ಬಿಡುಗಡೆ ಸಮಾರಂಭದಲ್ಲಿ ಪತ್ನಿ ಸಮೇತರಾಗಿ ಭಾಗವಹಿಸಿದ್ದರು. ಇವರ ಅಕಾಲಿಕ ನಿಧನದಿಂದಾಗಿ ಚಿಂತಕ, ಸಾಹಿತಿ, ಸಂಘಟಕ, ಸ್ಮಾರಕ ವಿನ್ಯಾಸಕಕಾರರೊಬ್ಬರನ್ನು ಕಳೆದುಕೊಂಡಂತಾಗಿದೆ.

ರವಿ ಪ್ರಸಾದ್ (22.02.1979 – 14.09.2022)



ಕನ್ನಡ ಕಿರುತೆರೆಯ ಖ್ಯಾತ ನಟ, ಮಗಳು ಜಾನಕಿ ಧಾರಾವಾಹಿಯ ಚಂದು ಭಾರ್ಗಿಯಾಗಿ ಪ್ರೇಕ್ಷಕರ ಹೃದಯ ಗೆದ್ದಿದ್ದ ನಟ ಮಂಡ್ಯ ರವಿ ಅವರ ಪೂರ್ಣ ಹೆಸರು ರವಿ ಪ್ರಸಾದ್. ಖ್ಯಾತ ನಿರ್ದೇಶಕ ಟಿಎನ್ ಸೀತರಾಮ್ ಅವರ ಅನೇಕ ಧಾರಾವಾಹಿಗಳಲ್ಲಿ ರವಿ ಅವರು ನಟಿಸಿದ್ದಾರೆ. ರಂಗಭೂಮಿ ಹಿನ್ನೆಲೆಯಿಂದ ಬಂದ ರವಿ ಧಾರಾವಾಹಿ ಜೊತೆಗೆ ಕೆಲವು ಸಿನಿಮಾಗಳಲ್ಲೂ ನಟಿಸಿದ್ದಾರೆ. ಎಂಎ, ಎಲ್.ಎಲ್.ಬಿ ಪದವೀಧರ ರವಿ ಅದ್ಭುತ ನಟನೆ ಮೂಲಕ ಪ್ರೇಕ್ಷಕರ ಹೃದಯ ಗೆದ್ದಿದ್ದರು. ನಟ ರವಿ ಅನೇಕ ಧಾರಾವಾಹಿಗಳಲ್ಲಿ ಮಿಂಚಿದ್ದಾರೆ. ಚಿತ್ರಲೇಖ, ಮಿಂಚು, ಮುಕ್ತ ಮುಕ್ತ, ವರಲಕ್ಷ್ಮೀ ಸ್ಟೋರ್ಸ್ ಮುಂತಾದ ಧಾರಾವಾಹಿಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸಿದ್ದಾರೆ. ಇನ್ನು ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿದ್ದ ಕ್ರೈಂ ಫೈಲ್ ಕಾರ್ಯಕ್ರಮವನ್ನು ರವಿಪ್ರಸಾದ್ ನಿರೂಪಣೆ ಮಾಡಿದ್ದರು. ಇವರ ನಿಧನದಿಂದಾಗಿ ಕನ್ನಡ ಕಿರುತೆರೆಯ ಅದ್ಭುತ ನಟನೊಬ್ಬನನ್ನು ಕಳೆದುಕೊಂಡಂತಾಗಿದೆ.

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಗಾಂಧಿ ಭವನದ ಬಾಪು ಪ್ರಪಂಚ ಪತ್ರಿಕೆಯು ದೇಶಕಂಡ ಮಹನೀಯರ ಜೀವನಗಾಥೆ, ಆರೋಗ್ಯ, ಪರಿಸರ, ಇತಿಹಾಸದ ಘಟನೆಗಳು, ಅಂತರರಾಷ್ಟ್ರೀಯ ಸಮಾಚಾರಗಳು, ಸಮಾಜ ಸೇವಕರ ಪರಿಚಯ, ಪುಸ್ತಕ ವಿಮರ್ಶೆ, ಹೀಗೆ ಹತ್ತು ಹಲವಾರು ವಿಷಯಗಳನ್ನೊತ್ತು ಪ್ರಕಟಿತಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಅಭಿಲಾಷ್ ಹೆಗ್ಗೋಡು

ಬಾಪು ಪ್ರಪಂಚ ಆಗಸ್ಟ್ ಸಂಚಿಕೆಯಲ್ಲಿನ ಲೇಖನಗಳು ಸಂಕೀರ್ಣವಾಗಿದ್ದು ವಿಷಯಾಧಾರಿತ ಮಾಹಿತಿಯುಳ್ಳ ಲೇಖನಗಳಿಂದ ಕೂಡಿದೆ. ಇಂತಹ ಅಪೂರ್ವ ಸಂಚಿಕೆಯನ್ನು ಹೊರತಂದ ಸಂಪಾದಕರಾದ ಇಂದಿರಾ ಕೃಷ್ಣಪ್ಪ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಕೆ. ವನಜಾಕ್ಷಿ

ಬಾಪು ಪ್ರಪಂಚ ಗಾಂಧಿ ಭವನದಿಂದ ಪ್ರತಿಷ್ಠಿತ ಮಾಸ ಪತ್ರಿಕೆಯಾಗಿ ಸಂಕೀರ್ಣವಾದ ವಿಷಯಾಧಾರಿತ ಲೇಖನಗಳೊಂದಿಗೆ ಪ್ರಕಟಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಸ್.ಜಿ. ಸುಶೀಲಮ್ಮ

ಮಹಾತ್ಮ ಗಾಂಧಿ ಅವರ ಜೀವನಾವಧಿಯಲ್ಲಿ ಘಟಿಸಿದ ಅನೇಕ ಸಂಗತಿಗಳು ಬಾಪು ಪ್ರಪಂಚ ಪತ್ರಿಕೆಯ ಲೇಖನಗಳಲ್ಲಿ ಪ್ರಕಟಗೊಳ್ಳುತ್ತಿರುವುದು ಗಾಂಧೀಜಿ ಅವರನ್ನು ಕುರಿತು ಹೆಚ್ಚು ವಿಷಯಗಳನ್ನು ಅರಿಯಲು ಸಹಕಾರಿಯಾಗಿದೆ.

ಡಾ. ಚೌಡಪ್ಪ, ಉಪನ್ಯಾಸಕರು

ಆಗಸ್ಟ್ ಸಂಚಿಕೆಯಲ್ಲಿನ ಗಾಂಧಿ ಹೆಜ್ಜೆಜಾಡಿನಲ್ಲಿ ಸಾಗಿದವರು, ಕಸ್ತೂರ್‌ಬಾ, ಹಾಗೂ ಬಾಲಗಂಗಾಧರ ತಿಲಕ್ ಅವರ ಲೇಖನಗಳು ಅವರುಗಳು ಸ್ವಾತಂತ್ರ್ಯಕ್ಕಾಗಿ, ಸಮಾಜದ ಔನ್ನತ್ಯಕ್ಕಾಗಿ ತಮ್ಮನ್ನು ಮುಡಿಪಾಗಿರಿಸಿಕೊಂಡುದರ ಪರಿಚಯ ಮಾಡಿಸುತ್ತದೆ. ಪ್ರಕಾಶಕರಿಗೆ ವಂದನೆಗಳು.

ಡಾ. ವಿ.ಎಸ್. ಪಾರ್ವತಿ

ಗಾಂಧಿ ಭವನದಿಂದ ಪ್ರಕಟವಾದ ಆಗಸ್ಟ್ ತಿಂಗಳ ಸಂಚಿಕೆಯು ಹಿರಿಯ ಸಾಹಿತಿ, ಸಂಶೋಧಕ ಡಾ. ಶ್ರೀನಿವಾಸ ಹಾವನೂರ್, ಹಿರಿಯ ಗಾಂಧೀವಾದಿ ನಿಟ್ಟೂರು ಶ್ರೀನಿವಾಸರಾಯರು, ಅರವಿಂದ ಘೋಷ್ ಅವರ ಲೇಖನಗಳು ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಮಹನೀಯರ ಪರಿಚಯ, ಆರೋಗ್ಯದ ಪಾಲನೆ ಕುರಿತಾದ ಲೇಖನಗಳು ಓದುಗನಲ್ಲಿ ಆಸಕ್ತಿ ಮೂಡಿಸುವುದರ ಜೊತೆಗೆ, ಬರವಣಿಗೆಗೂ ಪ್ರೇರೇಪಿಸುತ್ತದೆ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ ಅವರ ಸಂಪಾದಕ ಬಳಗಕ್ಕೆ ನನ್ನ ವಂದನೆಗಳು.

ಪ್ರೊ. ಬಿ.ಆರ್. ಪೋಲೀಸ್ ಪಾಟೀಲ್

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪ್ರಕಟಿಸುತ್ತಿರುವ ಬಾಪು ಪ್ರಪಂಚ ಪತ್ರಿಕೆ ಪರಿಸರ, ಆರೋಗ್ಯ, ವಿದೇಶಿ ಸಮಾಚಾರ, ವಿಶೇಷ ಸುದ್ದಿಗಳ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರ ಪರಿಚಯಿಸುವ ಲೇಖನಗಳು ಅರ್ಥಪೂರ್ಣವಾಗಿ ಮೂಡಿ ಬರುತ್ತಿದೆ. ಗಾಂಧಿ ಭವನದ ಪ್ರಕಟಣಾ ಮಂಡಳಿ ಅವರಿಗೆ ನನ್ನ ಧನ್ಯವಾದಗಳು.

ಡಾ. ಷರೀಫಾ

ಆಗಸ್ಟ್ ತಿಂಗಳ ಬಾಪು ಸಂಚಿಕೆ ಸಂಕೀರ್ಣವಾದ ವಿಷಯದೊಂದಿಗೆ ಪ್ರಕಟಗೊಳ್ಳುತ್ತಿದ್ದು, ಈ ಪತ್ರಿಕೆಯು ಓದುಗ ಸಮುದಾಯಕ್ಕೆ ಒಂದು ಅತ್ಯಮೂಲ್ಯವಾದ ಸಂಗ್ರಹಯೋಗ್ಯವಾದುದಾಗಿದೆ. ಇಂಥಹ ಒಂದು ಉತ್ತಮ ಪತ್ರಿಕೆಯು ನಿರಂತರವಾಗಿ ಮೂಡಿಬರಲೆಂದು ಹಾರೈಸುವೆ. ಗಾಂಧಿ ಭವನದ ಮುಂದಿನ ಸಂಚಿಕೆಯ ನಿರೀಕ್ಷೆಯಲ್ಲಿದ್ದೇನೆ.

ಇಂದ್ರಕುಮಾರ್, ಬೆಂಗಳೂರು ಪ್ರೆಸ್

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆ ಭಾರತದ ಸ್ವಾತಂತ್ರ್ಯ, ನೆಲ-ಜಲ ಹೋರಾಟ, ಸಂಸ್ಕೃತಿ, ಶಿಕ್ಷಣ, ಕಲೆ, ವಿಜ್ಞಾನ, ಸಮಾಜ, ಪರಿಸರ, ಆರೋಗ್ಯ, ಸಾಧಕರು, ಸಮಾಜಸೇವಕರು, ಪುಸ್ತಕ ವಿಮರ್ಶೆ ಹೀಗೆ ಹಲವು ವಿಶೇಷ ಮಾಹಿತಿಗಳೊಂದಿಗೆ ಹೊರಹೊಮ್ಮುತ್ತಿದೆ, ವಂದನೆಗಳು

ಡಾ. ವಸುಂಧರಾ ಭೂಪತಿ

ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಕಸ್ತೂರ್‌ಬಾ, ಚನ್ನಮ್ಮ ಹಳ್ಳೀಕೇರಿ, ನಿಟ್ಟೂರು ಶ್ರೀನಿವಾಸರಾವ್, ಡಾ. ಶ್ರೀನಿವಾಸ ಹಾವನೂರರ ಲೇಖನಗಳು ಹಲವು ವಿಷಯಗಳನ್ನು ತಿಳಿಸಿತ್ತದೆ. ಸಂಶೋಧನಾಸಕ್ತರಿಗೆ ಈ ಲೇಖನಗಳು ಸಹಾಯವಾಗುವುದೆಂದು ನನ್ನ ಅನಿಸಿಕೆ. ಗಾಂಧಿ ಭವನದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಧನ್ಯವಾದಗಳು.

ನಿರ್ಮಲಾ ಸಿದ್ಧಾಪುರ

ಯುನೆಸ್ಕೋ ಪಟ್ಟಿಗೆ ಸೇರುವ ಬೇಲೂರು-ಹಳೇಬೀಡು



ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಬೇಲೂರಿನ ಚನ್ನಕೇಶವ ಹಾಗು ಹಳೆಬೀಡಿನ ಹೊಯ್ಸಳೇಶ್ವರ ದೇಗುಲಗಳು ವಾಸ್ತು ಶಿಲ್ಪ, ಶಿಲ್ಪಕಲೆಗಳ ಮೂಲಕ ಇಡೀ ಜಗತ್ತನ್ನು ಸೆಳೆಯುತ್ತಿರುವ ತಾಣಗಳಾಗಿವೆ. ಇದೀಗ ಈ ವಿಶ್ವ ವಿಖ್ಯಾತ ಸ್ಥಳಗಳು ಅಧಿಕೃತವಾಗಿ ಜಾಗತಿಕ ಪ್ರವಾಸಿ ಭೂಪಟ ಸೇರುವ ದಿನಗಳು ಸಮೀಪಿಸಿವೆ. ಯುನೆಸ್ಕೋ ತಂಡ ಶೀಘ್ರವೇ ವರದಿ ನೀಡಲಿದ್ದು, ಮೈಸೂರು ಜಿಲ್ಲೆಯ ಸೋಮನಾಥಪುರ ಸೇರಿ ರಾಜ್ಯದ ಮೂರು ಐತಿಹಾಸಿಕ ಸ್ಥಳಗಳು ವಿಶ್ವ-ಸಂಸ್ಥೆಯ ವಿಶ್ವ ಪಾರಂಪರಿಕ ತಾಣಗಳ ಪಟ್ಟಿ ಸೇರಲಿವೆ. ಸಾವಿರ ವರ್ಷಗಳ ಹಿಂದೆಯೇ ಜಗತ್ತು ಬೆರಗಾಗುವಂಥಹ ಸೂಕ್ಷ್ಮ ಕೆತ್ತನೆಗಳ ಮೂಲಕ ನಿರ್ಮಿಸಿರುವ ಈ ಎರಡು ದೇಗುಲಗಳು ಇತಿಹಾಸಕಾರರಲ್ಲಿ ಬೆರಗು ಮೂಡಿಸಿವೆ. ಕೇಂದ್ರ ಸರಕಾರ ಬೇಲೂರು, ಹಳೇಬೀಡು ಹಾಗೂ ಸೋಮನಾಥಪುರದಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಬೇಕು ಎಂದು ಯುನೆಸ್ಕೊಗೆ ನಾಮನಿರ್ದೇಶನ ಮಾಡಿತ್ತು. ಟಿಯಾಂಗ್ ಕಿಯಾನ್ ಬೂನ್ ತಂಡದಿಂದ ಪರಿಶೀಲನೆ ತಾಂತ್ರಿಕ ಪ್ರಕ್ರಿಯೆ ಮುಗಿದ ಬಳಿಕ ಇದೀಗ ಯುನೆಸ್ಕೋ ತಜ್ಞರ ಸಮಿತಿ ಪರಿಶೀಲನೆಗೆ ಆಗಮಿಸಿದೆ. ಬೇಲೂರು ಹಾಗೂ ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿ ಪರಿಶೀಲನೆ ನಡೆಸಿ ಅಂತಿಮ ವರದಿ ಸಲ್ಲಿಸಲಿದ್ದಾರೆ. ಮುಂದಿನ ವರ್ಷದ ವೇಳೆಗೆ ಈ ಮೂರು ಪ್ರಸಿದ್ಧ ಕ್ಷೇತ್ರಗಳು ಯುನೆಸ್ಕೋ ಪಟ್ಟಿ ಸೇರಲಿವೆ. ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯ ಹಾಗೂ ಬೇಲೂರಿನ ಚನ್ನಕೇಶವ ದೇವಾಲಯಗಳೆರಡು ಕೂಡ ನಕ್ಷತ್ರಾಕಾರದ ವೇದಿಕೆ ಮೇಲೆ ನಿರ್ಮಾಣವಾಗಿವೆ. ಸುಧಾಮೂರ್ತಿ ಅವರು ಯುನೆಸ್ಕೋ ತಂಡಕ್ಕೆ ದೇಗುಲದ ವಿಶೇಷತೆ, ಹೊಯ್ಸಳರ ಲಾಂಛನದ ಬಗ್ಗೆ, ಉಗ್ರ ನರಸಿಂಹ, ಲಕ್ಷ್ಮಿನರಸಿಂಹನ ಬಗ್ಗೆ ಎಳೆ ಎಳೆಯಾಗಿ ಬಿಡಿಸಿ ವಿವರಣೆ ನೀಡಿದ್ದರು. ದೇಗುಲಗಳು ಯುನೆಸ್ಕೋ ಪಟ್ಟಿಗೆ ಸೇರಿದರೆ ಜಗತ್ತಿನ ಪ್ರವಾಸಿ ಭೂಪಟದಲ್ಲಿ ಹಾಸನ ಮಿಂಚುವುದರಲ್ಲಿ ಸಂದೇಹವಿಲ್ಲ.

ಗಾಂಧಿ ಭವನದ ಕಾರ್ಯಕ್ರಮಗಳು



ಅಖಿಲ ಭಾರತ ಸರ್ವೋದಯ ಮಂಡಲ ಇವರು ದಿ.17 ರಿಂದ 19 ಜುಲೈ 2022 ರವರೆಗೆ ಸರ್ವ ಸೇವಾ ಸಂಘದ ಅಧಿವೇಶನದಲ್ಲಿ ಚಂದನ್ ಪಾಲ್ ದಾದಾ, ಮಧುಸೂದನ್ ದಾಸ್, ಡಾ.ವಿ ಪ್ರಶಾಂತ, ಹರ್ಷಿತ್ ಪಟೇಲ್, ಪಿ.ಆಕಾಶ್, ಎಂ.ಗಣೇಶ್, ಆರ್.ಮನು, ಎಂ.ಸಂಜಯ್ ಗೌಡ, ಎಂ.ದರ್ಶನ್, ಎ.ರವೀಶ್, ಎನ್.ಮಹೇಂದ್ರ, ಎಂ.ಕೆ. ಧನುಷ್ ಸಿ.ಡಿ. ಚಂದ್ರಶೇಖರ್ ಹಾಗೂ ಮಹಮ್ಮದ್ ಜಾಕೀರ್ ಇದ್ದಾರೆ.




ಮುದ್ದೇಬಿಹಾಳ ಶಾಸಕರಾದ ಎ.ಎಸ್. ಪಾಟೀಲ ನಡಹಳ್ಳಿ ಅವರ ಜನ್ಮದಿನದ ಅಂಗವಾಗಿ ದಿ.21.07.2022ರಂದು ತಾಳಿಕೋಟೆ ಪ್ರಮುಖ ರಸ್ತೆಗಳಲ್ಲಿ 2500 ಸಸಿ ನೆಡುವ ಕಾರ್ಯಕ್ಕೆ ಬೆಂಗಳೂರಿನ ಗಾಂಧಿ ಭವನದ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಚಾಲನೆ ನೀಡಿದರು. ಚಿತ್ರದಲ್ಲಿ ಪುರಸಭಾ ಅಧ್ಯಕ್ಷ ಸಂಗಮೇಶ್ ಇಂಗಳಗಿ, ಡಾ. ವಿ.ಎಸ್. ಕಾರ್ಚಿ, ಮೂಲಿಮನಿ, ವಾಸುದೇವ ಹೆಬ್ಸೂರ, ಎಸ್.ಎಸ್. ಗಡೇದ, ಮುದ್ದಣ್ಣ ಬಡಿಗೇರ, ಎಸ್.ಡಿ. ಕರ್ಜಗಿ ಡಾ. ವಿ. ಪ್ರಶಾಂತ ಮತ್ತೆಲ್ಲರೂ ಇದ್ದಾರೆ.





75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಇಲಕಲ್ಲದ ಎಸ್.ಆರ್ ಕಂಠಿ ಬಾಲಕಿಯರ ಪ್ರೌಢಶಾಲೆಯಲ್ಲಿ ದಿ.21.07.202 ರಂದು ಶಾಲೆಯ ಗ್ರಂಥಾಲಯಕ್ಕೆ ಪುಸ್ತಕಗಳನ್ನು ವಿತರಿಸಲಾಯಿತು ಹಾಗೂ ಪ್ರೊ. ಪೋಲಿಸ್ ಪಾಟೀಲ್ ಅವರಿಂದ ಸ್ವಾತಂತ್ರ್ಯ ಗೀತೆಗಳು, ಲಾವಣಿ ಗಾಯನ ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಮುಖ್ಯೋಪಾಧ್ಯಾಯ ಸಂಗಣ್ಣ ಬ. ಗದ್ದಿ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ.ವಿ.ಪ್ರಶಾಂತ ಹಾಗೂ ಶಿಕ್ಷಕ ವೃಂದದವರು ಇದ್ದಾರೆ.






ವಿಜಯಪುರದ ತಾಳಿಕೋಟೆಯ ಎಚ್.ಎಸ್ ಪಾಟೀಲ ಸ್ವಾತಂತ್ರ್ಯ ಪದವಿ ಪೂರ್ವ ಮಹಾ ವಿದ್ಯಾಲಯದಲ್ಲಿ ದಿ.22.07.2022ರಂದು ಐದು ದಿನಗಳ ಶ್ರಮದಾನ ಶಿಬಿರ, ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆಯಲ್ಲಿ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀಧರ್ ಗೋಟೂರು, ಎಸ್.ಎಸ್. ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಚ್.ಎಸ್. ಪಾಟೀಲ್, ಕಾರ್ಯದರ್ಶಿ ಇಂದಿರ ಕೃಷ್ಣಪ್ಪ, ಬ. ಸಾಲವಾಡಗಿ, ಸುಮಂಗಲ ಕೊಳೂರ, ಪ್ರೊ.ಪೊಲೀಸ್ ಪಾಟೀಲ್ ಮತ್ತು ರಾ.ಯು.ಯೋ. ಡಾ. ವಿ ಪ್ರಶಾಂತ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಇದ್ದಾರೆ.





ವಿಜಯಪುರ ಜಿಲ್ಲೆಯ ತಾಳಿಕೋಟೆ ಎಸ್.ಕೆ. ಪದವಿಪೂರ್ವ ಕಾಲೇಜಿನಲ್ಲಿ ದಿ.22.07.2022ರಂದು ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ಮಂಡಳಿ ಅವರು, ಪ್ರಿನ್ಸಿಪಾಲರು ಹಾಗೂ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಪ್ರೊ.ಪೊಲೀಸ್ ಪಾಟೀಲ್ ಮತ್ತು ವಿದ್ಯಾರ್ಥಿಗಳು ಇದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು







ವಿಜಯಪುರದ ತಾಳಿಕೋಟೆಯ ಎಚ್.ಎಸ್ ಪಾಟೀಲ ಸ್ವಾತಂತ್ರ್ಯ ಪದವಿ ಪೂರ್ವ ಮಹಾ ವಿದ್ಯಾಲಯದಲ್ಲಿ ದಿ.26.07.2022ರಂದು ಐದು ದಿನಗಳ ಶ್ರಮದಾನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕ.ಗಾಂ.ಸ್ಮಾ.ನಿ. ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರೂ ಎಚ್.ಎಸ್.ಪಾಟೀಲ್, ಶ್ರೀ ಶಿವಕುಮಾರ ಸ್ವಾಮೀಜಿ, ಆರ್.ಎಲ್.ಕೊಪ್ಪದ, ಹಾಗೂ ಪ್ರೊ. ಪೊಲೀಸ್ ಪಾಟೀಲ್ ಮತ್ತೆಲ್ಲರೂ ಇದ್ದಾರೆ. ಮತ್ತು ಶ್ರಮದಾನದಲ್ಲಿ ವಿಧ್ಯಾರ್ಥಿಗಳು.



ದೇವನಹಳ್ಳಿ ತಾಲ್ಲೂಕಿನ ಮಹಾತ್ಮ ಗಾಂಧಿ ಪ್ರೌಢಶಾಲೆಯಲ್ಲಿ ದಿ.26.07.2022 ರಂದು ಎನ್.ಎಸ್.ಎಸ್ ಘಟಕ, ರಾಷ್ಟ್ರೀಯ ಯುವ ಯೋಜನೆ ಹಾಗೂ ಗಾಂಧಿ ಅಧ್ಯಯನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಗ್ರಾಮ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಚಿತ್ರದಲ್ಲಿ ಡಾ. ವಿ. ಪ್ರಶಾಂತ, ಬಿ.ಸಿ.ವೆಂಕಟರಮಣ ಹಾಗೂ ಎನ್.ಎಸ್.ಎಸ್ ಸ್ವಯಂಸೇವಕರು ಇದ್ದಾರೆ.



ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ದಿ. 01.08.2022 ರಿಂದ 15.08.2022 ರವರೆಗೆ 15 ದಿನಗಳ ಕಾಲ ಸ್ವಚ್ಛ ಭಾರತ ಸ್ವಚ್ಛತಾ ಪಾಕ್ಷಿಕ ಕಾರ್ಯಕ್ರಮವನ್ನು ನೆಹರು ಯುವ ಕೇಂದ್ರ, ಸರ್ವೋದಯ ಮಂಡಲ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರುಗಳ ಸಹಕಾರದೊಂದಿಗೆ ರಾ.ಯು.ಯೋ.ನ ಡಾ.ವಿ.ಪ್ರಶಾಂತ, ಉಪನ್ಯಾಸಕಿ ಹರ್ಷಿತ, ಸ್ವಯಂ ಸೇವಕರಾದ ರವೀಶ್, ತರುಣ್ ಹಾಗೂ ರಕ್ಷಿತ್ ಇದ್ದಾರೆ.



ದಿ.20.08.2022 ರಂದು "ಯುದ್ಧ ಬೇಡ – ಶಾಂತಿಬೇಕು" ಪಥ ಸಂಚಲನದ ತಂಡ, ಸಿಎನ್ಎನ್ ರಾಜು ಅವರ ನೇತೃತ್ವದಲ್ಲಿ ಗಾಂಧಿ ಭವನಕ್ಕೆ ಆಗಮಿಸಿದ ಸಂದರ್ಭ

ಗಾಂಧಿ ಭವನದ ಕಾರ್ಯಕ್ರಮಗಳು



ಆನೇಕಲ್ ತಾಲ್ಲೂಕಿನ ವಲ್ಲಭಬಾಯ್ ಪಟೇಲ್ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ದಿ. 26.08.2022ರಂದು ಗಾಂಧಿ ಅಧ್ಯಯನ ಕೇಂದ್ರವನ್ನು ಗೌ. ಕಾರ್ಯದರ್ಶಿ ಇಂದಿರ ಕೃಷ್ಣಪ್ಪ ಉದ್ಘಾಟಿಸಿದರು. ಚಿತ್ರದಲ್ಲಿ : ಪ್ರಭು, ಡಾ.ವಿ. ಪ್ರಶಾಂತ, ಟಿ.ಬಿ ಬಾಬು, ಪ್ರಾಂಶುಪಾಲ ರಾಜಯ್ಯ, ಶ್ರೀನಿವಾಸ ರೆಡ್ಡಿ, ಶಾಮಲಾ, ರಾಮಕೃಷ್ಣಯ್ಯ, ದಯಾನಂದ್, ವೆಂಕಟೇಶ್, ನವೀನ್ ಇದ್ದಾರೆ.



ಗಾಂಧಿ ಭವನದಲ್ಲಿ ದಿ. 01.08.2022ರಂದು ಗ್ರಂಥಾಲಯ ಪಿತಾಮಹ ಎಸ್.ಆರ್. ರಂಗನಾಥ್ ಅವರ ಜನ್ಮ ದಿನಾಚರಣೆಯಲ್ಲಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಹಾಗೂ ಸಿಬ್ಬಂದಿ ವರ್ಗದವರು ಇದ್ದಾರೆ.



ಬೆಂಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾನೂನು ಮಹಾವಿದ್ಯಾಲಯ ಮತ್ತು ರಾ.ಸೇ.ಯೋ. ಘಟಕದಿಂದ ದಿ. 26.08.2022ರಂದು ಆಯೋಜಿಸಲಾದ ಏಳು ದಿನಗಳ ಪರಿಸರ ಸಂರಕ್ಷಣೆ ಮತ್ತು ಮತದಾನ ಜಾಗೃತಿ ವಾರ್ಷಿಕ ಶಿಬಿರವನ್ನು ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಉದ್ಘಾಟಿಸಿದರು. ಉಪ ಪ್ರಾಂಶುಪಾಲೆ ಬಿ.ಪಿ.ಶಿಲ್ಪ, ಡಾ.ವಿ ಪ್ರಶಾಂತ, ರಾಧಿಕಾ ಎ. ಗುಡಿಹಾಳ್, ಎಂ.ಎನ್.ಜ್ಯೋತಿ, ಅನಿಲ್ ಎಸ್ ರೆಡ್ಡಿ, ಮಂಜಯ್ಯ ಚಾವಡಿ, ವೆಂಕಟೇಶ್, ಅಕ್ಷಯ್ ರೆಡ್ಡಿ, ಪ್ರತಾಪ್,ವಿಜಯ್, ಆನಂದ್, ಮಧುಸೂದನ್ ಹಾಗೂ ಸ್ವಯಂಸೇವಕರು ಇದ್ದಾರೆ.



ಗಾಂಧಿ ಭವನದಲ್ಲಿ ದಿ. 19.08.2022ರಂದು ಗಾಂಧಿ ಭವನದಲ್ಲಿ ವಿನೋಬಾಜಿ ಹಾಗೂ ಮಹಾತ್ಮ ಗಾಂಧಿ ಅನುಯಾಯಿ ಮೀರಾತಾಯಿ ಕೊಪ್ಪಿಕರ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಹಾಗೂ ಸಿಬ್ಬಂದಿ ವರ್ಗದವರು ಇದ್ದಾರೆ.

ಕಬಿನಿ – ರೋಚಕ ಪ್ರಾಣಿಗಳ ರಾಜಧಾನಿ!



ನಾಗರಹೊಳೆ ನೈಸರ್ಗಿಕ ನಿಸರ್ಗಧಾಮದ ಭಾಗವಾಗಿರುವ ಕಬಿನಿ ವನ್ಯಜೀವಿ ಸಂರಕ್ಷಿತ ಪ್ರದೇಶವಾಗಿದೆ. ಇದು ಕರ್ನಾಟಕದ ಜನಪ್ರಿಯ ಪ್ರವಾಸಿ ತಾಣವಾಗಿದೆ ಕಬಿನಿ ನದಿಯು ಈ ಅರಣ್ಯಪ್ರದೇಶದ ಜೀವಾಳವಾಗಿದ್ದು ಈ ಪ್ರದೇಶದಲ್ಲಿ ಹರಿಯುವುದರಿಂದ ಈ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಇದೇ ಹೆಸರನ್ನು ಇಡಲಾಗಿದೆ. ದಟ್ಟವಾದ ಕಾಡುಗಳು, ಗುಡ್ಡಗಾಡು ಪ್ರದೇಶಗಳು ಮತ್ತು ಸರೋವರಗಳು ಮತ್ತು ತೊರೆಗಳನ್ನು ಒಳಗೊಂಡಿದೆ. ಈ ಅರಣ್ಯವು ಬೆರಗುಗೊಳಿಸುವಂತಹ ಹಲವಾರು ಪ್ರಭೇದಗಳಿಗೆ ಸಾಕ್ಷಿಯಾಗಿದೆ. ಈ ಪ್ರದೇಶವು ವಿಭಿನ್ನ ರೀತಿಯ ಮಳೆಯನ್ನು ಪಡೆಯುತ್ತದೆ ಇದಕ್ಕೆ ಅನುಗುಣವಾಗಿ ಸಸ್ಯವರ್ಗವೂ ಬದಲಾಗುತ್ತದೆ. ಪ್ರತಿ ವರ್ಷ 1000 ಮಿ.ಮೀ.ಗಿಂತ ಹೆಚ್ಚು ಮಳೆ ಬೀಳುವ ತೇವಾಂಶ ಭರಿತ ಡೆಸಿಡಿಯಸ್ ಪ್ರದೇಶಗಳಿಂದ ಹಿಡಿದು ಕಡಿಮೆ ಮಳೆ ಬೀಳುವ ಡ್ರೈ ಡೆಸಿಡಿಯಸ್ ಪ್ರದೇಶಗಳವರೆಗೆ ವ್ಯಾಪಿಸಿದೆ. ಇವೆಲ್ಲದರ ಮಧ್ಯದಲ್ಲಿ ಇಲ್ಲಿ ಹುಲ್ಲುಗಾವಲುಗಳು, ಪೊದೆಗಳು ಮತ್ತು ಜೌಗು ಪ್ರದೇಶಗಳನ್ನೂ ಹೊಂದಿದೆ. ಈ ಪ್ರದೇಶವು ಹೆಚ್ಚಿನ ಸಂಖ್ಯೆಯ ಸಸ್ಯಹಾರಿ ಪ್ರಾಣಿಗಳನ್ನು ಹೊಂದಿರುವುದಕ್ಕೆ ಸಾಕ್ಷಿಯಾಗಿದ್ದು ಅದರಲ್ಲೂ ವಿಶೇಷವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆನೆಗಳಿಗೆ ನೆಲೆಯಾಗಿದೆ. ನಾಲ್ಕು ಕೊಂಬಿನ ಜಿಂಕೆಗಳು, ಸಾಂಬಾರ್, ಕಾಡು ಹಂದಿಗಳು, ಗೌರ್, ಲಂಗೂರ್‌ಗಳು, ಮುಂಜ್ತಕ್ ಕೋತಿಗಳು. ಹುಲಿಗಳು, ಚಿರತೆಗಳು ಮತ್ತು ಕಾಡು ನಾಯಿ ಸೇರಿದಂತೆ ಹೆಚ್ಚಿನ ಸಂಖ್ಯೆಯ ಪರಭಕ್ಷಕ ಪ್ರಾಣಿಗಳಿಗೂ ನೆಲೆಯಾಗಿದೆ. ಪಕ್ಷಿಶಾಸ್ತ್ರಜ್ಞರ ಸ್ವರ್ಗವೆಂದೇ ಹೇಳಬಹುದು. ಇಲ್ಲಿ 300 ಕ್ಕೂ ಹೆಚ್ಚು ಜಾತಿಯ ಪಕ್ಷಿಗಳಿವೆ. ಈ ಮೀಸಲು ಅರಣ್ಯವು ಆಸ್ಪ್ರೆಗಳು, ಬಿಳಿ ತಲೆಯ ಹದ್ದುಗಳು, ಪೈಡ್ ಹಾರ್ನ್‌ಬಿಲ್, ಗ್ರೇಟ್ ಕಾರ್ಮೊರಂಟ್ಗಳು, ಲಾರ್ಕ್‌ಗಳು, ಮಲಬಾರ್ ಟ್ರೋಗಾನ್ ಇನ್ನಿತರ ಪಕ್ಷಿ ಸಂಕುಲವನ್ನು ಹೊಂದಿದೆ. ಈ ಅರಣ್ಯವು ಬೆರಗುಗೊಳಿಸುವಂತಹ ಹಲವಾರು ಪ್ರಭೇದಗಳಿಗೆ ಸಾಕ್ಷಿಯಾಗಿದೆ. ಪ್ರಕೃತಿಯಲ್ಲಿ ನಡಿಗೆ, ಕಾಡಿನಲ್ಲಿ ಟ್ರಕ್ಕಿಂಗ್, ದೋಣಿ ವಿಹಾರ, ಸೈಕ್ಲಿಂಗ್, ಪಕ್ಷಿ ವೀಕ್ಷಣೆ, ಬೋನ್ ಫೈರ್ ರಾತ್ರಿಗಳು, ಮತ್ತು ಸ್ಥಳೀಯ ಹಳ್ಳಿಗಳಿಗೆ ಪ್ರವಾಸಗಳು ನೀವು ಇಲ್ಲಿ ಆನಂದಿಸಬಹುದಾಗಿದೆ. ಕಬಿನಿಯು ವನ್ಯಜೀವಿಗಳು ಮತ್ತು ಮೋಡಿಮಾಡುವ ರಮಣೀಯ ಸೌಂದರ್ಯದೊಂದಿಗೆ ಮನಸ್ಸಿಗೆ ಮುದ ನೀಡುತ್ತದೆ.

ಪತ್ರಿಕಾ ವರದಿಗಳು

ಪ್ರಜಾ ಪ್ರಗತಿ

ಎಸ್.ಐ.ಬಿ ಪಟೇಲ್ ಕಾಲೇಜಿಗೆ ಗಾಂಧಿ ಅಧ್ಯಯನ ಕೇಂದ್ರ

■ ಪ್ರಜಾಪ್ರಗತಿ.ಕಾಂ

ವಿಜಯಪುರ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಮಹಾನ್ ಸ್ವಾತಂತ್ರ್ಯ ಹೋರಾಟಗಾರರೆಂದು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ತಿಳಿಸಿದರು.

ಇವರು ಬೆಂಗಳೂರಿನ ಅನೇಕಲ್ ತಾಲ್ಲೂಕಿನ ಸರ್ಜಾಪುರ ಬಳಿ ಇರುವ ಎಸ್.ಐ.ಬಿ ಪಟೇಲ್ ಸ್ವಾತಂತ್ರ್ಯ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಇವರ 2022-23ನೇ ಸಾಲಿನ ಕಾಲೇಜಿನ ಸಾಂಸ್ಕೃತಿಕ, ರಾಷ್ಟ್ರೀಯ ಸೇವಾ ಯೋಜನೆ,ಕ್ರೀಡೆ, ಸ್ಕೌಟ್ ಮತ್ತು ಗೈಡ್ ಇದರೊಂದಿಗೆ ಈ ವರ್ಷದಿಂದ ಗಾಂಧಿ ಅಧ್ಯಯನ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ ಮಹಾತ್ಮ ಗಾಂಧೀಜಿ ಅವರು ಈ ... ಸಮಾಜ ಹಿಡುಗಿನಲ್ಲಿ ದೇಶದ ... ಒಂದಾ ...



... ಜೋಗಡಾಡಿಸುವಲ್ಲಿ ... ಹೋರಾಟವನ್ನು ನಡೆಸಿದರು ಹಾಗೂ ಹಿಂಸೆಯ ಸಿದ್ಧಾಂತವನ್ನು ವಿಶ್ವಕ್ಕೆ ಬೋಧಿಸಿ, ಖಾದಿ ಮತ್ತು ಸ್ವದೇಶಿಯತೆಯಾಗಿ ತೀವ್ರ ಪ್ರಚಾರ ಮಾಡಿದವರು ಎಂದು ತಿಳಿಸಿದರು.


ವಿದ್ಯಾರ್ಥಿಗಳೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಯುವ ... ರಾಜ್ಯ ಸಂಯೋಜಕ ಡಾ.ಬಿ. ... ಈ ಧ್ರುಮ ಮಾನವನ ...

ಕಾಲೇಜಿನ ವತಿಯಿಂದ ಏಕಲೋಸಾಯಿತು. ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಹಾಗೂ ಬಹುಮಾನಗಳನ್ನು ಆಗಮಿಸಿದ ಅತಿಥಿ ಗಣ್ಯರಿಂದ ವಿತರಿಸಲಾಯಿತು ಹಾಗೂ ವೇದಿಕೆ ಕಾರ್ಯಕ್ರಮದ ನಂತರ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಈ ಸಮಾರಂಭದ ಉಪಸ್ಥಿತಿಯಲ್ಲಿ ಅನೇಕಲ್ ವಿಧಾನಸಭಾ ಕ್ಷೇತ್ರದ ಸಮಾಜ ಸೇವಕ ಬಿ.ಬಿ. ಬಾಬು, ಸರ್ಜಾಪುರ ದ ಎಸ್.ಐ.ಬಿ. ಪಟೇಲ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಾಮಯ್ಯ, ರಾಷ್ಟ್ರಶಾಸ್ತ್ರ ಉಪನ್ಯಾಸಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ... ರೆಡ್ಡಿ, ಬೆಂಗಳೂರಿನ ವಿಶ್ವಕ್ ... ಸಿ ರಾಮಕೃಷ್ಣಯ್ಯ ...

ಆಗಸ್ಟ್ 29, 2022 ಸೋಮವಾರ ಪ್ರಜಾ...

ಎನ್ ಎಸ್ ಎಸ್‌ನಿಂದ ಸೇವಾ ಮನೋಭಾವ ವೃದ್ಧಿ



ಸಂಯುಕ್ತ ಕರ್ನಾಟಕ

ಬಾಗಲಕೋಟೆ 23 ಜುಲೈ 2022

ಎನ್‌ಎಸ್‌ಎಸ್ ದೇಶ ರಕ್ಷಣೆಯ ಕವ...




ಕಾರ್ಯಾಗಾರದ ಹಾಗೂ ಶ್ರಮದಾನ ಶಿಬಿರ ಹಾಗೂ ಗಾಂಧಿ ಅಧ್ಯಯನ ಕೇಂದ್ರವನ್ನು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಉದ್ಘಾಟಿಸಿದರು.

ವಿಜಯವಾಣಿ

ಕನ್ನಡ ದಿನಪತ್ರಿಕೆ

ಸಚಿವ ಉಮೇಶ್ ಕತ್ತಿ ವಿಧಿವಶ

ಬಾರದೂರಿಗೆ ಪಯಣ ಬೆಳೆಸಿದ ಸೋಲಿಲ್ಲದ ಸರದಾರ । ಹೃದಯಾಘಾತದಿಂದ ಆಕಾಲಿಕ ನಿಧನ



1961-2022

ಸ್ವಾತಂತ್ರ್ಯ ಯೋಧ ವೆಂಕಣ್ಣನಾಯಕ ನಿಧನ

ಅಂಕೋಲಾ: ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಾಲೂಕಿನ ಸೂರ್ವೆಯ ವೆಂಕಣ್ಣ ಬೊಮ್ಮಯ್ಯ ನಾಯಕ (102) ಭಾನುವಾರ ಅಸುನೀಗಿದರು. ತಾಲೂಕಿನಲ್ಲಿದ್ದ ಸ್ವಾತಂತ್ರ್ಯ ಚಳವಳಿಯ ಕೊನೆಯ ಕೊಂಡಿ ಕಳಚಿದೆ. ವೆಂಕಣ್ಣ ನಾಯಕ ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಚಳವಳಿ, ಜಂಗಲ್ ಸತ್ಯಾಗ್ರಹ, ಹುಲ್ಲುಬನಿ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ ...



ದ ಡೈಲಿ ನ್ಯೂಸ್

ಕನ್ನಡ ದೈನಿಕ

ಭಾವೈಕ್ಯತೆ ಮೂಡಿಸುವ ಹಬ್ಬ



ವಿಜಯಪುರ: ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಮಹತ್ವದ ಸ್ಥಾನವನ್ನು ವಹಿಸುತ್ತವೆ ಎಂದು ಪಟ್ಟಣದ ರೂಬಿ ಎಜುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಸೈಯದ್ ರಫೀಕ್ ತಿಳಿಸಿದರು. ಪಟ್ಟಣದ ರೂಬಿ ಆಂಗ್ಲ ಪ್ರೌಢಶಾಲೆಯ ಆವರಣದಲ್ಲಿ ... ಗಾಂಧಿ ಸ್ಮಾರಕ ನಿಧಿ ಸಂಯುಕ್ತ ... ಪ್ರೊ.ಬಿ. ... ಬದೇವ್ ... ತ್ಯಮದ ... ರ್ಥಿಗಳಿಗೆ ಹಬ್ಬಗಳು ... ಧರ್ಮ, ... ಆಗಲಾಡಿಸಿ ... ಕ್ಯತೆಯನ್ನು ಹಬ್ಬಗಳನ್ನು ಬೆಂಗಳೂರಿನ ..., ಶಾಲೆಯ ... ಮತ್ತು

ಮೀರಾತಾಯಿ ಕೊಪ್ಪೀಕರ್

ಮುಧೋಳ (ಬಾಗಲಕೋಟೆ ಜಿಲ್ಲೆ): ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತೆ, ಗಾಂಧಿವಾದಿ ಮೀರಾತಾಯಿ ಕೊಪ್ಪೀಕರ್ (96) ಅವರು ವಯೋಸಹಜ ಕಾಯಿಲೆಯಿಂದ ಇಲ್ಲಿನ ರುಕ್ಮಿಣಿ ವಾತ್ಸಲ್ಯಧಾಮದಲ್ಲಿ ಶುಕ್ರವಾರ ನಿಧನರಾದರು.



ಧಾರವಾಡದ ಖಾದಿಧಾರಿ ಶ್ರೀಪಾದರಾವ್ ಕೊಪ್ಪೀಕರ್ ಹಾಗೂ ಸುಮತಿಬಾಯಿ ಅವರ ಪುತ್ರಿಯಾಗಿದ್ದ ಮೀರಾತಾಯಿ 1928 ರಲ್ಲಿ ಜನಿಸಿದ್ದರು. ಮೂಲತಃ ಶ್ರೀಮಂತ ಕುಟುಂಬದವರಾದ

ಪ್ರಜಾ ಪ್ರಗತಿ

ಮಹಾತ್ಮರ ತ್ಯಾಗ-ಬಲಿದಾನ ಸ್ಮರಣೋಣ



ವಿಜಯಪುರ: ಆಗಸ್ಟ್ 13 ರಿಂದ 15 ರವರೆಗೆ ಈ ದೇಶದ ಪ್ರತಿ ಮನೆಯಲ್ಲೂ ತ್ರಿವರ್ಣ ಧ್ವಜ ಹಾರಿಸೋಣ ಎಂದು ಬಾಲಾಜಿ ವಿದ್ಯಾಪೀಠದ ಅಧ್ಯಕ್ಷ ... ತಿಳಿಸಿದರು.

ಇವರು ಬಾಲಾಜಿ ವಿದ್ಯಾನಿಕೇತನ ಆವರಣದಲ್ಲಿ ಭಾರತ ಸರ್ಕಾರದ ಯುವಜನ ಸೇವಾ ಮತ್ತು ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ... ರಾಷ್ಟ್ರೀಯ ಸೇವಾ ಯೋಜನೆ ... 75 ... ಸ್ವಾತಂತ್ರ್ಯ ... ಅಮೃತ ಮಹೋತ್ಸವ ... ರಾಷ್ಟ್ರೀಯ ಯುವ ಯೋಜನೆಯ ರಾಜ್ಯ ಸಂಯೋಜಕ ಡಾ.ಬಿ. ... 1947 ಆಗಸ್ಟ್ ... ಭಾರತೀಯರ ತ್ಯಾಗ ಬಲಿದಾನ ... 150 ... ಕಾರ್ಯಕ್ರಮದಲ್ಲಿ ... 75 ... ಎಂ.ಎ.ರಫೀಕ್, ... ರಾಷ್ಟ್ರೀಯ ಸೇವಾ ಯೋಜನೆಯ ... ಮುಖ್ಯ ಶಿಕ್ಷಕ ... ನಿರೂಪಿಸಿದರು.

ಸೋಮವಾರ, 25 ಜುಲೈ 2022, ಬಾಗಲಕೋಟೆ

ವಿಜಯ ಕರ್ನಾಟಕ VK

ವ್ಯಕ್ತಿತ್ವ ವಿಕಸನಕ್ಕೆ ಎನ್ನೆಸ್ಸೆಸ್ ಸಹಕಾರಿ

■ ವಿಕ ಸುದ್ದಿಲೋಕ ಬಾಗಲಕೋಟೆ

ಮಹಾತ್ಮ ಗಾಂಧೀಜಿಯವರ ತತ್ವಗಳನ್ನೇ ಮೂಲತಮನಾಗಿಸಿಕೊಂಡು ಪ್ರಾರಂಭವಾಗಿರುವ ರಾಷ್ಟ್ರೀಯ ಸೇವಾ ಯೋಜನೆಯು ಜನರ ಮನಸ್ಸನ್ನು ರಾಷ್ಟ್ರದತ್ತ ... ವಿಕಸನ, ಭಾರತೀಯತೆ ಬೆಳೆಸುವ ಉದ್ದೇಶದಿಂದ ಪ್ರಾರಂಭವಾಗಿದ್ದು ... ವ್ಯಕ್ತಿತ್ವ ವಿಕಸನಕ್ಕೆ ... ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ...



ಬಾಗಲಕೋಟೆ ಪಟ್ಟಣದ ಎಸ್.ಎಸ್.ಪಾಟೀಲ ಪದವಿ ಪೂರ್ವ ಕಾಲೇಜಿನಲ್ಲಿ ... ಶಿಬಿರವನ್ನು ಬೆಂಗಳೂರಿನ ಕರ್ನಾಟಕ ಗಾಂಧಿಸ್ಮಾರಕ ... ಇಂದಿರಾ ಕೃಷ್ಣಪ್ಪ ಉದ್ಘಾಟಿಸಿದರು.

ಸಚಿವ ಉಮೇಶ್ ಕತ್ತಿ ವಿಧಿ...

ಬಾರದೂರಿಗೆ ಪಯಣ ಬೆಳೆಸಿದ ಸೋಲಿಲ್ಲದ ಸರದಾರ । ಹೃದಯಾಘಾತದಿಂದ ಆ...



1961-2022


ಪ್ರಜಾಪ್ರಭುತ್ವ ಭಾರತ ಇತಿಹಾಸದ 50 ಪುಸ್ತಕಗಳು

	TITLE	PUBLISHER	AUTHOR
1.	The Indian Constitution: Cornerstone of a Nation	Orford India	Granville Austin
2.	Citizenship and its Discontents (Pb)	The Orient Blackswan	Niraja Gopal Jayal
3.	Integration Of The Indian States	The Orient BlackSwan	V.P. Menon
4.	Nehru and the Language Politics of India	OUP India	Robert D. King
5.	Rashtriya Swayamsewak Sangh	South Asia Books	Des Raj Goyal
6.	India's Political Economy 1947-2004	Oxford University Press	Francine R. Frankel
7.	The Struggle And The Promise: Restoring India's Potential HarperBusiness		Naushad Forbes
8.	War and Peace in Modern India	Palgrave Macmillan	Srinath Raghavan
9.	Choices: Inside the Making of Indian Foreign Policy		Shivshankar Menon
10.	India Versus China : Why they are Not Friends	Juggernaut	Kanti Bajpai
11.	Rethinking Public Institutions in India	Oxford Publishing House	Devesh Kapur
12.	Army and Nation – The Military and Indian Democracy since Independence	The Orient Blackswan	Steven I. Wilkinson
13.	india's movement for women's rights and feminism	Robin Jaffrey	
14.	Indias Silent Revolution	Permanent Black	Christophe Jaff
15.	The Chipko Movement: A People's History		Shekhar Pathak
16.	Kashmir: Study in India-Pakistan Relations	Asia Publishing House	Sisir Gupta
17.	In the Name of the Nation: India and Its Northeast	Navayana	Sanjib Baruah
18.	The Burning Forest India's War in Bastar	Juggernaut	Nandini Sundar
19.	Sense And Solidarity-Jholawala Economics for Everyone	The Orient Blackswan	Jean Drèze
20.	Chronicles of Our Time	Penguin India	Andre Beteille
21.	Behind the Beautiful Forevers	Penguin India	Katherine Boo
22.	Everybody Loves a Good Drought	Penguin India	P. Sainath
23.	How Modi Won India	Harper India	Rajdeep Sardesai
24.	No Full Stops in India	Penguin India	Mark Tully
25.	Nehru: A Contemporary's Estimate	RHI	Walter Crocker
26.	Patel a Life	Navjivan Trust	Rajmohan Gandhi
27.	Indira: The Life of Indira Nehru Gandhi	Harper Perennial	Katherine Frank
28.	Lal Bahadur Shastri	Oxford University Press	Srivastava C.P.
29.	Dr Babasaheb Ambedkar Life & Mission	Popular Prakashan	Dhananjay Keer
30.	J.P His Biography	The Orient Blackswan	Wendy Scarfe
31.	A Passionate Life	University of Chicago Press	Kamaladevi Chattopadhyay
32.	Bapu Kutir: Journeys in Rediscovery of Gandhi	Penguin India	Rajni Bakshi
33.	The Essential Writings of B.r. Ambedkar	OIP	Rodrigues Valerian
34.	Who is Bharat Mata? on History, Culture and the Idea of India: Writings by and on Jawaharlal Nehru	Madhushree Publication	Purushottam Agrawal
35.	A Bunch of Thoughts	M.S. Golvalkar	Rashtrotthana Sahitya
36.	The Oxford Companion To Politics In India	Oxford	Niraja Gopal Jayal
37.	How India Became Democratic: Citizenship and the Making of the Universal Franchise	Penguin	Ornit Shani
38.	When Crime Pays: Money and Muscle in Indian Politics	HarperCollins	Milan Vaishnav
39.	Making Sense of Indian Democracy	Permanent Black	Yogendra Yadav
40.	India's Newspaper Revolution: Capitalism, Politics and the Indian-Language	Palgrave Macmillan	Robin Jeffrey
41.	The Remembered Village, Second Edition	Oxford University Press	M.N. Srinivas
42.	Patronage and Exploitation	University of California Press	Jan Breman
43.	Legacy of A Divided Nation: India's Muslims From Independence	C Hurst & Co Publishers Ltd	Mushirul Hasan
44.	The Scheduled Tribes And Their India:	Oxford University Press	Nandini Sundar
45.	Politics, Women and Well-Being: How Kerala became 'a Model'	Palgrave Macmillan	Robin Jeffrey
46.	Ethnicity and Populist Mobilization	Oxford India	Narendra Subramanian
47.	The Flaming Feet and Other Essays: The Dalit Movement in India	Seagul Books	D.R. Nagaraj
48.	The History Of Doing: An Illustrated Account of Movements For Women's Rights And Feminism In India		Radha Kumar
49.	Ants among Elephants	HarperCollins	Sujatha Gidla
50.	I Want To Destroy Myself	Speaking Tiger	Malika Amar Shaikh

ಡಾ॥ ಹೊ. ಶ್ರೀನಿವಾಸಯ್ಯ ಅವರ ಅನುಭವ ಕಥನ – ನಾ ಕಂಡ ಜಗತ್ತು

ಸಂಗ್ರಹ : ನಾಡೋಜ ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ವಿವಾಹ : 1950ರಲ್ಲಿ ಒಂದು ದಿನ ಸಂಜೆ ಸಿದ್ದವನಹಳ್ಳಿ ಕೃಷ್ಣ ಶರ್ಮರು ನನ್ನನ್ನು ಕರೆದು "ನಿಮ್ಮ ಭಾವನವರ ಸ್ನೇಹಿತರು ಕಾಳೇನಹಳ್ಳಿ ತಮ್ಮಯ್ಯ ಅವರ ಸ್ನೇಹಿತ ಪುಟ್ಟಯ್ಯನವರೂ ನನ್ನ ಪ್ರೆಸ್ಸಿಗೆ ಬಂದಿದ್ದರು. ಪುಟ್ಟಯ್ಯ ಕಂಟ್ರಾಕ್ಟರ್, ನಂಜನಗೂಡಿನವರು, ಅವರಿಗೆ ಮಗಳಿದ್ದಾಳಂತೆ, ಸಸ್ಯಾಹಾರಿಯಂತೆ, ಹೋಗಿ ನೋಡಿಕೊಂಡು ಬರಬಾರದೆ? ನೀನು ಒಪ್ಪಿದರೆ ಮದುವೆಯಾಗಬಹುದು" ಎಂದರು. ಆ ಕೆಲಸವನ್ನು ಅವರಿಗೆ ಒಪ್ಪಿಸಿದೆ. ಅವರೇ ನನಗಾಗಿ ಹೆಣ್ಣು ನೋಡಿ ಬಂದರು. ಲಗ್ನ ಪತ್ರಿಕೆಯನ್ನೂ ಅವರೇ ಅಚ್ಚು ಮಾಡಿಸಿದರು. ನಂಜನಗೂಡಿನಲ್ಲಿ 1950ರಲ್ಲಿ ಜಯಲಕ್ಷ್ಮಿಯೊಡನೆ ನನ್ನ ಮದುವೆಯಾಯಿತು. ನನ್ನ ತಾಯಿಗೂ ಅವಳಿಗೂ ಬಹಳ ಹೊಂದಾಣಿಕೆ ಇದ್ದುದರಿಂದ ನನಗೆ ಕುಟುಂಬದಲ್ಲಿ ಸಂತೋಷವಾಗಿ ಕಾಲ ಕಳೆಯಲು ಅವಕಾಶವಾಯಿತು.

ಮಕ್ಕಳ ಫಲ ದೈವೇಚ್ಛೆ, ಆಗ ನನಗೆ ಮಕ್ಕಳಾಗಲಿಲ್ಲ ಎಂದು ತಾಯಿಯವರು ಬೇರೆ ಮದುವೆ ಮಾಡಿಕೊ ಎಂದರು ಒಲ್ಲೆ ಎಂದೆ. ಈಗ ನನಗೆ ಒಬ್ಬಳೇ ಮಗಳು, ಶಶಿಕಲಾ. 1972ರಲ್ಲಿ ನನ್ನ ತಾಯಿ ತೀರಿಕೊಂಡರು. ಅಂದು ಏಕಾದಶಿ, ನೂರಾರು ಜನ ಬಂದು ಶ್ರದ್ಧಾಂಜಲಿ ಅರ್ಪಿಸಿದರು. ಏನಾದರೂ ತೊಂದರೆ ಬಂದರೆ ತಾಯಿಯ ಸಲಹೆ ಕೇಳುತ್ತಿದ್ದೆ. ಈಗ ಯಾರನ್ನು ಕೇಳುವುದು ಎನಿಸಿತ್ತು. ನನ್ನ ಹೆಂಡತಿಗಂತೂ ಈ ದುಃಖವನ್ನು ಮರೆಯಲು ವರ್ಷವೇ ಆಯಿತು. ಆದರೆ ಪ್ರಪಂಚದಲ್ಲಿ ಯಾವುದೂ ಸ್ಥಿರವಲ್ಲವಾದ್ದರಿಂದ ಎಲ್ಲ ಮರೆಯಬೇಕು.

ಸಾಹಿತ್ಯ ರಚನೆ – ಸಾಹಿತಿ ಮಿತ್ರರು : ಮೊದಲಿಗೆ ಪರಿಚಯವಾದ ಸಾಹಿತಿ ಎಂದರೆ ತ.ರಾ.ಸು. ಅವರು ಸಿದ್ದವನಹಳ್ಳಿ ಕೃಷ್ಣಶರ್ಮರ ಮನೆಯಲ್ಲಿ ಇದ್ದರು. ಶರ್ಮರ ವಿಶ್ವಕರ್ನಾಟಕಕ್ಕೆ ಹಲವಾರು ಲೇಖನಗಳನ್ನು ಬರೆಯುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಸಂಬಂಧ ಬೆಳೆದದ್ದು ಶ್ರೀ ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾದ ಮೇಲೆ. ಪರಿಷತ್ತಿಗೆ ಆಜೀವ ಸದಸ್ಯನಾದೆ. ಗಾಂಧಿ ಸಾಹಿತ್ಯ ಸಂಘದ ಪರವಾಗಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನನ್ನನ್ನು ಆರಿಸಿಕೊಂಡರು. ಹೀಗಾಗಿ ಹೆಚ್ಚು ಕಡಮೆ ಎಲ್ಲ ಸಭೆಗಳಿಗೂ ಹೋಗುತ್ತಿದ್ದೆ, ಸಾಹಿತಿಗಳ ಹಾಗೂ ಹಲವಾರು ವಿದ್ವಾಂಸರ ಪರಿಚಯವಾದದ್ದು ಆಗಲೇ. ಕನ್ನಡದಲ್ಲಿ ಲೇಖನಗಳನ್ನು ಬರೆಯುವ ಹಂಬಲ ನನಗೆ ಮೊದಲಿಂದಲೂ ಇದ್ದದ್ದೆ, ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆಯುವ ಉಪನ್ಯಾಸಗಳ ಟಿಪ್ಪಣಿಗಳನ್ನು ಕೂಡ ಮಾಡಿಕೊಳ್ಳುತ್ತಿದ್ದೆ. ಅನೇಕ ಸಲ ಅವನ್ನು ಶರ್ಮಾಜಿ ಅವರಿಗೂ ತೋರಿಸಿದ್ದೆ. ಆದರೆ ಪ್ರಕಟಿಸುವ ಗೋಜಿಗೆ ಹೋಗಿರಲಿಲ್ಲ. ನಾನು ಕಾರ್ಯ ನಿಮಿತ್ತವಾಗಿ ಜರ್ಮನಿಗೆ ಹೋಗಿ ಬಂದ ಮೇಲೆ ಜರ್ಮನಿಯ ಅನುಭವಗಳನ್ನು ಕುರಿತು ಲೇಖನಗಳನ್ನು ಬರೆದು ತಾಯಿನಾಡು ಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ಕೊನೆಗೆ ಅದನ್ನು ಪುಸ್ತಕ ರೂಪದಲ್ಲಿ ಬರೆದೆ. ಶರ್ಮಾಜಿ ಅವರೇ ಅದನ್ನು ಗಾಂಧಿ ಸಾಹಿತ್ಯ ಸಂಘದಿಂದಲೇ ಪ್ರಕಟಿಸಿದರು. ಅದೇ "ನಾ ಕಂಡ ಜರ್ಮನಿ"ಯಾಗಿ ಹೊರಬಂದಿತು. ಈಗಾಗಲೇ ಎರಡು ಮುದ್ರಣಗಳನ್ನು ಕಂಡಿದೆ. ಪಿ.ಯು.ಸಿ. ಮೊದಲ ತರಗತಿಗೆ ಬೆಂಗಳೂರು ವಿಶ್ವವಿದ್ಯಾನಿಲಯದವರು ಅದನ್ನು ಪಠ್ಯ ಪುಸ್ತಕವಾಗಿ ಆಯ್ಕೆ ಮಾಡಿಕೊಂಡರು. ಈ ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನವೂ ಬಂದಿದೆ. ಶ್ರೀ ದೇ. ಜವರೇಗೌಡರ ಪರಿಚಯವಾದ ಮೇಲೆ ಅವರ ಸಲಹೆಯ ಮೇರೆಗೆ ಕನ್ನಡ ವಿಶ್ವಕೋಶಕ್ಕೆ ಇಂಜಿನೀರಿಂಗ್ ವಿಷಯಗಳನ್ನು ಕುರಿತು ಲೇಖನಗಳನ್ನು ಬರೆದೆ. ಆಕಾಶವಾಣಿಗಾಗಿ ಕೆಲವು ಭಾಷಣಗಳಿಗಾಗಿ ಕರೆ ಬಂದಾಗ ಹೋಗಿ ಮಾತನಾಡಿದೆ. ಗಾಂಧಿ ವಿಚಾರಗಳು, ಕಾರ್ಮಿಕರ ಸಮಸ್ಯೆಗಳನ್ನು ಕುರಿತು ಅಲ್ಲಿ ಮಾತನಾಡಿದ್ದೇನೆ. 'ಶ್ರೀಲಂಕಾ ಕುರಿತು ಬೆಂಗಳೂರು ವಿಶ್ವವಿದ್ಯಾನಿಲಯದವರು ನನ್ನ ಒಂದು ಪುಸ್ತಕ ಪ್ರಕಟಿಸಿದ್ದಾರೆ. ಪ್ರಕೃತಿ ಜೀವನ ಏಕೆ? ಹೇಗೆ ? ಎಂಬ ನಿಸರ್ಗ ಚಿಕಿತ್ಸೆಯನ್ನು ಪರಿಚಯಿಸುವ ಪುಸ್ತಕವನ್ನು ಹೊರ ತಂದಿದ್ದೇನೆ. ಪ್ರಕೃತಿ ಚಿಕಿತ್ಸಾಚಾರ್ಯ ಕೆ. ಲಕ್ಷಣಶರ್ಮರನ್ನು ಕುರಿತು ಒಂದು ಸಣ್ಣ ಪುಸ್ತಕವನ್ನು ಬರೆಯುವ ಸುಯೋಗ ನನ್ನದಾಯಿತು. ಅದೂ ಪ್ರಕಟವಾಗಿದೆ.

ಪ್ರಕೃತಿ ಜೀವನ ಕೇಂದ್ರ : ಎರಡನೆ ಬಾರಿ ಜರ್ಮನಿಗೆ ಹೋಗಿ ಬಂದ ಮೇಲೆ ಕರುಳು ಬೇನೆಯಿಂದ ನರಳಿದೆ. ಎಲ್ಲ ವೈದ್ಯರಿಗೂ ತೋರಿಸಿಯಾಯಿತು. ಏನೂ ಫಲ ದೊರೆಯಲಿಲ್ಲ. ಕೊನೆಗೆ ಎಸ್.ಎಸ್.ಶಾಸ್ತ್ರಿ ಎಂಬ ಪ್ರಕೃತಿ ಚಿಕಿತ್ಸಕರ ಪರಿಚಯವಾಗಿ ಅವರು ಹೇಳಿದಂತೆ ನಡೆದುಕೊಂಡೆ. ಚಿಕಿತ್ಸೆ ಸರಳ, ಖರ್ಚೂ ಕಡಿಮೆ. ಅವರೇ ವಾಸಿಮಾಡಿದರು. ಪ್ರಕೃತಿ ಚಿಕಿತ್ಸೆಯಲ್ಲಿ ನಂಬಿಕೆ ಬಂದಿತು. 1961–62 ರಲ್ಲಿ ಶ್ರೀ ಲಕ್ಷಣಶರ್ಮ, ಶ್ರೀ ಸ್ವಾಮಿನಾಥನ್ ಅವರುಗಳ ಭಾಷಣ ಕೇಳಿದ್ದೆ. ಮತ್ತಷ್ಟು ಆ ಬಗೆಗಿನ ಪುಸ್ತಕಗಳನ್ನು ಓದಿದೆ. ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ಗಾಂಧಿ ಸ್ಮಾರಕ ನಿಧಿ ಅವರ ಧನ ಸಹಾಯದಿಂದ ಗಾಂಧಿ ಸಾಹಿತ್ಯ ಸಂಘದಲ್ಲಿ ಪ್ರಕೃತಿ ಚಿಕಿತ್ಸಾ ತರಗತಿಗಳನ್ನು ಪ್ರಾರಂಭಿಸಿದೆ. ತರಗತಿಗಳು ಡಾ॥ ಶಾಮರಾವ್ ಚಿತ್ರಕಾರರ ನೆರವಿನಿಂದ ಯಶಸ್ವಿಯಾಗಿ ನಡೆಯಿತು. ಸಿದ್ದವನಹಳ್ಳಿ ಕೃಷ್ಣಶರ್ಮರ ಸಲಹೆಯ ಮೇರೆಗೆ 'ಪ್ರಕೃತಿ ಜೀವನ ಕೇಂದ್ರ' ಎಂಬ ಸಂಸ್ಥೆಯನ್ನು ಆರಂಭಿಸಿದೆವು. ಅಲ್ಲಿ ಈಗ ಆರೋಗ್ಯಶಾಸ್ತ್ರ ಕುರಿತ ಒಂದು ಪುಸ್ತಕ ಭಂಡಾರವಿದೆ. ಪ್ರಕೃತಿ ಜೀವನ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಕೇಂದ್ರ ಹೊರಡಿಸುತ್ತಿದೆ. ಆ ಪತ್ರಿಕೆಗೂ ಹಲವಾರು ಲೇಖನಗಳನ್ನು ನಾನು ಬರೆದಿದ್ದೇನೆ. ಪ್ರತಿ ನಿತ್ಯ ಅಲ್ಲಿ ರೋಗಿಗಳಿಗೆ ಉಚಿತ ಸಲಹೆ ಕೊಡಲಾಗುತ್ತಿದೆ. ಯೋಗಾಸನ ಹಾಗೂ ಪ್ರಕೃತಿ ಚಿಕಿತ್ಸಾ ತರಗತಿಗಳು ಪ್ರತಿ ವರ್ಷ ನಡೆಯುತ್ತಿವೆ. ಕೇಂದ್ರದ ಆಶ್ರಯದಲ್ಲಿ ಮೊಟ್ಟ ಮೊದಲಿಗೆ ದಕ್ಷಿಣ ಭಾರತ ಪ್ರಕೃತಿ ಚಿಕಿತ್ಸಾ ಸಮ್ಮೇಳನವು 1971ರಲ್ಲಿ ನಡೆಯಿತು.

ಮುಂದುವರಿಯುವುದು...

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026

ಸುಬ್ರಹ್ಮಣ್ಯನ್ ಚಂದ್ರಶೇಖರ್ (19.10.1910 – 21.08.1995)




ಭಾರತೀಯ ಮೂಲದ ಅಮೇರಿಕ ದೇಶದ ನೋಬೆಲ್ ಪ್ರಶಸ್ತಿ ವಿಜೇತ ಭೌತವಿಜ್ಞಾನಿ 'ಡಾ. ಚಂದ್ರ' ಅವರು ಲಾಹೋರ್‌ನಲ್ಲಿ ಜನಿಸಿದರು. ಮತ್ತು ಅಮೆರಿಕಾದ 'ವಿಲ್ಲಿಫೌಲರ್' ಜಂಟಿಯಾಗಿ 'ನೋಬೆಲ್ ಪ್ರಶಸ್ತಿ'ಯನ್ನು ಹಂಚಿಕೊಂಡರು. ವಿಶ್ವದ ಶ್ರೇಷ್ಠ ವಿಜ್ಞಾನ ಬರಹಗಾರ 'ಆರ್ಥರ್ ಮಿಲ್ಲರ್' ಹೇಳುವಂತೆ ಅವರೊಬ್ಬ 'ಖಭೌತ ವಿಜ್ಞಾನಿ'-'ನಕ್ಷತ್ರಲೋಕದ ಅನಭಿಷಕ್ತ ಚಕ್ರವರ್ತಿ'. ಗಣಿತದಲ್ಲಿ ಅಪಾರ ಪ್ರತಿಭೆ, ಮತ್ತು ಅದ್ಭುತ ನೆನೆಪಿನ ಶಕ್ತಿಯನ್ನು ಹೊಂದಿದ್ದ ಅವರು 1930ರ ಮೇನಲ್ಲಿ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ, 1931ರಲ್ಲಿ ಜರ್ಮನಿಯಲ್ಲಿ ವರ್ಗ ನಿಯಮ, ಕ್ವಾಂಟಮ್ ಮೆಕ್ಯಾನಿಕ್ಸ್ ಮತ್ತು ನಕ್ಷತ್ರಗಳ ಕುರಿತು ಅಧ್ಯಯನ ಮಾಡಿದರು. ಅಮೆರಿಕಾ ಸಂಯುಕ್ತ ಸಂಸ್ಥಾನದ ವಿಸ್ಕಾನ್ಸಿನ್‌ನಲ್ಲಿಯ 'ಯೆರ್ಕ್ಸ್ ಬಾಹ್ಯಾಕಾಶ ನಿರೀಕ್ಷಣಾಲಯ'ದಲ್ಲಿ ಸಂಶೋಧನಾ ಸಂಯೋಜಕರಾಗಿ ಸುಮಾರು 27 ವರ್ಷಗಳ ಕಾರ್ಯನಿರ್ವಹಿಸಿದರು. 1938–44ರವರೆಗೆ ನಕ್ಷತ್ರಗಳ ಚಲನಶಾಸ್ತ್ರ, ಚಲನಘರ್ಷಣೆಯ ಬಗ್ಗೆ ಸಂಶೋಧನ ನಡೆಸಿದರು. 1952–71ರವರೆಗೆ 'ಆಸ್ಟ್ರೋ ಫಿಸಿಕಲ್ ಜರ್ನಲ್'ನ ವ್ಯವಸ್ಥಾಪಕ ಸಂಪಾದಕರಾಗಿದ್ದರು. ಇವರಿಗೆ 'ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಡಿಎಸ್‌ಸಿ', 'ಇಂಗ್ಲೆಂಡ್'ನ ರಾಯಲ್ ಸೊಸೈಟಿಯ ಸದಸ್ಯತ್ವ, 'ಆಡಮ್ ಬಹುಮಾನ', 'ಬ್ರೂಸ್ ಪದಕ', 'ರಾಯಲ್ ಅಸ್ಟ್ರಾನಾಮಿಕಲ್ ಸೊಸೈಟಿಯ ಚಿನ್ನದ ಪದಕ', 'ಭಾರತ ಸರ್ಕಾರದ, 'ಪದ್ಮವಿಭೂಷಣ ಪ್ರಶಸ್ತಿ', 'ಶ್ವೇತಕುಬ್ಜಗಳನ್ನು ಕುರಿತ ಸಂಶೋಧನೆಗೆ ನೊಬೆಲ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಗೌರಿ ಲಂಕೇಶ್ (29.01.1962 – 05.09.2017)



ಪತ್ರಕರ್ತೆ – ಸಾಮಾಜಿಕ ಕಾರ್ಯಕರ್ತೆ ಗೌರಿ ಲಂಕೇಶ್ ಕವಿ, ಪತ್ರಕರ್ತ ಪಿ.ಲಂಕೇಶ್ ಮತ್ತು ಇಂದಿರಾ ದಂಪತಿಗಳಿಗೆ ಜನಿಸಿದರು. ದಿ ಟೈಮ್ಸ್ ಆಫ್ ಇಂಡಿಯಾದ ಪತ್ರಕರ್ತರಾಗಿ ಪ್ರಾರಂಭಿಸಿದ ಅವರು ನಂತರ ಸಂಡೇ ಪತ್ರಿಕೆಯ ವರದಿಗಾರರಾಗಿ 9 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಲಂಕೇಶರ ನಿಧನ ನಂತರ ಲಂಕೇಶ್ ಪತ್ರಿಕೆಯ ಸಂಪಾದಕರಾಗಿಯೂ, ಅವರು ಕಾರ್ಯ ನಿರ್ವಹಿಸಿದರು. ಅವರು ಸೂಫಿ ದೇವಾಲಯ ಬಾಬಾ ಬುಡನ್ ದರ್ಗಾವನ್ನು ಹಿಂದೂಗಳ ಗುರು ದತ್ತಾತ್ರೇಯ ಮಂದಿರವಾಗಿ ಮಾಡುವ, ಸಂಘ ಪರಿವಾರದ ಚಳುವಳಿಯನ್ನು ವಿರೋಧಿಸಿದರು. ತುಳಿತಕ್ಕೊಳಗಾದ ಸಮುದಾಯಗಳಿಗೆ ಕೋಮು ಸೌಹಾರ್ದ ವೇದಿಕೆಯ ಮುಂದಾಳತ್ವ ವಹಿಸಿ, ಜಾತಿ ಪದ್ಧತಿಯನ್ನು ಬಹಿರಂಗವಾಗಿ ಖಂಡಿಸುತ್ತಿದ್ದ ಗೌರಿ ಪತ್ರಿಕಾ ಸ್ವಾತಂತ್ರ್ಯವನ್ನು ಸಮರ್ಥಿಸುವುದಕ್ಕಾಗಿ ಹೆಸರುವಾಸಿಯಾಗಿದ್ದರು. ತುಳಿತಕ್ಕೊಳಗಾದ ಸಮುದಾಯಗಳಿಗೆ ಕೋಮು ಸೌಹಾರ್ದ ವೇದಿಕೆಯ ಮುಂತಾಳತ್ವ ವಹಿಸಿದ್ದರು. ರಾಜಕಾರಣಿಗಳ ತಪ್ಪುಗಳನ್ನು ನೇರವಾಗಿ ಖಂಡಿಸುತ್ತಿದ್ದರು. ನವೆಂಬರ್ 2014 ರಲ್ಲಿ ಕರ್ನಾಟಕ ಸರ್ಕಾರವು ಹಿಂಸೆಯನ್ನು ತ್ಯಜಿಸಿ ಶರಣಾಗುವಂತೆ ನಕ್ಸಲೀಯರ ಮನವೊಲಿಸುವ ಉದ್ದೇಶದಿಂದ ರಚಿಸಿದ ಸಮಿತಿಯ ಸದಸ್ಯರಾಗಿ ಗೌರಿ ಕಾರ್ಯನಿರ್ವಹಿಸಿದರು. ನಕ್ಸಲ್‌ರ ಪರ ಮೃದು ಧೋರಣೆಯೊಂದಿದ್ದರೆಂದು ಗೌರಿ ಅವರು ಹಲವು ಮೊಕದ್ದಮೆಗಳನ್ನು ಎದುರಿಸಬೇಕಾಯಿತು. ಅವರನ್ನು ಹತ್ಯೆಗೈದ ಅಪರಾಧ ತನಿಖೆ ಇನ್ನೂ ಪೂರ್ಣಗೊಂಡಿರುವುದಿಲ್ಲ.

ಸಸ್ತಿ ಚೌಧುರಿ (22.06.1922)



ರಂಗಪುರದ ಕಾರ್ಮೈಕಲ್ ಕಾಲೇಜಿನಿಂದ ವಿಜ್ಞಾನ ಪದವೀಧರರಾದ ಚೌದುರಿ 1949ರಲ್ಲಿ ಆರ್. ಜಿ. ಕಾರ್ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದರು. ನಂತರ ಸೂಕ್ಷ್ಮ ಜೀವವಿಜ್ಞಾನದಲ್ಲಿ ಪಿಎಚ್‌ಡಿ ಪಡೆಯಲು ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ತೆರಳಿದರು. ವಿದ್ಯಾಭ್ಯಾಸದ ಬಳಿಕ ಸಹಾಯಕರಾಗಿ ಸೆಂಟ್ರಲ್ ಫೋರೆನ್ಸಿಕ್ ಸೈನ್ಸ್ ಲ್ಯಾಬೋರೇಟರಿಯಲ್ಲಿ ಕಾರ್ಯ ನಿರ್ವಹಿಸಿದರು. ಅಪರಾಧ ತನಿಖೆಯಲ್ಲಿ ವಿಧಿ-ವಿಜ್ಞಾನ ಪರಿಣಿತರ ಪಾತ್ರ ಬಹಳ ದೊಡ್ಡದು. ಹಲವಾರು ಪ್ರಕರಣಗಳಿಗೆ ಕರಾರುವಕ್ಕಾಗಿ ವರದಿ ನೀಡುವ ಇವರ ಹುದ್ದೆ ತುಂಬಾ ಜವಾಬ್ದಾರಿಯಿಂದ ಕೂಡಿರುತ್ತದೆ. ಹೀಗೆ ಇದೇ ವೃತ್ತಿಯಲ್ಲಿ ಸಾಕಷ್ಟು ಅನುಭವ, ಪರಿಣಿತಿ ಹೊಂದಿರುವ ಮತ್ತು 50ರ ದಶಕದಿಂದ ಕ್ಲಿಷ್ಟ ಅಪರಾಧಗಳನ್ನು ಪರಿಹರಿಸುವಲ್ಲಿ ಸೈ ಎನಿಸಿಕೊಂಡಿದ್ದ ಫೋರೆನ್ಸಿಕ್ ವಿಜ್ಞಾನಿ ಸಸ್ತಿ ಚೌಧುರಿ ಅವರಾಗಿದ್ದಾರೆ. 1954ರಲ್ಲಿ ಕೋಲ್ಕತ್ತಾವನ್ನು ಬೆಚ್ಚಿಬೀಳಿಸಿದ ಬೆಲರಾಣಿ ಕೊಲೆ ಪ್ರಕರಣ, 1964ರಲ್ಲಿ ಮೊಘಲ್ಸರಾಯ್ ಬಳಿ ಆರ್‌ಎಸ್‌ಎಸ್ ನಾಯಕ ದೀನ್ ದಯಾಳ್ ಉಪಾಧ್ಯಾಯ ಅವರ ನಿಗೂಢ ಸಾವು ಮತ್ತು 1970ರಲ್ಲಿ ಸೈನ್ ಬಾರಿ ಹತ್ಯೆ ಪ್ರಕರಣ ಸೇರಿದಂತೆ ಹಲವಾರು ನಿಗೂಢ ಮತ್ತು ಸಂವೇದನಾಶೀಲ ಅಪರಾಧಗಳನ್ನು ಪರಿಹರಿಸುವಲ್ಲಿ ಹೆಸರು ಮಾಡಿದ್ದಾರೆ. 1968ರಲ್ಲಿ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಾಗಿ ನೇಮಕಗೊಂಡರು. ತಮ್ಮದೇ ಆದ ವೈಯಕ್ತಿಕ ಕೊಡುಗೆಯೊಂದಿಗೆ ವೃತ್ತಿಪರ ಜೀವನದಲ್ಲಿ ಮೈಲಿಗಲ್ಲು ಸಾಧಿಸಿರುವ ಫೋರೆನ್ಸಿಕ್ ವಿಜ್ಞಾನಿ ಸಸ್ತಿ ಚೌಧುರಿ ನೂರರ ಹರೆಯದಲ್ಲೂ ಸಾರ್ಥಕ ಬದುಕನ್ನು ನಡೆಸುತ್ತಿದ್ದಾರೆ.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049